بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ
WEEKLY **BADAR** QADIAN KANNADA

**ವರ್ಷ:** 02 | **ಸಂಚಿಕೆ:** 34

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**26 ಆಗಸ್ಟ್ 2021, 26 ಝುಹೂರ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 16 ಮುಹರ್ರಮ್ 1443 ಹಿಜರಿ ಖಮರಿ.**

### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

### ಅಲ್ಲಾಹನ ಉಪದೇಶ

اَفَلَا یَتُوْبُوْنَ اِلَی اللّٰهِ
وَیَسْتَغْفِرُوْنَهٗ ؕ
وَاللّٰهُ غَفُوْرٌ رَّحِیْمٌ ۝

(ಅಲ್‌ಮಾಇದ: 75)

**ಅಂದರೆ: ಅವರು ಇನ್ನು ಕೂಡ ಪಶ್ಚಾತ್ತಾಪಪಟ್ಟು ಅಲ್ಲಾಹನೆಡೆಗೆ ಮರಳಿ ಅವನೊಡನೆ ಪಾಪವಿಮುಕ್ತಿಗಾಗಿ ಯಾಚಿಸುವುದಿಲ್ಲವೇ? ಅಲ್ಲಾಹನು ಬಹಳವಾಗಿ ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ.**

### ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

#### ಸದಖಾ (ದಾನ) ಕ್ಕೆ ಪ್ರೋತ್ಸಾಹ ಮತ್ತು ಅದರ ಅನುಗ್ರಹಗಳು

(1416) ಹಝ್ರತ್ ಅಬೂ ಮಸ್‌ಊದ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನಮಗೆ ಸದಖಾ(ದಾನ) ಮಾಡಲು ಆಜ್ಞೆ ನೀಡುತ್ತಿದ್ದರೆ, ನಮ್ಮಲ್ಲಿ ಯಾರಾದರೂ ಪೇಟೆಗೆ ಹೋಗಿ ಅಲ್ಲಿ ಶ್ರಮಪಡುತ್ತಿದ್ದನು ಹೀಗೆ ಆತನು ಒಂದಿಷ್ಟು ಧಾನ್ಯ ಪಡೆಯುತ್ತಿದ್ದನು. ಆದರೆ ಇಂದು ಅವರ ಸ್ಥಿತಿ ಹೇಗಿದೆ ಎಂದರೆ ಅವರಲ್ಲಿ ಕೆಲವರ ಬಳಿ ಒಂದೊಂದು ಲಕ್ಷ ದೀನಾರುಗಳಿವೆ.

(1417) ಹಝ್ರತ್ ಅದೀ ಬಿನ್ ಹಾತಮ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ನಾನು ರಸೂಲುಲ್ಲಾಹ್(ಸ) ರವರಿಂದ ಆಲಿಸಿದ್ದೇನೆ. ಅವರು ಹೇಳುತ್ತಿದ್ದರು. ಖರ್ಜೂರದ ಒಂದು ಭಾಗವಾದರೂ ಕೊಟ್ಟು ನರಕದಿಂದ ಉಳಿಯಿರಿ.

(1418) ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ಅವರು ಹೇಳುತ್ತಿದ್ದರು. ಸ್ತ್ರೀಯೊಬ್ಬಳು ಬಂದಳು. ಅವಳ ಜೊತೆ ಇಬ್ಬರು ಹುಡುಗಿಯರಿದ್ದರು. ಆಕೆ ಬೇಡುತ್ತಿದ್ದಳು. ನನ್ನ ಬಳಿ ಅವಳು ಒಂದು ಖರ್ಜೂರದ ಹೊರತು ಏನೂ ಕಾಣಲಿಲ್ಲ. ನಾನು ಆ ಖರ್ಜೂರವೆ ಆಕೆಗೆ ಕೊಟ್ಟುಬಿಟ್ಟೆ. ಅವಳು ಆ ಖರ್ಜೂರವನ್ನು ಎರಡು ಭಾಗ ಮಾಡಿ ಇಬ್ಬರು ಹುಡುಗಿಯರಲ್ಲಿ ಹಂಚಿಬಿಟ್ಟಳು. ಸ್ವಯಂ ಏನೂ ತಿನ್ನಲಿಲ್ಲ. ಮತ್ತೆ ಅಲ್ಲಿಂದ ಎದ್ದು ಹೊರಗೆ ನಡೆದು ಹೋದಳು. ಪ್ರವಾದಿ(ಸ) ನಮ್ಮ ಬಳಿ ಬಂದಾಗ ಅವರಿಗೆ ನಾವು ಈ ಘಟನೆಯನ್ನು ಸಂಪೂರ್ಣವಾಗಿ ವಿವರಿಸಿದೆವು ಅದಕ್ಕೆ ನಬಿ(ಸ) ನುಡಿದರು. ಯಾರು ಈ ಪುತ್ರಿಯರ ಕಾರಣದಿಂದ ಸಂಕಷ್ಟವನ್ನು ಅನುಭವಿಸಿದರೆ ಅವರು ಆತನಿಗಾಗಿ ನರಕಾಗ್ನಿಗೆ ಅಡ್ಡಿ ಆಗುವರು. **(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಝ್ಝಕಾತ್ ಮುದ್ರಣ 2008 ಖಾದಿಯಾನ್)**

### ಯಾರು ಅಲ್ಲಾಹನೊಂದಿಗೆ ನಿಷ್ಠೆಯ ಸಂಬಂಧ ಹೊಂದಿರುವವನೋ, ಅವನು ಪೂರ್ವಿಕ ಸತ್ಯಸಂಧಕರ ರೀತಿ ಅನುಗ್ರಹಿತನಾಗುವನು.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

#### ತತ್ವಜ್ಞಾನಿಗಳ ಮೂಲವಾಗಿದೆ ಪವಿತ್ರ ಖುರ್‌ಆನ್

ಅಲ್ಲಾಹನು ಈ ಸಮುದಾಯಕ್ಕೆ ಸತ್ಯಜ್ಞಾನಗಳ ಮೂಲ ಸ್ತೋತ್ರವಾದ ಪವಿತ್ರ ಖುರ್‌ಆನ್ ನೀಡಿರುವನು. ಯಾವ ವ್ಯಕ್ತಿ ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾದ ಸತ್ಯ ಸಾಕ್ಷ್ಯಗಳ ಆಧ್ಯಾತ್ಮಿಕ ಜ್ಞಾನಗಳ ಅರಿವು ಪಡೆಯುವನೋ, ಮತ್ತು ಯಾವನು ನೈಜ ಭಯಭಕ್ತಿ ಹಾಗೂ ಅಲ್ಲಾಹನ ಭಯವನ್ನು ಹೊಂದುವನೋ, ಅವರಿಗೆ ಬನೀಈಸ್ರಾಯಿಲ್ ಪ್ರವಾದಿಗಳಿಗೆ ನೀಡಿದಂತಹ ಜ್ಞಾನ ನೀಡುವನು. ಹೌದು ಈ ಮಾತು ಅಪ್ಪಟ ಸತ್ಯವಾಗಿದೆ. ಯಾರು ತಮಗೆ ನೀಡಲ್ಪಟ್ಟ ಆಯುಧ ಬಳಸಿಕೊಳ್ಳುವುದಿಲ್ಲವೋ ಆ ದೋಷ ತಮ್ಮದೇ ಆಗಿರುವುದೇ ಹೊರತು ಆಯುಧದಲ್ಲ. ಇದೀಗ ಲೋಕದ ಅವಸ್ಥೆ ಅದೇ ಆಗಿದೆ. ಮುಸಲ್ಮಾನರು ಪವಿತ್ರ ಖುರ್‌ಆನ್‌ನಂತಹ ಅದ್ವಿತೀಯ ಅನುಗ್ರಹಿತ ಗ್ರಂಥ ಹೊಂದಿದಾಗಲೂ ಅದು ಮುಕ್ತಿಯನ್ನು ನೀಡುತ್ತದೆ ಮತ್ತು ಅಂಧಕಾರದಿಂದ ಹೊರ ತರುತ್ತದೆ. ಆದರೆ ಅಂತಹುದನ್ನು ಅವರು ಬಿಟ್ಟುಬಿಟ್ಟರು ಮತ್ತು ಅದರ ಪರಿಶುದ್ಧ ಶಿಕ್ಷಣವನ್ನು ಪರಿಗಣಿಸದೇ ಹೋದರು. ಅದರ ಪರಿಣಾಮವಾಗಿ ಇಸ್ಲಾಂ ಧರ್ಮದಿಂದ ದೂರವಾದರು. ಇದೀಗ ಯಥಾರ್ಥ ಇಸ್ಲಾಂ ಅವರ ಮುಂದೆ ಪ್ರಸ್ತುತಪಡಿಸಿದರೆ, ಅವರು ಅದರಿಂದ ಅಜ್ಞಾನಿಗಳಾದ ಕಾರಣ ಯಥಾರ್ಥ ಸತ್ಯವಿಶ್ವಾಸಿಗಳನ್ನು (ಮೋಮಿನ್) ಕಾಫಿರ್ (ಅಮುಸ್ಲಿಮ್) ಎನ್ನುತ್ತಾರೆ.

#### ಅಲ್ಲಾಹನ ಸ್ನೇಹಿತರಾಗ ಬಯಸುವಿರಾದರೆ ಅಲ್ಲಾಹನು ನೀಡಿದ ಗುಣಶಕ್ತಿಗಳಿಂದ ಕಾರ್ಯ ಮಾಡಿರಿ.

ಹಲವು ಜನರು ಐಶ್ವರ್ಯಭರಿತ ಹಾಗೂ ಆಡಂಭರದ ಜೀವನ ಕಳೆಯುವವರಾಗಿದ್ದಾರೆ. ಅವರು ಲೌಕಿಕತೆಯು ಮೇಲೆ ಗರ್ವಪಡುವವರು, ಲೌಕಿಕ ಗೌರವ ಮತ್ತು ಆಸ್ತಿಪಾಸ್ತಿ ಹಾಗೂ ಸಂಪತ್ತು ಬಯಸುವರು. ಅದೇ ಮೋಹದಲ್ಲಿ ಆಸೆ ಆಕಾಂಕ್ಷೆಗಳನ್ನು ಹೊಂದಿ ಅದನ್ನು ಪಡೆಯುವುದರಲ್ಲಿಯೇ ತಮ್ಮ ಆಯುಷ್ಯ ಕಳೆದುಕೊಳ್ಳುವರು. ಅವರ ಮೋಹ ಪರಕಾಷ್ಠೆಗೆ ತಲುಪಿದಾಗ ಮರಣದ ಸಂದೇಶ ಬಂದುಬಿಡುತ್ತದೆ. ಅವರಿಗೆ ಸಹ ಅಲ್ಲಾಹನು ಶಕ್ತಿ ಗುಣಗಳನ್ನು ನೀಡಿರಲಿಲ್ಲವೆ? ಆ ಶಕ್ತಿ ಗುಣಗಳಿಂದ ಅವರು ಕಾರ್ಯ ಮಾಡುವವರಾಗುತ್ತಿದ್ದರೆ ಸತ್ಯವನ್ನು ಪಡೆಯಬಹುದಾಗಿತ್ತು. ಅಲ್ಲಾಹನಂತೂ ಜಿಪುಣತನ ತೋರಲಿಲ್ಲ ಅಲ್ಲವೇ, ಆದರೆ ಸ್ವಯಂ ಅವರೇ ಆ ಶಕ್ತಿಗುಣಗಳಿಂದ ಕಾರ್ಯ ಕೈಗೊಳ್ಳಲಿಲ್ಲ ಇದು ಸ್ವಯಂ ಅವರ ದುರದೃಷ್ಟವಾಗಿದೆ. ಅವರು ನೀಡಿದ ಶಕ್ತಿಗುಣಗಳಿಂದ ಕಾರ್ಯ ಕೈಗೊಂಡವರೇ ಸಜ್ಜನರು, ಪುಣ್ಯವಂತರು. ಹಲವು ಜನರು ಹೀಗಿದ್ದಾರೆ. ಅವರಿಗೆ ಅಲ್ಲಾಹನನ್ನು ಭಯಪಡಲು ಮತ್ತು ಅವನ ಆಜ್ಞೆಯ ಮೇಲೆ ನಡೆಯಲು, ಹಾಗೂ ದುಷ್ಕರ್ಮಗಳಿಂದ ದೂರವಿರಲು ಹೇಳಿದಾಗ ಹೇಳುವರು. ನಮಗೇಕೆ ಅಲ್ಲಾಹನ ಸ್ನೇಹಿತನಾಗಬೇಕಾಗಿದೆ? ಈ ರೀತಿಯ ಹೇಳಿಕೆ ನನ್ನ ದೃಷ್ಟಿಯಲ್ಲಿ ಅವಿಶ್ವಾಸದ ಹೇಳಿಕೆಯಾಗಿದೆ. ಅಲ್ಲಾಹನ ಮೇಲೆ ಸಂಶಯ ಪಡಬೇಡಿರಿ. ಅಲ್ಲಾಹನ ಬಳಿ ಯಾವ ರೀತಿಯ ಕೊರತೆಯಿದೆ. ಅವನೇನು ಸರಕಾರದ ತರಹ ಪರಿಮಿತ ಹುದ್ದೆಗಳು ಹೊಂದಿದವನಲ್ಲ. ಬದಲು ಯಾರೇ ಆಗಲಿ ಅವನೊಂದಿಗೆ ನಿಷ್ಠೆಯ ಸಂಬಂಧ ಹೊಂದಿದವನಾದರೆ ಅವನು ಸಹ ಪೂರ್ವಿಕ ಸತ್ಯಸಂಧಕರ ಹಾಗೆ ಅನುಗ್ರಹಿತನಾಗುವನು.

**(ಮಲ್ಫೂಝಾತ್ ಸಂಪುಟ–1, ಪುಟ–318, ಮುದ್ರಣ 2018 ಖಾದಿಯಾನ್)**

### ಪ್ರವಾದಿಗಳು ಅಲ್ಲಾಹನ ಅನುಗ್ರಹದಿಂದ ಮುಗ್ದರಾಗಿರುತ್ತಾರೆ. ಮತ್ತೆ ಅವರು "ಇಗ್‌ಫಿರ್‌ಲಿ" ಹೇಳುವುದು ಯಾವ ಅರ್ಥಕ್ಕಾಗಿ? ಸತ್ಯವಿಶ್ವಾಸಿಯ ವಿಭಿನ್ನ ದರ್ಜೆಯ ಪ್ರಕಾರ "ಇಗ್‌ಫಿರ್‌ಲಿ" ವಿಭಿನ್ನ ಅರ್ಥ ಒಳಗೊಂಡಿರುತ್ತದೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಇಬ್ರಾಹಿಂ ವಚನ 42 **ರಬ್ಬನಗ್‌ಫಿರ್‌ಲಿ ವಲಿವಾಲಿದಯ್ಯ ವಲಿಲ್ ಮುಮಿನೀನ ಯೌಮ ಯಖೂಮುಲ್ ಹಿಸಾಬ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಪ್ರವಾದಿಗಳು ಅಲ್ಲಾಹನ ಅನುಗ್ರಹದಿಂದ ಮುಗ್ಧರಾಗಿರುತ್ತಾರೆ. ಮತ್ತೆ ಅವರು "ಇಗ್‌ಫಿರ್‌ಲಿ' ಹೇಳುವುದು ಯಾವ ಅರ್ಥಕ್ಕಾಗಿ. ವಾಸ್ತವದಲ್ಲಿ ಜ್ಞಾನವಿಲ್ಲದ ಮನುಷ್ಯನ ದೃಷ್ಟಿ ಸಂಕುಚಿತವಾಗಿರುತ್ತದೆ.

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ❁ شَرُّ السُّمُوْمِ عَدَاوَۃُ الصُّلَحَاءِ

## ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಅವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನ ನ್ಯಾಯವಂತನಾದವನೊಬ್ಬನು ಆಣೆ ಮಾಡಿ ಹೇಳಲಿ. ಮುಬಾಹಲ ನಂತರ ಅಬ್ದುಲ್ ಹಖ್‌ರವರ ಅಪಮಾನವಾಗಲಿಲ್ಲ ಎಂದು.

ಹಿಂದಿನ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಮೌಲ್ವಿ ಅಬ್ದುಲ್ ಹಖ್ ಗಝ್ನವಿ, ಅವರ ನಡುವೆ, ಅಮೃತ್ಸರದಲ್ಲಿ ಆದ ಮುಬಾಹಲಕ್ಕೆ ಸಂಬಂಧಿಸಿದ ವಿಷಯ ಪ್ರಕಟಗೊಂಡ ಪತ್ರಿಕೆಗಳ ಬಗ್ಗೆ ವಿವರಿಸಿದೆವು ಈ ಸಂಚಿಕೆಯಲ್ಲಿ ನಾವು ಮುಬಾಹಲದಿಂದ ವರದಿ ವಿವರಿಸುವೆವು. ಮುಬಾಹಲ 27 ಮೇ 1893 ರಂದು ಅಮೃತ್ಸರ ಮಜಿದ್ ಖಾನ್ ಬಹಾದೂರ್ ಶಾಹ್ ಸಮೀಪ ಈದ್‌ಗಾಹ್ ಮೈದಾನದಲ್ಲಿ ಆಯೋಜಿಸಲಾಗಿತ್ತು. ಇದು ಹಝುರತ್ ಮಸೀಹ್ ಮೌಊದ್(ಅ) ಡೆಪ್ಟಿ ಅಬ್ದುಲ್ಲ ಆಥಮನೊಂದಿಗೆ ಅಮೃತ್ಸರದಲ್ಲಿ ಇಸ್ಲಾಂ ಮತ್ತು ಕ್ರೈಸ್ತಧರ್ಮ ನಡುವೆ ಒಂದು ವೈಭವಪೂರ್ಣ ಧರ್ಮಯುದ್ಧ ಚರ್ಚಾಕೂಟ ರೂಪದಲ್ಲಿ ಏರ್ಪಡಿಸಲಾಗಿತ್ತು. ಅದೇ ತಾರೀಖು ಅದೇ ತಿಂಗಳು ಮತ್ತು ಅದೇ ವರ್ಷ ಇದನ್ನು ಏರ್ಪಡಿಸಲಾಗಿದೆ. 15 ದಿನಗಳವರೆಗೆ ನಿರಂತರವಾಗಿ ನಡೆದ ಮುಖದ್ದಸ್ ಜಂಗ್‌ನ ತಾರೀಖು 22 ಮೇ 1893 ರಿಂದ 5 ಜೂನ್ 1893 ರವರೆಗಿತ್ತು. ಈ ನೆಲೆಯಲ್ಲಿ 27 ಮೇ 1893 ಡೆಪ್ಟಿ ಅಬ್ದುಲ್ಲ ಆಥಮ್‌ನೊಂದಿಗೆ ಚರ್ಚೆಯ ಆರನೇ ದಿನವಾಗಿತ್ತು. ಅದೇ ದಿನ ಬಿಡುವು ಪಡೆದು ಅವರು ಅಬ್ದುಲ್ ಹಖ್‌ನೊಂದಿಗೆ ಮುಬಾಹಲವೂ ಮಾಡಿದರು.

ಓದುಗರೇ! ಯೋಚನೆಯ ವಿಷಯವಾಗಿದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅನುಗ್ರಹಿತ ಶಕ್ತಿ, ಇಸ್ಲಾಂ ಧರ್ಮದ ಪುನಶ್ಚೇತನಕ್ಕಾಗಿ ಅವರು ತನ್ನ ಒಂದು ಕ್ಷಣವು ಮುಡಿಪಾಗಿಟ್ಟಿದ್ದರು. ಅಲ್ಲಾಹನು ಅವರ(ಅ) ಕುರಿತು ಎಷ್ಟೊಂದು ಚೆನ್ನಾಗಿ ಹೇಳಿರುವನು. ಅನ್‌ತಶೈಖಿಲ್ ಮಸೀಹಲ್ಲಝಿ ಲಾ ಯುಝಾಅವು ವಖ್ತುಹಲ (ತಝ್ಕಿರಹ್, ಪುಟ–318, ಮುದ್ರಣ ಖಾದಿಯಾನ್ 2006) ಅಂದರೆ ಓ ಸಜ್ಜನನಾದ ಮಸೀಹನೇ ನಿನ್ನ ಸಮಯ ವ್ಯರ್ಥಗೊಳಿಸಲಾರರು. ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳಿದರು. ನನ್ನ ಅವಸ್ಥೆ ಹೇಗಿದೆ ಎಂದರೆ ನನ್ನ ಮೂತ್ರ ಬಹಿರ್ದೆಸೆಗಾಗಿ ಸಮಯದ ಮೇಲೂ ನನಗೆ ವ್ಯಥೆ ಉಂಟಾಗುತ್ತದೆ. ಇದುವು ಸಹ ಧರ್ಮಕಾರ್ಯದಲ್ಲಿ ವ್ಯಯವಾಗುವುದಿದ್ದರೆ ಒಳ್ಳೆಯದಾಗಿತ್ತು. ಯಾವುದೇ ಅವಶ್ಯ ಧರ್ಮಕಾರ್ಯ ಬಂದೊದಗಿದಾಗ ನಾನು ನನ್ನ ಮೇಲೆ ಊಟಪಾಠ ಮತ್ತು ನಿದ್ರಿಸುವುದನ್ನು ಸಹ ಹರಾಮ್ (ನಿಷಿದ್ಧ) ಎಂದು ಭಾವಿಸುತ್ತೇನೆ. ಆ ಕೆಲಸ ಆಗುವವರೆಗೆ ನನಗೆ ನೆಮ್ಮದಿ ದೊರೆಯುವುದಿಲ್ಲ. ನಾವು ಧರ್ಮಕ್ಕಾಗಿ ಮತ್ತು ಧರ್ಮಗೋಸ್ಕರ ಬದುಕುತ್ತಿದ್ದೇವೆ. ಆದುದರಿಂದ ಧರ್ಮಕಾರ್ಯಗಳಲ್ಲಿ ಯಾವುದೇ ತಡೆ ಉಂಟಾಗಬಾರದು. (ಮಲ್ಫೂಝಾತ್, ಸಂಪುಟ–1, ಪುಟ–422)

**ಮೌಲ್ವಿ ಅಬ್ದುಲ್ ಹಖ್ ಗಝ್ನವಿಯೊಂದಿಗೆ ಮುಬಾಹಲ ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರ ಮುಬಾಹಲದಿಂದ ಪಲಾಯನ.**

ಮುಬಾಹಲದ ವರದಿ: ನಾವು ಮು. ಮೌಲಾನ ಶೇಖ್ ಅಬ್ದುಲ್ ಖಾದರ್ ಸಾಹಿಬ್ ದಿವಂಗತರು (ಮಾಜಿ ಸೌದಾಗರಮಲ್) ರವರ ಗ್ರಂಥ "ಹಯಾತೆ ತಯ್ಯಬಾ" ದಿಂದ ಪ್ರಸ್ತುತಪಡಿಸುತ್ತಿದ್ದೇವೆ. ಅವರು ಬರೆಯುತ್ತಾರೆ.

"ಚರ್ಚೆಯ ನಂತರ ಮೌಲ್ವಿಗಳು ಬೊಬ್ಬೆ ಹಾಕಲು ಪ್ರಾರಂಭಿಸಿದರು. ಕ್ರೈಸ್ತರ ಜೊತೆ ಚರ್ಚೆ ಆಗಿದೆ. ಇದೀಗ ನಮ್ಮ ಜೊತೆ ಚರ್ಚೆಗೆ(1) ಬನ್ನಿ ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಸಾಹಿಬರು ಸಹ ಒಂದು ಜಾಹೀರಾತು ಲಾಹೋರಿನಿಂದ ಹೊರಡಿಸಿದರು. ನಾನು ಮಿರ್ಝಾ ಸಾಹಿಬರೊಂದಿಗೆ ಮುಬಾಹಲ ಮಾಡಲು ಅಮೃತ್ಸರಕ್ಕೆ ಬರುತ್ತಿದ್ದೇನೆ. ಕೇವಲ ಮುಬಾಹಲ ಆಗುವುದು. ಯಾವುದೇ ಭಾಷಣ ಆಗಲಿಕ್ಕಿಲ್ಲ. ಹಝುರತ್ ಸಾಹಿಬ್ ಅದಕ್ಕೆ ಉತ್ತರವಾಗಿ ಒಂದು ಜಾಹೀರಾತು ಬರೆದರು. ಮೌಲ್ವಿ ಮುಹಮ್ಮದ್ ಹುಸೇನ್ ನನ್ನೊಂದಿಗೆ ಮುಬಾಹಲ ಮಾಡಲಾರರು. ಅಲ್ಲದೇ ನನ್ನ ಮುಂದೆಯೂ ಸಹ ಬರಲಾರರು. ಮರುದಿನ ಮೌಲ್ವಿ ಅಬ್ದುಲ್ ಹಖ್ ಗಝ್ನವಿಯೊಂದಿಗೆ ಮುಬಾಹಲದ ದಿನವಾಗಿತ್ತು. ಅಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಸಹ ಅಮೃತ್ಸರ ತಲುಪಿದರು. ಈದ್ಗಾದಲ್ಲಿ ಜನಜಂಗುಳಿ ಸೇರಿದವು. ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಸಹ ಈ ಜನಸಂದಣಿಯಿಂದ ಅತಿ ದೂರದಲ್ಲಿ ನಿಂತು ಏನೋ ಭಾಷಣ ಮಾಡತೊಡಗಿದರು. ಭಾಷಣ ಮಾಡಿದ ನಂತರ ಮೌಲ್ವಿ ಸಾಹಿಬ್ ಭಾಷಣ ಮಾಡುವರು ಎಂಬ ಭರವಸೆಯಿತ್ತು. ಮಿರ್ಝಾ ಸಾಹಿಬ್ ಬರೆದಾಗಿತ್ತು. ಅವರು ನನ್ನ ಮುಂದೆ ಮುಬಾಹಲಕ್ಕೆ ಬರಲಾರರು ಎಂದು, ಆದರೆ ಅವರು ಬಂದಿದ್ದರು. ಅವರು ಅರ್ಧ ಮುಕ್ಕಾಲು ಗಂಟೆ ಭಾಷಣದಲ್ಲಿ ಕಳೆದಾಗ ಮೌಲ್ವಿ ಅಬ್ದುಲ್ ಹಖ್, ಗಝ್ನವಿಯರ ಶಿಷ್ಯಂದಿರು, ಗಝ್ನವಿ ಮೌಲ್ವಿಗಳ ಸಲಹೆಗಳ ಮೇರೆಗೆ ಮುಬಾಹಲಕ್ಕಾಗಿ ಮುಂದಾದರು.

ಈ ಮುಬಾಹಲದಲ್ಲಿ ಮೌಲ್ವಿ ಅಬ್ದುಲ್ ಹಖ್ ತನ್ನ ಬಗ್ಗೆ ಅಂತೂ ಯಾವ ಪದ ಸಹ ನಾಲಿಗೆಯಿಂದ ಹೊರಡಿಸಿಲ್ಲ. ಆದರೆ ಹಝ್ರತ್ ಅಖದಸ್‌ರವರ ಕುರಿತು ಕಠಿಣವಾದ ಶಬ್ದಗಳನ್ನು ಪ್ರಯೋಗಿಸಿದರು. ಬಯ್ದಾಟ ಮಾಡಿದರು. ಕೆಟ್ಟ ಪದಗಳ ಬಳಕೆಯಿಂದ ತಮ್ಮ ನಾಲಿಗೆ ಚಾಚುವುದರಲ್ಲಿ ಯಾವ ಕೊರತೆಯು ಮಾಡಲಿಲ್ಲ. ಅದರ ಉತ್ತರವಾಗಿ ಹಝ್ರತ್ ಅಖದಸ್ ಕೇವಲ ಈ ಕೆಳಕಂಡ ಪದಗಳನ್ನು ಉಚ್ಚರಿಸಿದರು. "ನಾನು ಹೀಗೆ ಪ್ರಾರ್ಥಿಸುವೆನು. ಇಷ್ಟೆಲ್ಲ ನನ್ನ ಗ್ರಂಥಗಳಿವೆ. ಅವುಗಳಲ್ಲಿ ಯಾವುದೆ ಆಗಲಿ ಅಲ್ಲಾಹ್ ಮತ್ತು ಅವನ ಪ್ರವಾದಿ(ಸ) ರವರ ಆಜ್ಞೆಗಳಿಗೆ ವಿರುದ್ಧವಾಗಿಲ್ಲ. ಅಲ್ಲದೇ ನಾನು ಕಾಫಿರ್ (ಅವಿಶ್ವಾಸಿ) ಅಲ್ಲ, ನನ್ನ ಗ್ರಂಥಗಳು ಅಲ್ಲಾಹ್ ಮತ್ತು ಅವನ ಪ್ರವಾದಿ(ಸ) ರ ಆಜ್ಞೆಗಳಿಗೆ ವಿರುದ್ಧವಾಗಿದ್ದರೆ ಮತ್ತು ಅವಿಶ್ವಾಸದಿಂದ ತುಂಬಿದ್ದಾಗಿದ್ದರೆ ಅಲ್ಲಾಹನು ಅದರ ಶಾಪ ಮತ್ತು ಶಿಕ್ಷೆ ನನ್ನ ಮೇಲೆ ಅವತರಿಸು. ಅದು ಲೋಕಸೃಷ್ಟಿಯಿಂದ ಇಲ್ಲಿಯವರೆಗೆ ಯಾವ ಕಾಫಿರ್ (ಅವಿಶ್ವಾಸಿ) ದುಷ್ಟನ ಮೇಲೆ ಆಗದ ರೀತಿಯಲ್ಲಿ ನನ್ನ ಮೇಲೆ ಆಗಲಿ, ನೀವು ಎಲ್ಲರೂ ಸೇರಿ ಆಮೀನ್ ಎಂದು ಹೇಳಿರಿ. ಏಕೆಂದರೆ ನಾನು ಕಾಫಿರ್ ಆಗಿದ್ದರೆ, ನವೂಝ್ ಬಿಲ್ಲಾಹ್ ಇಸ್ಲಾಂ ಧರ್ಮದಿಂದ ಬೇರ್ಪಟ್ಟವನಾದರೆ, ಇಂತಹ ಜೀವನದಿಂದ ನಾನು ಸಾವಿರ ಹೃದಯದಿಂದಲೂ ಬೇಜಾರಾಗಿರುತ್ತೇವೆ. ಹೀಗೆ ಅಲ್ಲವಾಗಿದ್ದಲ್ಲಿ ಅಲ್ಲಾಹನು ತನ್ನ ಕಡೆಯಿಂದ ಸತ್ಯವಾದ ತೀರ್ಪು ನೀಡುವನು. ಅವನು ನನ್ನ ಹೃದಯದ ಅಂತರಾಳವನ್ನು ನೋಡುತ್ತಿದ್ದಾನೆ ಮತ್ತು ವಿರೋಧಿಗಳ ಮನದಾಳವು ಸಹ. ನೋಡುಗರು ಹೇಳುತ್ತಾರೆ. ಹುಝೂರ್ ಈ ಪದಗಳನ್ನು ಉಚ್ಚರಿಸುತ್ತಿರುವಾಗ ಒಂದು ವಿಚಿತ್ರವಾದ ದೃಶ್ಯ ಕಂಡುಬರುತಿತ್ತು.

ಜನರ ಮನದಾಳದಿಂದ ಆಕಸ್ಮಾತ್ತಾಗಿ ಚೀತ್ಕಾರ ಏಳುತ್ತಿದ್ದವು.

**ಹಾಫಿಝ್ ಮುಹಮ್ಮದ್ ಯಾಖೂಬ್ ಸಾಹಿಬರ ಬೈಅತ್**

ಹಝ್ರತ್ ಅಖ್‌ದಸ್ ಇನ್ನೂ ಪ್ರಾರ್ಥನೆ ಮುಗಿಸಿರಲಿಲ್ಲ. ಹಾಫಿಝ್ ಮುಹಮ್ಮದ್ ಯಾಖೂಬ್ ಸಾಹಿಬ್ ಅವರು ಹಾಫೀಝ್ ಮುಹಮ್ಮದ್ ಯೂಸೂಫ್(2) ಮತ್ತು ಸಾಹಿಬ್ ಜಿಲ್ಲಾದಾರ್ ನೆಹರ್ ಅವರ ಹಿರಿಯ ಸಹೋದರರಾಗಿದ್ದರು ಮತ್ತು ಗಝ್ನವಿಯರ ಶಿಷ್ಯರಾಗಿದ್ದರು. ಒಂದು ಚೀತ್ಕಾರದೊಂದಿಗೆ ಅಳುತ್ತಾ ಹಝುರತ್ ಅಖದಸ್‌ರವರ ಪಾದಗಳಲ್ಲಿ ಬಂದು ಬಿದ್ದರು ಮತ್ತು ಹೇಳಿದರು. ನನ್ನ ಬೈಅತ್ ಸ್ವೀಕರಿಸಿರಿ. ಹಝುರತ್ ಅಖ್‌ದಸ್ ಹೇಳಿದರು. ಮುಬಾಹಲ ಪೂರ್ಣಗೊಂಡ ನಂತರ ಬೈಅತ್ ಪಡೆಯುವೆನು. ಈ ದೃಶ್ಯ ಕಂಡು ಗಝ್ನವಿ ಮೌಲ್ವಿಗಳು ಮತ್ತು ಶಿಷ್ಯಂದಿರು ತಬ್ಬಿಬ್ಬಾದರು. ಏಕೆಂದರೆ ಅವರಿಗೆ ಮನವರಿಕೆಯಾಗಿಬಿಟ್ಟಿತು. ಇದು ಮುಬಾಹಲ ಪರಿಣಾಮವಾಗಿ ಹಜ್‌ರತ್ ಅಖ್‌ದಸ್ ಅವರಿಗೆ ದೊರೆತ ಮೊದಲ ವಿಜಯವಾಗಿದೆ. ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಎಲ್ಲಿ ಹೋಗಿ ಅಡಗಿಬಿಟ್ಟಿದ್ದರೂ ಅಲ್ಲಾಹನೇ ಬಲ್ಲವನು ಆಗ ಜನರಿಗೆ ನಿಶ್ಚಯವಾಯಿತು. ಹಝ್ರತ್ ಮಿರ್ಝಾ ಸಾಹಿಬ್ ಹೇಳಿದಂತೆಯೇ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ನನ್ನ ಎದುರಾಗಿ ಬರಲಾರರು ಎಂಬ ಮಾತು ಸತ್ಯಗೊಂಡಿತ್ತು. ಅಂತೂ ಹೀಗೆ ಮುಬಾಹಲ ಅಂತ್ಯಗೊಂಡಿತು. ಹಜ್‌ರತ್ ಅಖದಸ್ ಮರಳಿ ಮನೆಗೆ ಬಂದರು. (ಹಯಾತೆ ತಯ್ಯಬಾ ಲೇಖಕರು ಶೇಖ್ ಅಬ್ದುಲ್ ಖಾದರ್ ದಿವಂಗತರು, ಮಾಜಿ ಸೌದಾಗರ್‌ಮಲ್ ಪುಟ 156)

**ಅಮೃತ್ಸರ ಮೌಲ್ವಿ ಮಸ್ಜಿದ್ ಮುಹಮ್ಮದ್ ಜಾನ್‌ನ ಕೆಳಗಿನ ಕೋಣೆಯಲ್ಲಿ ಅಡಗಿ**

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

(1) ಚರ್ಚೆ ಎಂದರೆ ಅಮೃತ್ಸರದ ಚರ್ಚಾಕೂಟ ಎಂದಾಗಿದೆ. ನಾವು ವಿವರಿಸಿ ಆಗಿದೆ. 27 ಮೇ 1893 ರ ದಿನ ಆಥಮರವರ ಚರ್ಚೆಯ ಆರನೆಯ ದಿನವಾಗಿತ್ತು. ಅದೇ ದಿನ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಅಬ್ದುಲ್ ಹಖ್‌ನೊಂದಿಗೆ ಮುಬಾಹಲ ಸಹ ಮಾಡಿದ್ದರು. ಅಮೃತ್ಸರದಲ್ಲಿ ಹಝ್ರತ್ ಶೇಖ್ ನೂರ್ ಅಹ್ಮದ್ ಸಾಹಿಬ್ ಮತ್ತು ಹಝ್ರತ್ ಮಿಸ್ತ್ರೀ ಖುತುಬ್ ದೀನ್ ಸಾಹಿಬ್‌ರವರು ಮೊದಲೇ ಅಹ್ಮದಿಯಾಗಿದ್ದರು. ಈಗ ಚರ್ಚೆಗಳ ನಡುವೆ ಹಝ್ರತ್ ಮಿಯಾಂ ನಬಿ ಬಕ್ಷ್ ಸಾಹಿಬ್ ರಫೂಗರ್ ಮತ್ತು ಹಝ್ರತ್ ಖಾಝಿ ಅಮೀರ್ ಹುಸೇನ್ ಸಾಹಿಬ್ ಭೈರವಿ ಅವರು ಸಹ ಬೈಅತ್ ಆದರು. ಹಝ್ರತ್ ಖಾಝಿ ಸಾಹಿಬ್ ಅತ್ಯಂತ ಪರಿಶುದ್ಧರು ಮತ್ತು ನಿಸ್ವಾರ್ಥ ಮನುಷ್ಯರಾಗಿದ್ದರು ಮತ್ತು ಇಸ್ಲಾಮಿನ ಮದರಸದಲ್ಲಿ ಶಿಕ್ಷಕರಾಗಿದ್ದರು. ಅಂದ ಹಾಗೆ ಅವರು ಹದೀಸುಗಳ ಓರ್ವ ತಜ್ಞ ಮೌಲ್ವಿಗಳಾಗಿದ್ದರು. ಆದುದರಿಂದ ಅವರು ಬೈತ್ ಆದ ಮೇಲೆ ತುಂಬಾ ಕೋಲಾಹಲ ಉಂಟಾಯಿತು. ಎಲ್ಲಾ ಓಣಿಗಳಲ್ಲಿ ಹಝ್ರತ್ ಅಖದಸ್ ಅವರ ವಿರುದ್ಧ ವಿಷ ಕಾರಲು ಪ್ರಾರಂಭಿಸಿದರು. ಮತ್ತು ಯಾವ ವ್ಯಕ್ತಿಯು ಮಿರ್ಝಾ ಸಾಹಿಬರ ಉಪದೇಶಗಳನ್ನು ಆಲಿಸದಂತೆ ತಾಕೀತುಪಡಿಸುತ್ತಿದ್ದರು. ಅವರ ಉಪದೇಶಗಳನ್ನು ಆಲಿಸಿದರೆ ಅವರ ಬೇಟೆಗೆ ಗುತ್ತಾಗುವಿರಿ ಎಂದು ಹೆದರಿಸುತ್ತಿದ್ದರು ಮತ್ತು ಹಜ್‌ರತ್(ಅ) ರವರ ಸೇವೆಯಲ್ಲಿ ಇತರ ಜನರ ಮಾಧ್ಯಮದಿಂದ ಸಂದೇಶಗಳನ್ನು ಕಳುಹಿಸುತ್ತಿದ್ದರು. ನಮ್ಮ ಜೊತೆಯಲ್ಲಿ ಚರ್ಚಿಸಲಿ ಎಂದು. ಹುಝೂರ್(ಅ) ಹೇಳಿದರು. ಮೊದಲು ಕ್ರೈಸ್ತರೊಂದಿಗಿನ ಚರ್ಚೆ ಮುಕ್ತಾಯಗೊಳ್ಳಲಿ. ಮತ್ತೆ ಇನ್‌ಶಾಅಲ್ಲಾಹ್ ನಿಮ್ಮ ಜೊತೆಯಲ್ಲೂ ಚರ್ಚಿಸುವೆ. (ಹಯಾತೆ ತಯ್ಯಬಾ ಪುಟ 156)

(2) ಹಾಫಿಝ್ ಮುಹಮ್ಮದ್ ಯೂಸೂಫ್ ಜಿಲ್ಲದಾರ್ ನಹರ್ ವ್ಯಕ್ತಿಯು ಅವರನ್ನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥ "ತೊಹಫ ಗೋಲ್ಡವಿಯಾ" ದ ಪ್ರಾರಂಭದಲ್ಲಿಯೇ ಐದು ನೂರು ರೂಪಾಯಿಗಳ ಬಹುಮಾನದ ಪಂಥ್ವಾನ ನೀಡಿದವರಾಗಿದ್ದರು ಆ ವ್ಯಕ್ತಿ ಲಾಹೋರಿನಲ್ಲಿ ಕೆಲ ಅಹ್ಮದಿಗಳ ಸಮಕ್ಷಮದಲ್ಲಿ ಒತ್ತಾಯಪೂರ್ವಕವಾಗಿ ಈ ದಾವೆ ಮುಂದಿಟ್ಟಿದ್ದನು. ಯಾರಾದರೊಬ್ಬರು ನಬಿಯಾಗುವ ಸುಳ್ಳು ದಾವೆ ಮಾಡಿದರೆ ಅವನು ಈ ದಾವೆಯೊಂದಿಗೆ 23 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚು ಸಮಯ ಜೀವಂತರಾಗಿರಬಹುದು. ಅದಾಗ್ಯೂ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರ ಸತ್ಯಸಾಕ್ಷ್ಯಕ್ಕಾಗಿ ಹೇಳುವುದೇನೆಂದರೆ ಹಝ್ರತ್ ರಸೂಲುಲ್ಲಾಹ್(ಸ) ಸುಳ್ಳು ದಾವೆ ಮಾಡಿದರೆ ನಾವು ಅವರನ್ನು ನಾಶಪಡಿಸುವೆನು. ಆದರೆ ಅವರು ಸತ್ಯವಂತರಾಗಿದ್ದ ಕಾರಣ ಅವರ ದಾವೆಯ ನಂತರ 23 ವರ್ಷಗಳ ಜೀವನ ದಯಪಾಲಿಸಿದನು. ಅಂದ ಹಾಗೆ ಯಾವನೇ ಸುಳ್ಳು ಪ್ರವಾದಿಗೆ ಅವನ ದಾವೆಯ ನಂತರ 23 ವರ್ಷಗಳ ಜೀವನ ದೊರಕುವುದಿಲ್ಲ. ಅಂದ ಹಾಗೆ ಹಾಫಿಝ್ ಮುಹಮ್ಮದ್ ಯೂಸೂಫ್ ಜಿಲ್ಲದಾರ್ ನಹರ ಅವರ ವಾದದನ್ವಯ 23 ವರ್ಷಗಳ ಜೀವನ ದೊರೆಯಬಹುದಾಗಿದೆ. ಅದರ ಉದಾಹರಣೆ ತೋರಿಸುವ ವಾದವು ಮಾಡುತ್ತಿದ್ದಾರೆ. ಆಗ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಕೇವಲ ಹಾಫಿಝ್ ಮುಹಮ್ಮದ್ ಹಾಫಿಝ್ ಜಿಲ್ಲದಾರ್ ನಹರ್‌ರವರಿಗೆ ಮಾತ್ರವಲ್ಲ. ಬದಲಿಗೆ ಭಾರತದ ಎಲ್ಲಾ ಶೇಖುಗಳಿಗೆ ಮತ್ತು ದರ್ಗಾ ಪೀಠಾದಿಪತಿಗಳಿಗೆ, ಮತಪಂಡಿತರಿಗೆ, ಸಜ್ಜನ ಪುರುಷರಿಗೆ ಪಂಥ್ವಾನ ನೀಡಿದರು. ಯಾರಾದರೂ ಸರಿ ಇಂತಹ ಉದಾಹರಣೆ ಪ್ರಸ್ತುತಪಡಿಸಿದರೆ ನಿಮಗೆ ಐದು ನೂರು ರೂಪಾಯಿಗಳ ನಗದು ಬಹುಮಾನ ನೀಡುವೆವು ಎಂದರು.

# ಖುತ್‌ಬ ಜುಮುಅ

**ಹಿಜರೀ 14ರಲ್ಲಿ ಮುಸ್ಲಿಮರು ಮತ್ತು ಇರಾನಿಯರ ನಡುವೆ ನಿರ್ಣಾಯಕ ಯುದ್ಧವಾದ ಖಾದಿಸಿಯ ನಡೆಯಿತು. ಅದರ ಪರಿಣಾಮವಾಗಿ ಇರಾನಿನ ಆಡಳಿತ ಮುಸ್ಲಿಮರ ವಶದಲ್ಲಿ ಬಂತು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅಲ್ಲಾಹನು ಕೆಡುಕನ್ನು ಕೆಡುಕಿನಿಂದ ಅಳಿಸುವುದಿಲ್ಲ. ಕೆಡುಕನ್ನು ಒಳಿತಿನಿಂದ ಅಳಿಸುತ್ತಾನೆ. ಅಲ್ಲಾಹನ ಮತ್ತು ದಾಸರ ನಡುವೆ ಅನುಸರಣೆ ಅಲ್ಲದೆ ಬೇರೆ ಸಂಬಂಧವಿಲ್ಲ. ನೀನು ಬಹಳ ಕಷ್ಟದಾಯಕ ಮತ್ತು ಕಠಿನವಾದ ಕೆಲಸವನ್ನು ಎತ್ತಿದ್ದೀಯ. ಆದ್ದರಿಂದ ನಿನ್ನ ಆತ್ಮಕ್ಕೂ ನಿನ್ನ ಸಹಚರರಿಗೂ ಸತ್ಕರ್ಮಗಳ ಅಭ್ಯಾಸವನ್ನು ಮಾಡಿಸು. ಅದರ ಮೂಲಕ ವಿಜಯವನ್ನು ಬಯಸು. ನೆನಪಿಡು. ಪ್ರತಿಯೊಂದು ಅಭ್ಯಾಸವನ್ನು ರೂಢಿಸಲು ಒಂದು ಮಾರ್ಗವಿರುತ್ತದೆ. ಸತ್ಕರ್ಮಗಳ ಅಭ್ಯಾಸವನ್ನು ಉಂಟುಮಾಡಲು ಇರುವ ಮಾರ್ಗ ಸಹನೆಯಾಗಿದೆ. ಸಹನೆ ಕೈಗೊಂಡನೆ ಸತ್ಕರ್ಮದ ಅಭ್ಯಾಸ ಉಂಟಾಗುವುದು. ಆದ್ದರಿಂದ ವಿಪತ್ತು ಮತ್ತು ಕಷ್ಟತೆಗಳು ಬರುವಾಗಲೆಲ್ಲ ಸಹನೆ ಕೈಗೊಳ್ಳು. ಇದರಿಂದ ಅಲ್ಲಾಹನ ಮೇಲಿನ ಭಯಭಕ್ತಿ ನಿನಗೆ ಲಭಿಸುವುದು. (ಹಝ್ರತ್ ಉಮರ್(ರ))**

**ಬುವೈಬ್ ಹಾಗೂ ಖಾದಸೀಯ ಯುದ್ಧಗಳಲ್ಲಿ ಸಂಭವಿಸಿದ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

**ಮುಸ್ಲಿಮರಲ್ಲಿ ಈ ಮಹತ್ತಾದ ಪರಿವರ್ತನೆ ಉಂಟಾಗಲು ಕಾರಣವೇನೆಂದರೆ, ಪವಿತ್ರ ಖುರ್‌ಆನಿನ ಅಧ್ಯಾಪನೆ ಅವರ ನೈತಿಕತೆ ಮತ್ತು ಅವರ ಸ್ವಭಾವದಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡಿತ್ತು. ಅವರ ನೀಚ ಜೀವಿತಕ್ಕೆ ಅದು ಒಂದು ಮೃತ್ಯುವನ್ನು ಬರಿಸಿತ್ತು. ಅವರನ್ನು ಶ್ರೇಷ್ಠ ನಡತೆ ಮತ್ತು ಉನ್ನತ ಸ್ವಭಾವದ ಮಟ್ಟದಲ್ಲಿ ತಂದು ನಿಲ್ಲಿಸಿತ್ತು. (ಹಝ್ರತ್ ಮುಸ್ಲಿಹ್ ಮೌಊದ್(ರ))**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23-07-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇತ್ತೀಚಿಗೆ ನಾವು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಸುತ್ತಿದ್ದೇವೆ. ಅವರ ಕಾಲದ ಕೆಲವು ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಇದಕ್ಕೆ ಸಂಬಂಧಿಸಿ ಇಂದು ಸಹ ಹೇಳುವೆನು. ಹಿಜರಿ 13 ಅಥವಾ 16ರಲ್ಲಿ ನಡೆದ ಬವೇಬ್ ಯುದ್ಧದ ವಿವರಣೆ ಚರಿತ್ರೆಯಲ್ಲಿ ಹೀಗೆ ಲಭಿಸುತ್ತದೆ: ಜಿಸರ್ ಯುದ್ಧದಲ್ಲಿ ಮುಸ್ಲಿಮರ ಸೋಲಿನ ನಂತರ ಹಝ್ರತ್ ಮುಸನ್ನ ಹಝ್ರತ್ ಉಮರ್‌ರಿಗೆ ಯುದ್ಧದ ಬಗ್ಗೆ ತಿಳಿಸಿದರು. ಹಝ್ರತ್ ಉಮರ್(ರ) ದೂತರೊಡನೆ ಹೇಳಿದರು: "ಸಹಾಬರ ಬಳಿಗೆ ಮರಳಿ ಹೋಗು ಮತ್ತು ಇಸ್ಲಾಮಿನ ಸೈನ್ಯ ಎಲ್ಲಿದೆಯೋ ಅಲ್ಲೇ ಇರಲು ಹೇಳು. ಬೇಗನೇ ಸಹಾಯ ಬರುವುದು." (ಅಲ್‌ಅಖ್ಬಾರ್ ಅತ್ತವಾಲ್, ಅಬೂ ಹನೀಫ ದೀನೂರಿ, ಪುಟ-166-167, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಜಿಸರ್ ಯುದ್ಧದ ಸೋಲಿನಿಂದ ಹಝ್ರತ್ ಉಮರ್‌ರಿಗೆ ತುಂಬ ದುಃಖವುಂಟಾಯಿತು. ಅವರು ಅರೇಬಿಯದೆಲ್ಲಡೆ ಭಾಷಣಗಾರರರನ್ನು ಕಳುಹಿಸಿದರು. ಅವರು ಆವೇಶಭರಿತ ಭಾಷಣಗಳ ಮೂಲಕ ಅರೇಬಿಯದೆಲ್ಲಡೆ ಆವೇಶ ತುಂಬಿಸಿದರು. ಅರೇಬಿಯಾದ ಅನೇಕ ಕುಲಗೋತ್ರದವರೂ ಈ ಸೈನ್ಯದಲ್ಲಿ ಸೇರ್ಪಡೆಯಾದರು. ಈ ಸೈನ್ಯದಲ್ಲಿ ಮುಸ್ಲಿಮರಲ್ಲದೆ ಕ್ರೈಸ್ತ ಗೋತ್ರಗಳು ಕೂಡ ಭಾಗಿಯಾಗಿದ್ದುವು. ಹಝ್ರತ್ ಉಮರ್(ರ) ಮುಸ್ಲಿಮರ ಒಂದು ಸೈನ್ಯವನ್ನು ಇರಾಕಿಗೆ ರವಾನೆ ಮಾಡಿದರು. ಹಝ್ರತ್ ಮುಸನ್ನ ಸಹ ಗಡಿ ಪ್ರದೇಶಗಳಿಂದ ಸೈನ್ಯವನ್ನು ಒಟ್ಟುಗೂಡಿಸಿದ್ದರು. ಮುಸ್ಲಿಮರ ತಯಾರಿಯ ಮಾಹಿತಿ ರುಸ್ತಮಿಗೆ ಲಭಿಸಿದಾಗ ಅವನು ಮೆಹ್‌ರಾನಿನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಮುಸ್ಲಿಮರನ್ನು ಎದುರಿಸಲು ರವಾನೆ ಮಾಡಿದನು. ಹೀರ ಎಂಬುದು ಒಂದು ಪ್ರದೇಶವಾಗಿದೆ. ಅದು ಕೂಫದಿಂದ 3 ಮೈಲು ದೂರದಲ್ಲಿದೆ. ಅದೊಂದು ಪಟ್ಟಣವಾಗಿದೆ. ಅದರ ಸಮೀಪ ಬವೇಬ್ ಇದೆ. ಇದು ಸಹ ಕೂಫದ ಸಮೀಪವಿರುವ ಒಂದು ನದಿಯಾಗಿದೆ. ಅದು ಫರಾತ್ ಸಮುದ್ರದಿಂದ ಹೊರಡುತ್ತದೆ. ಈ ಸ್ಥಳದಲ್ಲಿ ಉಭಯ ಪಕ್ಷಗಳು ಪಂಕ್ತಿಬದ್ಧರಾದರು. ಈ ಯುದ್ಧ ರಮಝಾನ್ ತಿಂಗಳಲ್ಲಿ ನಡೆಯಿತ್ತು. ಈ ಸ್ಥಳದ ಸಮೀಪವೇ ಅನಂತರ ಕೂಫ ಪಟ್ಟಣ ನೆಲೆಸಿತ್ತು. ಇರಾನಿ ಜನರಲ್ ಮೆಹ್‌ರಾನ್ ಕೇಳಿದನು: ನಾವು ನದಿ ದಾಟಿ ಬರಬೇಕೇ? ಅಥವಾ ನೀವು ಬರುತ್ತೀರೋ? "ನೀವು ದಾಟಿ ಬನ್ನಿರಿ." ಎಂದು ಹಝ್ರತ್ ಮುಸನ್ನ ಹೇಳಿದರು. ಕಳೆದ ಯುದ್ಧದಲ್ಲಿ ಮುಸ್ಲಿಮರು ನದಿಯನ್ನು ದಾಟಿ ಹೋಗಿದ್ದರು. ಈ ಬಾರಿ ಇರಾನಿಯರೊಡನೆ ಬರಲು ಹೇಳಿದರು. ಹಝ್ರತ್ ಮುಸನ್ನ ಸೈನ್ಯವನ್ನು ಕ್ರಮಪಡಿಸಿದರು ಮತ್ತು ಪಂಕ್ತಿಬದ್ಧಗೊಳಿಸಿದರು. ಅನಂತರ ಅದರ ಬೇರೆ ಬೇರೆ ಭಾಗಗಳಲ್ಲಿ ಅನುಭವಿ ನೇತಾರರನ್ನು ನಿಶ್ಚಯಿಸಿದರು. ಶಮೂಸ್ ಎಂಬ ಹೆಸರಿನ ತನ್ನ ಪ್ರಸಿದ್ಧ ಕುದುರೆಯಲ್ಲಿ ಸವಾರನಾಗಿಕೊಂಡು ಇಸ್ಲಾಮಿನ ಪಂಕ್ತಿಗಳನ್ನು ಸುತ್ತುತ್ತಾ ಅವುಗಳನ್ನು ಅವಲೋಕಿಸಿದರು. ಪ್ರತಿಯೊಂದು ಧ್ವಜಗಳ ಬಳಿ ನಿಂತುಕೊಂಡು ಯುದ್ಧದ ಬಗ್ಗೆ ನಿರ್ದೇಶನಗಳನ್ನು ನೀಡಿದರು ಹಾಗೂ ಆವೇಶಭರಿತ ಮಾತುಗಳಲ್ಲಿ ಅವರಿಗೆ ಧೈರ್ಯಕೊಡುತ್ತಾ ಹೀಗೆ ಹೇಳಿದರು: ಇಂದು ಅರೇಬಿಯರ ಮೇಲೆ ನಿಮ್ಮ ಕಾರಣದಿಂದ ಕಳಂಕವುಂಟಾಗಲಾರದು ಎಂದು ನಾನು ನಿರೀಕ್ಷಿಸುತ್ತೇನೆ. ನೀವು ಮತ್ತು ನಾನು ಸಮಾನರಾಗಿದ್ದೇವೆ. ಇಸ್ಲಾಮಿನ ಈ ತ್ಯಾಗಿಗಳು ಆವೇಶಭರಿತ ಮಾತುಗಳಲ್ಲಿ ತನ್ನ ಪ್ರಿಯ ನೇತಾರನ ಕರೆಗೆ ಲಬ್ಬೈಕ್ ಹೇಳಿದರು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-372, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಪ್ರಬಂಧ: 'ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮಯರ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-23-24) (ಮುಜಮುಲ್ ಬಲದಾನ್, ಸಂಪುಟ-2, ಪುಟ-376) (ಮುಜಮುಲ್ ಬಲದಾನ್, ಸಂಪುಟ-1, ಪುಟ-607)

ಹಝ್ರತ್ ಮುಸನ್ನ ಹೇಳಿದರು: ನಾನು ಮೂರು ತಕ್ಬೀರ್‌ಗಳನ್ನು ಹೇಳುತ್ತೇನೆ. ನೀವು ಸನ್ನದ್ಧ ಮತ್ತು ತಯಾರಾಗಿ ಇರಿ. ನಾಲ್ಕನೇ ತಕ್ಬೀರ್ ಹೇಳುತ್ತಲೇ ಶತ್ರುಗಳ ಮೇಲೆ ಆಕ್ರಮಣ ನಡೆಸಿರಿ. ಹಝ್ರತ್ ಮುಸನ್ನ ಮೊದಲ ತಕ್ಬೀರ್ ಹೇಳಿದಾಗ ಇರಾನಿ ಸೈನ್ಯ ಬೇಗನೇ ಆಕ್ರಮಣ ನಡೆಸಿತು. ಆದ್ದರಿಂದ ಮುಸ್ಲಿಮರು ಸಹ ಬೇಗನೇ ಮತ್ತು ಮೊದಲ ತಕ್ಬೀರಿನ ನಂತರವೇ ಬನೂ ಅಜಲಿನ ಕೆಲವು ವ್ಯಕ್ತಿಗಳು ತಮ್ಮ ಪಂಕ್ತಿಗಳಿಂದ ಹೊರಗೆ ಬಂದು ಹೋರಾಟಕ್ಕಾಗಿ ಮುಂದಕ್ಕೆ ಧಾವಿಸಿತ್ತು. ಹಝ್ರತ್ ಮುಸನ್ನ ಒಬ್ಬ ವ್ಯಕ್ತಿಗೆ ಸಂದೇಶ ನೀಡಿ ಕಳುಹಿಸಿದರು. ಆ ಸಂದೇಶ ಹೀಗಿತ್ತು: ಸೈನ್ಯದ ಅಮೀರ್ ಸಲಾಂ ಹೇಳುತ್ತಾನೆ. ಇಂದು ಮುಸ್ಲಿಮರನ್ನು ನಿಂದನೆಗೆ ಗುರಿಪಡಿಸಬೇಡ. ಹೀಗೆ ಹೇಳಿದ ನಂತರ ಆ ಗೋತ್ರ ಸ್ವತಃ ನಿಯಂತ್ರಣಗೊಂಡಿತು. ಯುದ್ಧ ಶುರುವಾಯಿತು ಮತ್ತು ಶಕ್ತವಾದ ಹೋರಾಟದ ನಂತರ ಇರಾನಿಯರಲ್ಲಿ ಗಲಿಬಿಲಿಯುಂಟಾಯಿತು ಈ ಯುದ್ಧದಲ್ಲಿ ಇರಾನಿನ ಸೇನಾಧಿಪತಿಯಾದ ಮೆಹ್‌ರಾನ್ ಸಮೇತ ಒಂದು ಲಕ್ಷ ಇರಾನಿಯರು ಕೊಲ್ಲಲ್ಪಟ್ಟರು. ಈ ಯುದ್ಧವನ್ನು ಯೌಮುಲ್‌ಅಶಾರ್ ಎಂದೂ ಹೇಳಲಾಗುತ್ತದೆ. ಏಕೆಂದರೆ ಈ ಯುದ್ಧದಲ್ಲಿ ಹತ್ತು ಹತ್ತು ಜನರನ್ನು ಕೊಂದು ಹಾಕಿದ್ದ ನೂರು ಮಂದಿಗಳು ಇದ್ದರು. ಇರಾನಿ

ಸೈನ್ಯ ಸೋತುಹೋದ ನಂತರ ಸೇತುವೆ ದಾಟಿ ಪರಾರಿಯಾಗಲು ಸೇತುವೆಯ ಕಡೆಗೆ ಓಡಿಹೋದರು. ಆದರೆ ಹಝ್ರತ್ ಮುಸನ್ನ ತನ್ನ ಸೈನ್ಯದ ತುಕಡಿಯೊಂದಿಗೆ ಅವರನ್ನು ಹಿಂಬಾಲಿಸಿದರು ಮತ್ತು ಅವರು ಸೇತುವೆ ದಾಟುವುದಕ್ಕೆ ಮುಂಚಿತವಾಗಿಯೇ ಅವರನ್ನು ಸುತ್ತುವರೆದರು ಮತ್ತು ನದಿಯ ಸೇತುವೆಯನ್ನು ಮುರಿದು ಹಾಕಿ ಅನೇಕ ಇರಾನಿ ಸಿಪಾಯಿಗಳನ್ನು ಕೊಂದುಹಾಕಿದರು. ಸೋತುಹೋದ ಜನರನ್ನು ಹಿಂಬಾಲಿಸಿದ ಈ ಕೃತ್ಯಕ್ಕಾಗಿ ಹಝ್ರತ್ ಮುಸನ್ನ ಅನಂತರ ಖೇದಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: ನಾನು ಹೀಗೆ ಮಾಡಬಾರದಿತ್ತು. ನನ್ನಿಂದ ದೊಡ್ಡ ತಪ್ಪಾಯಿತು. ಎದುರಿಸಲು ಶಕ್ತಿಯಿಲ್ಲದವರನ್ನು ಎದುರಿಸುವುದು ನನಗೆ ಸೇರಿದ ಕೆಲಸವಾಗಿರಲಿಲ್ಲ. ಇನ್ನು ಎಂದಿಗೂ ನಾನು ಹಾಗೆ ಮಾಡುವುದಿಲ್ಲ. ಹೇ ಮುಸ್ಲಿಮರೇ ನೀವು ಕೂಡ ಹೀಗೆ ಮಾಡಬೇಡಿರಿ. ಈ ವಿಷಯದಲ್ಲಿ ನನ್ನನ್ನು ಅನುಕರಿಸಬೇಡಿರಿ. ಈ ತಪ್ಪು ನನ್ನಿಂದ ಆಯಿತು. ಓಡುವವರನ್ನು ಹಿಂಬಾಲಿಸಿದೆ. ಹೀಗೆ ಆಗಬಾರದಿತ್ತು ಈ ಯುದ್ಧದಲ್ಲಿ. ಇದಾಗಿತ್ತು ಇಸ್ಲಾಮಿನ ನೈಜ ನೈತಿಕತೆ. ಈ ಯುದ್ಧದಲ್ಲಿ ಇಸ್ಲಾಮಿನ ಸೈನ್ಯದ ಕೆಲವು ಶ್ರೇಷ್ಠ ವ್ಯಕ್ತಿಗಳಾದಂತಹ ಖಾಲಿದ್ ಬಿನ್ ಹಿಲಾಲ್ ಮತ್ತು ಮಸೂದ್ ಬಿನ್ ಹಾರಿಸ ಕೂಡ ಶಹೀದಾದರು. ಹಝ್ರತ್ ಮುಸನ್ನ ಶಹೀದರ ಜನಾಝ ನಿರ್ವಹಿಸಿದರು ಮತ್ತು ಹೇಳಿದರು: ಅಲ್ಲಾಹನಾಣೆ, ಈ ಯುದ್ಧದಲ್ಲಿ ಇವರು ಭಾಗಿಯಾದರು ಎಂಬುದು ನನ್ನ ದುಃಖವನ್ನು ಹಗುರಗೊಳಿಸುತ್ತದೆ. ಇವರು ಧೈರ್ಯ ಮತ್ತು ಸ್ಥೈರ್ಯದಿಂದ ವರ್ತಿಸಿದರು. ಅವರಿಗೆ ಯಾವುದೇ ರೀತಿಯ ಗಾಬರಿ ಅಥವಾ ಚಿಂತೆಯುಂಟಾಗಿರಲಿಲ್ಲ. ಶಹಾದತ್ ಪಾಪಗಳಿಗೆ ಪ್ರಾಯಶ್ಚಿತ್ತವಾಗುವುದು ಎಂಬ ಸಂಗತಿಯೂ ನನ್ನ ದುಃಖವನ್ನು ಕಡಿಮೆಗೊಳಿಸುತ್ತದೆ.

ಈ ಯುದ್ಧದ ಪ್ರಸ್ತಾಪದಲ್ಲಿ ಚರಿತ್ರೆಗಾರರು ಒಂದು ಘಟನೆಯನ್ನು ಹೇಳಿದ್ದಾರೆ. ಈ ಯುದ್ಧದಲ್ಲಿ ಮುಸ್ಲಿಂ ಮಹಿಳೆಯರ ಧೈರ್ಯ ಮತ್ತು ಸ್ಥೈರ್ಯದ ಉದಾಹರಣೆ ಕಾಣಬಹುದಾಗಿತ್ತು. ಯುದ್ಧದ ನಂತರ ಮುಸ್ಲಿಮ್ ಸೈನ್ಯದ ಒಂದು ತುಕಡಿ ಕುದುರೆಗಳನ್ನು ಓಡಿಸುತ್ತಾ ಹೆಂಗಸರ ಮತ್ತು ಮಕ್ಕಳ ಕ್ಯಾಂಪಿನ ಬಳಿ ಬಂದಾಗ, ಅದು ಅವರ ಮೇಲೆ ಆಕ್ರಮಣ ನಡೆಸಲು ಬರುತ್ತಿರುವ ಶತ್ರುಗಳ ಸೈನ್ಯವೆಂದು ಭಾವಿಸಿಕೊಂಡು ಆ ಮಹಿಳೆಯರು ಮಕ್ಕಳನ್ನು ಎತ್ತಿಕೊಂಡು ಸ್ವತಃ ಕಲ್ಲುಗಳನ್ನು ಮತ್ತು ಕೋಲುಗಳನ್ನು ತೆಗೆದುಕೊಂಡು ಹೋರಾಟಕ್ಕಾಗಿ ತಯಾರಾದರು. ಸೈನ್ಯದ ತುಕಡಿ ಸಮೀಪವಾದಾಗ, ಅವರು ಮುಸ್ಲಿಮರಾಗಿದ್ದರು ಎಂದು ಅವರಿಗೆ ಗೊತ್ತಾಯಿತು. ಹೀಗೆ ಆ ಸಂಘದ ಮುಖಂಡನಾದ ಅಮ್ರ್ ಬಿನ್ ಅಬ್ದುಲ್ ಮಸೀಹ್ ಒಡನೆ ಹೀಗೆ ಹೇಳಿದರು: ಅಲ್ಲಾಹು ಅಕ್ಬರ್. ಸೈನ್ಯದ ಮಹಿಳೆಯರಿಗೆ ಇದೇ ಚೆಲುವು.

ಬವೇಬ್ ಯುದ್ಧ ಕೊನೆಗೊಂಡಿತು. ಆದರೆ ಅದು ತನ್ನ ಹಿಂದೆ ಆಳವಾದ ಗುರುತು ಮತ್ತು ಆಳವಾದ ಪ್ರಭಾವವನ್ನು ಬಾಕಿಯುಳಿಸಿತು. ಇಸ್ಲಾಮಿನ ವಿರುದ್ಧ ಇರಾನಿಯರ ಯುದ್ಧದಲ್ಲಿ, ಇದಕ್ಕೆ ಮುಂಚೆ ಇಷ್ಟೆಲ್ಲ ಜೀವಹಾನಿ ಉಂಟಾಗಿರಲಿಲ್ಲ. ಈ ಯುದ್ಧದ ಪರಿಣಾಮವಾಗಿ ಇರಾಕಿನ ಹೆಚ್ಚಿನ ಪ್ರದೇಶಗಳಲ್ಲಿ ಮುಸ್ಲಿಮರ ಪಾದಗಳು ಸುದೃಢಗೊಂಡುವು. ದಜ್ಲ ನದಿಯ ತನಕ ಮುಸ್ಲಿಮರ ವಶದಲ್ಲಿ ಆಯಿತು. ಸಾಮಾನ್ಯ ಹೋರಾಟದ ನಂತರ ಸುತ್ತಮುತ್ತಲಿನ ಪ್ರದೇಶಗಳು ಸಹ ಮುಸ್ಲಿಮರ ವಶಕ್ಕೆ ಬಂದುವು. ಈ ಯುದ್ಧದ ನಂತರ ಮುಸ್ಲಿಮರು ಇರಾಕಿನ ಅನೇಕ ಪ್ರದೇಶಗಳಲ್ಲಿ ಹರಡಿದರು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–373–374, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಸೀರತ್ ಅಮೀರುಲ್ ಮುಮಿನೀನ್ ಹಝ್ರತ್ ಉಮರ್ ಬಿನ್ ಖತ್ತಾಬ್, ಅಸ್‌ಲಾಬಿ, ಪುಟ–361–363, ದಾರುಲ್ ಮಾರಿಫ ಬೈರೂತ್ 2007) (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–82–84, ಇದಾರಃ ಇಸ್ಲಾಮಿಯಾತ್ 2004) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–288–291, ಹಿಜರಿ 13, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006) (ತಾರೀಖ್ ಅತ್ತಿಬರಿ ಅನುವಾದ, ಸಂಪುಟ–2, ಭಾಗ–2, ಪುಟ–237–238,240–241, ನಫೀಸ್ ಅಕಾಡಮಿ ಕರಾಚಿ 2004) (ಪ್ರಬಂಧ: 'ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯದ ಮಯರ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ–28–29)

ಹಿಜರೀ 14ರಲ್ಲಿ ಮುಸ್ಲಿಮರು ಮತ್ತು ಇರಾನಿಯರ ನಡುವೆ ನಿರ್ಣಾಯಕ ಯುದ್ಧವಾದ ಖಾದಿಸಿಯ ನಡೆಯಿತು. ಅದರ ಪರಿಣಾಮವಾಗಿ ಇರಾನಿನ ಆಡಳಿತ ಮುಸ್ಲಿಮರ ವಶದಲ್ಲಿ ಬಂತು. ಖಾದಿಸಿಯ ಎಂಬುದು ಈಗಿನ ಇರಾಕಿನ ಒಂದು ಪ್ರದೇಶವಾಗಿದೆ. ಕೂಫದಿಂದ 45 ಮೈಲುಗಳಷ್ಟು ದೂರದಲ್ಲಿ ಇದೆ. 14 ಹಿಜರಿಯಲ್ಲಿ ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲದಲ್ಲಿ ಮುಸ್ಲಿಮರು ಮತ್ತು ಇರಾನಿಯರ ನಡುವೆ ಖಾದಿಸಿಯ ಎಂಬಲ್ಲಿ ಯುದ್ಧ ನಡೆದಿತ್ತು ಅದರ ಪ್ರತಿಫಲವಾಗಿ ಇರಾನಿಯರು ಮುಸ್ಲಿಮರ ವಶದಲ್ಲಿ ಬಂದರು. ಮುಸ್ಲಿಮರ ವಿಜಯಗಳ ಬಗ್ಗೆ ಇರಾನಿನ ಜನರಿಗೆ ಗೊತ್ತಾದಾಗ ಅವರು ತಮ್ಮ ನೇತಾರರಾದ ರುಸ್ತಂ ಮತ್ತು ಫೈರುಝಾನ್‌ರೊಡನೆ ಹೇಳಿದರು: ನಿಮ್ಮಿಬ್ಬರ ಭಿನ್ನತೆಯ ಕಾರಣದಿಂದ ಮುಸ್ಲಿಮರು ಇಷ್ಟೆಲ್ಲ ಶಕ್ತಿಯನ್ನು ಗಳಿಸಲು ಯಶಸ್ವಿಯಾದರು. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ವೇಳೆ ನಾವು ಹೀಗೆ ಇದ್ದರೆ ಇರಾನ್ ಭಸ್ಮವಾಗಿವುದು ಏಕೆಂದರೆ ಬಗ್‌ದಾದ್, ಮದಾಇನ್‌ನ ಸಮೀಪವಿರುವ ಸಾಬಾತ್ ಮತ್ತು ಬಗ್‌ದಾದ್ ಹಾಗೂ ಮೊಸಿಲ್‌ನ ಮಧ್ಯೆ ಬಗ್‌ದಾದ್ ಇಂದ 90 ಮೈಲಿ ದೂರವಿರುವ ತಕ್ರೀಬ್ ಎಂಬ ಪಟ್ಟಣವಿದೆ. ಇದರ ನಂತರ ಈಗ ಕೇವಲ ಮದಾಇನ್ ಪಟ್ಟಣ ಮಾತ್ರ ಉಳಿದಿದೆ. ಅವರು ಹೇಳಿದರು ಈಗ ನೀವಿಬ್ಬರು ಜೊತೆಗೂಡುವುದಿಲ್ಲವಾದರೆ ಮೊದಲಿಗೆ ನಾವು ನಿಮ್ಮನ್ನು ಕೊಂದು ಹಾಕುವೆವು ತದನಂತರ ನಾವು ಸ್ವತಃ ತಮ್ಮನ್ನು ಕೊಂದುಕೊಂಡು ಮೋಕ್ಷ ಹೊಂದುವೆವು ಅಂದರೆ ನಾವು ಸ್ವತಃ ಯುದ್ಧ ಮಾಡುವೆವು. ರುಸ್ತಂ ಮತ್ತು ಫೈರುಝಾನ್ ಬೂರಾನನ್ನು ವಜಾಗೊಳಿಸಿ 21 ವಯಸ್ಸಿನ ಯಝ್‌ದುಜರ್‌ದನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದರು. ಎಲ್ಲ ಕೋಟೆಗಳನ್ನು ಮತ್ತು ಸೈನಕರ ಚಾವಣಿಗಳನ್ನು ಸುದೃಢಗೊಳಿಸಲಾಯಿತು. ಹಝ್ರತರ್ ಮುಸನ್ನ(ರ)ರವರು ಹಝ್ರತ್ ಉಮರ್(ರ) ರವರಿಗೆ ಪಾರ್ಸೀಯರ ಈ ಸಿದ್ಧತೆಗಳ ಬಗ್ಗೆ ತಿಳಿಸಿದರು. ಆಗ ಹಝ್ರತ್ ಉಮರ್(ರ) ಹೇಳಿದರು ಅಲ್ಲಾಹನಆಣೆ!! ನಾನು ಅಜಮೀಯ ರಾಜರ ವಿರುದ್ಧ ಹೋರಾಡಲು ಅರೇಬೀಯದ ರಾಜರಿಗೆ ಹಾಗೂ ಉತ್ತಮ ವರ್ಗದವರಿಗೆ ಯುದ್ಧವಾಡಲು ಸಿದ್ಧಗೊಳಿಸುವೆನು. ಹೀಗಾಗಿ ಅರೇಬಿಯಾದ ಗೌರವಾನ್ವಿತ ವ್ಯಕ್ತಿಯರನ್ನು, ಕವಿಗಳನ್ನು, ಭಾಷಣಗಾರರನ್ನು ಎಲ್ಲರನ್ನು ಹೋರಾಡಲು ಕಳುಹಿಸಲಾಯಿತು ಅದೇ ರೀತಿ ಹಝ್ರತ್ ಮುಸನ್ನ ಅವರನ್ನು ಅಜಮಿ ಪ್ರದೇಶಗಳನ್ನು ಬಿಟ್ಟು ಅವರ ಹಾಗೂ ನಿಮ್ಮ ಗಡಿರೇಖೆಗಳಲ್ಲಿ ಬರುವಂತ್ ಕರಾವಳಿ ಪ್ರದೇಶಕ್ಕೆ ತಲುಪಲು ಆದೇಶಿಸಿದರು. ಅದೇ ರೀತಿ ರಬೀಅ ಹಾಗೂ ಮುಝರ್ ಗೋತ್ರಗಳನ್ನು ಅವರೊಂದಿಗೆ ಸೇರಿಸಿಕೊಳ್ಳಲು ಆದೇಶಿಸಿದರು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–294–295, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006) (ಫರ್‌ಹಂಗ್ ಸೀರತ್, ಪುಟ–229) (ಮುಜಮುಲ್ ಬಲದಾನ್, ಸಂಪುಟ–2, ಪುಟ–45)

ಹಝ್ರತ್ ಉಮರ್(ರ) ರವರು ಅರೇಬಿಯಾದ ನಾಲ್ಕೂ ಕಡೆಗಳಿಗೆ ದೂತರನ್ನು ಕಳುಹಿಸಿದರು ಮತ್ತು ಗೋತ್ರಗಳ ಮುಖಂಡರನ್ನು ಮಕ್ಕದಲ್ಲಿ ಒಟ್ಟುಸೇರಲು ನಿರ್ದೇಶಿಸಿದರು. ಆಗ ಹಜ್ಜ್ ಸಮಯವು ನಿಕಟವಾಗಿತ್ತು. ಹಝ್ರತ್ ಉಮರ್(ರ) ಹಜ್ಜ್ ಕರ್ಮಾನುಷ್ಠಾನಕ್ಕಾಗಿ ರವಾನೆಯಾದರು. ಹಝ್ರತ್ ಉಮರ್(ರ) ಹಜ್ಜಿನಿಂದ ಮರಳಿ ಬಂದಾಗ ಮದೀನದಲ್ಲಿ ಒಂದು ದೊಡ್ಡ ಸೈನ್ಯ ಒಟ್ಟುಗೊಂಡಿತ್ತು. ಹಝ್ರತ್ ಉಮರ್(ರ) ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಮದೀನದ ಅಮೀರನ್ನಾಗಿ ನಿಶ್ಚಯಿಸಿ ಸೈನ್ಯದ ನೇತೃತ್ವವನ್ನು ಸ್ವತಃ ವಹಿಸಿದ್ದರು ಮತ್ತು ಸರಾರಿನಲ್ಲಿ ಬಿಡಾರ ಬಿಟ್ಟರು. ಸರಾರ್ ಸಹ ಮದೀನದಿಂದ ಮೂರು ಮೈಲು ದೂರದಲ್ಲಿರುವ ಒಂದು ಕಾರಂಜಿಯಾಗಿದೆ. ಹಝ್ರತ್ ಉಮರ್‌ರಿಗೆ ಸ್ವತಃ ಯುದ್ಧದಲ್ಲಿ ಹೋಗುವ ಖಚಿತ ತೀರ್ಮಾನವಿರಲಿಲ್ಲ. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–85–86, ಇದಾರ ಇಸ್ಲಾಮಿಯಾತ್ 2004) (ಫರ್‌ಹಂಗ್ ಸೀರತ್, ಪುಟ–172)

ಸೈನ್ಯವನ್ನು ತೆಗೆದು ಹೋಗಿದ್ದರು. ಆದರೆ ಸ್ವತಃ ಯುದ್ಧದಲ್ಲಿ ಭಾಗವಹಿಸುವ ಉದ್ದೇಶವಿರಲಿಲ್ಲ. ಮುಂದೆ ಹೋಗಿ ಬೇರೆ ಯಾರನ್ನಾದರೂ ಕಮಾಂಡರ್ ಮಾಡುವ ಉದ್ದೇಶವನ್ನು ಹೊಂದಿದ್ದರು. ಹೇಗಿದ್ದರೂ ತಾರೀಖ್ ತಬರಿಯಲ್ಲಿ ಬರೆಯಲಾಗಿರುವ ವಿವರಣೆ ಪ್ರಕಾರ, ಹಝ್ರತ್ ಉಮರ್(ರ) ಜನರೊಡನೆ ಸಮಾಲೋಚನೆ ನಡೆಸಿದರು. ಎಲ್ಲರೂ ಅವರೊಡನೆ ಇರಾನಿಗೆ ಹೋಗಲು ಸಲಹೆ ಕೊಟ್ಟರು. ಸರಾರ್ ತಲುಪುವ ತನಕ ಹಝ್ರತ್ ಉಮರ್(ರ) ಯಾರೊಡನೆಯೂ ಸಮಾಲೋಚನೆ ನಡೆಸಲಿಲ್ಲ. ಆದರೆ ಅವರನ್ನು ಹೋಗುವುದರಿಂದ ತಡೆಯುತ್ತಿದ್ದ ಜನರಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಇದ್ದರು. ಸೈನ್ಯದೊಂದಿಗೆ ಹೋಗಲು ಹಝ್ರತ್ ಉಮರ್‌ರೊಡನೆ ಬಾಕಿಯಿದ್ದವರು ಹೇಳಿದ್ದರು. ಆದರೆ ಹೋಗುವುದು ಬೇಡವೆಂದು ಅಬ್ದುರ್ರಹ್ಮಾನ್ ಹೇಳಿದರು. ಹಝ್ರತ್ ಅಬ್ದುರ್ರಹ್ಮಾನ್ ಹೇಳಿದರು: ಇಂದಿಗಿಂತ ಮುಂಚೆ ನಾನು ಹಝ್ರತ್ ಪೈಗಂಬರ್‌ರಿಗೆ ಅಲ್ಲದೇ ನನ್ನ ತಂದೆತಾಯಂದಿರನ್ನು ಅರ್ಪಿಸುವೆನು ಎಂದು ಯಾರ ಕುರಿತು ಕೂಡ ಹೇಳಿಲ್ಲ. ಆದರೆ ಇಂದು ನಾನು ಹೇಳುತ್ತೇನೆ. ನಿಮ್ಮ ಮೇಲೆ ನನ್ನ ತಂದೆ ತಾಯಿ ಅರ್ಪಿತವಾಗಲಿ. ಈ ವಿಷಯದಲ್ಲಿ ಕೊನೆಯ ತೀರ್ಮಾನ ನೀವು ನನಗೆ ಬಿಡಿರಿ. ನೀವು ಸರಾರಿನಲ್ಲೇ ನಿಲ್ಲಿರಿ ಮತ್ತು

ಇಲ್ಲಿಂದ ದೊಡ್ಡದಾದ ಒಂದು ಸೈನ್ಯವನ್ನು ರವಾನೆ ಮಾಡಿರಿ. ನಿಮ್ಮ ಸೈನ್ಯಗಳ ಕುರಿತು ಅಲ್ಲಾಹನ ತೀರ್ಮಾನ ಏನಾಗಿತ್ತು ಎಂದು ನೀವು ನೋಡಿದ್ದೀರಿ. ನಿಮ್ಮ ಸೈನ್ಯ ಸೋತುಹೋದರೆ ಅದು ನಿಮ್ಮ ಸೋಲಿನ ಹಾಗೆ ಆಗಿರುವುದಿಲ್ಲ. ಆರಂಭದಲ್ಲೇ ನೀವು ಶಹೀದ್ ಆದರೆ ಅನಂತರ ಮುಸ್ಲಿಮರು ಎಂದಿಗೂ ತಕ್ಬೀರ್ ಹೇಳಲಾರರು ಮತ್ತು **ಲಾ ಇಲಾಹ ಇಲ್ಲಲ್ಲಾಹ್** ಎಂದು ಸಾಕ್ಷ್ಯವಹಿಸಲಾರರು ಎಂದು ನನಗೆ ಭಯವಿದೆ. ಕೆಲವು ವ್ಯಕ್ತಿಗಳೊಡನೆ ಮತ್ತು ಶ್ರೇಷ್ಠ ಸಲಹೆಗಾರರೊಡನೆ ಸಮಾಲೋಚನೆ ನಡೆಸಿದ ನಂತರ ಹಝ್ರತ್ ಉಮರ್(ರ) ಒಂದು ಸಭೆ ನಡೆಸಿದರು. ಅದರಲ್ಲಿ ಭಾಷಣ ಮಾಡುತ್ತಾ ಹೇಳಿದರು: ಅಲ್ಲಾಹನು ನಿಮ್ಮನ್ನು ಇಸ್ಲಾಮಿನಲ್ಲಿ ಒಟ್ಟು ಸೇರಿಸಿದನು. ನಿಮ್ಮ ಹೃದಯಗಳಲ್ಲಿ ಪರಸ್ಪರ ಪ್ರೀತಿಯನ್ನು ಉಂಟುಮಾಡಿದನು. ಇಸ್ಲಾಂ ಎಲ್ಲರನ್ನು ಸಹೋದರರನ್ನಾಗಿ ಮಾಡಿತು. ಮುಸ್ಲಿಮರ ಅನ್ಯೋನ್ಯ ಸ್ಥಿತಿ ಒಂದು ದೇಹದ ಹಾಗೆ ಆಗಿದೆ. ಒಂದು ಭಾಗಕ್ಕೆ ತೊಂದರೆ ಉಂಟಾದರೆ, ಮತ್ತೊಂದು ಭಾಗಕ್ಕೂ ಅದು ಅನುಭವವಾಗುತ್ತದೆ. ಆದ್ದರಿಂದ ಅವರ ವಿಷಯಗಳಲ್ಲಿ ಪರಸ್ಪರ ಸಮಾಲೋಚನೆ ನಡೆಸಿ ತೀರ್ಮಾನ ಮಾಡಬೇಕು. ವಿಶೇಷವಾಗಿ ವಿವೇಕಯುತ ಜನರೊಡನೆ ಸಲಹೆ ಪಡೆಯಬೇಕು. ಯಾವ ವಿಷಯದಲ್ಲಿ ಒಮ್ಮತಾಭಿಪ್ರಾಯ ಮಾಡಲಾಗಿದೆಯೋ ಅದನ್ನು ಜನರು ಅನುಸರಿಸಬೇಕು. ಜನರಲ್ಲಿ ಸಲಹೆಗಾರರ ಸಲಹೆಗಳನ್ನು ಅಮೀರರು ಮಂಜೂರು ಮಾಡಬೇಕು. ಹೇ ಜನರೇ ನಾನು ನಿಮ್ಮ ಹಾಗೆ ನಿಮ್ಮೊಂದಿಗೆ ಬರಲು ಬಯಸಿದ್ದೆ. ಆದರೆ ನಿಮ್ಮ ಸಲಹೆಗಾರರು ನನ್ನನ್ನು ಅದರಿಂದ ತಡೆದಿರುವರು. ಆದ್ದರಿಂದ ನಾನು ಹೋಗದಿರಲು ಮತ್ತು ಬೇರೆ ಯಾರನ್ನಾದರೂ ಕಳುಹಿಸಲು ನಾನು ತೀರ್ಮಾನಿಸಿದ್ದೇನೆ. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-382, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಪ್ರಬಂಧ: 'ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯದ ಮಯರ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-35-37)

ಆ ಸಮಯದಲ್ಲಿ ಹಝ್ರತ್ ಉಮರ್(ರ) ಅದಕ್ಕಾಗಿ ಅನುಯೋಜ್ಯವಾದ ವ್ಯಕ್ತಿಯನ್ನು ಹುಡುಕುತ್ತಿದ್ದರು. ಅದೇ ಸಮಯದಲ್ಲಿ ಅವರ ಸನ್ನಿಧಿಯಲ್ಲಿ ಹಝ್ರತ್ ಸಅದ್‌ರ ಪತ್ರ ಬಂತು. ಹಝ್ರತ್ ಸಅದ್ ಆ ವೇಳೆ ನಜದಿನ ಸದಖಗಳ ಅಧಿಕಾರಿಯಾಗಿದ್ದರು. ಯಾರನ್ನು ಕಮಾಂಡರ್ ಮಾಡಬೇಕೆಂದು ಹಝ್ರತ್ ಉಮರ್(ರ) ಜನರೊಡನೆ ಕೇಳಿದರು. ಹಝ್ರತ್ ಅಬ್ದುರ್ರಹ್ಮಾನ್ ಹೇಳಿದರು: ವ್ಯಕ್ತಿ ನಿಮಗೆ ಸಿಕ್ಕಿದೆ. ಯಾರೆಂದು ಹಝ್ರತ್ ಉಮರ್(ರ) ಕೇಳಿದರು. ಹಝ್ರತ್ ಅಬ್ದುರ್ರಹ್ಮಾನ್(ರ) ಹೇಳಿದರು: ಗುಹೆಯಲ್ಲಿರುವ ಸಿಂಹ ಸಅದ್ ಬಿನ್ ಮಾಲಿಕ್ ಎಂದರೆ ಸಅದ್ ಬಿನ್ ಅಬೀ ವಖಾಸ್. ಬಾಕಿಯುಳ್ಳವರು ಸಹ ಈ ಸಲಹೆಯನ್ನು ಬೆಂಬಲಿಸಿದರು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-382, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ತಾರೀಖ್ ತಬರಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಉಮರ್(ರ) ಹಝ್ರತ್ ಸಅದ್‌ರನ್ನು ಅಮೀರರನ್ನಾಗಿ ನಿಶ್ಚಯಿಸಿಕೊಂಡು ಹೀಗೆ ಉಪದೇಶಿಸಿದರು: ನಿನ್ನನ್ನು ಹಝ್ರತ್ ಪೈಗಂಬರರ(ಸ) ಮಾವ ಮತ್ತು ಸಹಾಬಿ ಎಂದು ಹೇಳಲಾಗುತ್ತದೆ ಎಂದು ಭಾವಿಸಬೇಡ. ಏಕೆಂದರೆ ಅಲ್ಲಾಹನು ಕೆಡುಕನ್ನು ಕೆಡುಕಿನಿಂದ ಅಳಿಸುವುದಿಲ್ಲ. ಕೆಡುಕನ್ನು ಒಳಿತಿನಿಂದ ಅಳಿಸುತ್ತಾನೆ. ಅಲ್ಲಾಹನ ಮತ್ತು ದಾಸರ ನಡುವೆ ಅನುಸರಣೆ ಅಲ್ಲದೆ ಬೇರೆ ಸಂಬಂಧವಿಲ್ಲ. ನೀನು ಬಹಳ ಕಷ್ಟದಾಯಕ ಮತ್ತು ಕಠಿನವಾದ ಕೆಲಸವನ್ನು ಎತ್ತಿದ್ದೀಯ. ಆದ್ದರಿಂದ ನಿನ್ನ ಆತ್ಮಕ್ಕೂ ನಿನ್ನ ಸಹಚರರಿಗೂ ಸತ್ಕರ್ಮಗಳ ಅಭ್ಯಾಸವನ್ನು ಮಾಡಿಸು. ಅದರ ಮೂಲಕ ವಿಜಯವನ್ನು ಬಯಸು. ನೆನಪಿಡು. ಪ್ರತಿಯೊಂದು ಅಭ್ಯಾಸವನ್ನು ರೂಢಿಸಲು ಒಂದು ಮಾರ್ಗವಿರುತ್ತದೆ. ಸತ್ಕರ್ಮಗಳ ಅಭ್ಯಾಸವನ್ನು ಉಂಟುಮಾಡಲು ಇರುವ ಮಾರ್ಗ ಸಹನೆಯಾಗಿದೆ. ಸಹನೆ ಕೈಗೊಂಡನೆ ಸತ್ಕರ್ಮದ ಅಭ್ಯಾಸ ಉಂಟಾಗುವುದು. ಆದ್ದರಿಂದ ವಿಪತ್ತು ಮತ್ತು ಕಷ್ಟತೆಗಳು ಬರುವಾಗಲೆಲ್ಲ ಸಹನೆ ಕೈಗೊಳ್ಳು. ಇದರಿಂದ ಅಲ್ಲಾಹನ ಮೇಲಿನ ಭಯಭಕ್ತಿ ನಿನಗೆ ಲಭಿಸುವುದು. (ತಾರೀಖ್ ಅತ್ತಿಬರಿ ಅನುವಾದ, ಸಂಪುಟ-2, ಭಾಗ-2, ಪುಟ-253-254, ನಫೀಸ್ ಅಕಾಡಮಿ ಕರಾಚಿ 2004)

ಅದೇ ರೀತಿ ಹೇಳಿದರು: ನಿನ್ನ ಸಹಚರರನ್ನು ತೆಗೆದುಕೊಂಡು ಶರಾಫ್‌ನಿಂದ ಇರಾನಿನ ತನಕ ಮಾರ್ಚ್ ಮಾಡು. ಶರಾಫ್ ಎಂಬುದು ನಜದಿನಲ್ಲಿರುವ ನೀರಿನ ಒಂದು ಕಾರಂಜಿಯಾಗಿದೆ. ಅಲ್ಲಿಂದ ಸೈನ್ಯವನ್ನು ಒಟ್ಟುಗೂಡಿಸಲಾಗಿತ್ತು. ಅಲ್ಲಿಂದ ಶುರುಮಾಡಲು ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ಮೇಲೆ ಭರವಸೆ ಇಡು. ತನ್ನ ಎಲ್ಲ ಕೆಲಸಕ್ಕಾಗಿ ಅವನಿಂದಲೇ ಸಹಾಯವನ್ನು ಬೇಡು. ಯಾರ ಸಂಖ್ಯೆ ಬಹಳ ಹೆಚ್ಚಿದೆಯೋ ಆ ಸಮುದಾಯವನ್ನು ಎದುರಿಸಲು ನೀವು ಹೋಗುತ್ತಿದ್ದೀರಿ. ಅವರ ಬಳಿ ಸಾಮಾನುಗಳು ಸಹ ಬಹಳ ಹೆಚ್ಚಿವೆ. ಯುದ್ಧದ ಸಾಮರ್ಥ್ಯ ಸಹ ಅತ್ಯಂತ ಶಕ್ತವಾಗಿದೆ ಮತ್ತು ಸುರಕ್ಷಿತವಾಗಿದೆ. ಅದರೊಂದಿಗೆ ತನ್ನ ಕೃಷಿ ಮತ್ತು ನೀರಿನ ಕಾರಣದಿಂದ ಉತ್ತಮ ಪ್ರದೇಶವಾಗಿದೆ. ನೋಡು ಅವರ ಮೋಸಕ್ಕೆ ಒಳಪಡಬೇಡ. ಏಕೆಂದರೆ ಅವರು ಚಾಣಾಕ್ಷ ಮತ್ತು ಮೋಸ ಮಾಡುವವರಾಗಿರುವರು. ನೀವು ಖಾದಿಸಿಯ ತಲುಪುವಾಗ ನೀವು ಪರ್ವತ ಪ್ರದೇಶದ ಕೊನೆಯ ಭಾಗದಲ್ಲಿ ಮತ್ತು ಮೈದಾನದ ಆರಂಭದ ಭಾಗದಲ್ಲಿ ಇರುವಿರಿ. ನೀವು ಅಲ್ಲೇ ತಂಗಿರಿ ಮತ್ತು ಅಲ್ಲಿಂದ ಹೋಗಬೇಡಿರಿ. ಶತ್ರುಗಳಿಗೆ ನಿಮ್ಮ ಬರುವಿಕೆಯ ಬಗ್ಗೆ ಗೊತ್ತಾಗುವಾಗ ಅವರು ಕೋಪಗೊಳ್ಳುವರು. ಅವರು ಎಲ್ಲ ಸೈನ್ಯದೊಂದಿಗೆ, ಸಂಪೂರ್ಣ ಶಕ್ತಿಯೊಂದಿಗೆ ನಿಮ್ಮ ಮೇಲೆ ಹಲ್ಲೆ ನಡೆಸುವರು. ಈ ಸಂದರ್ಭದಲ್ಲಿ ನೀವು ಶತ್ರುಗಳ ಮುಂದೆ ಸ್ಥೈರ್ಯದಿಂದ ಇದ್ದರೆ, ಶತ್ರುಗಳೊಂದಿಗೆ ಹೋರಾಡುವಾಗ ಪುಣ್ಯವನ್ನು ಬಯಸುವಿರಿಯಾದರೆ, ಸದುದ್ದೇಶವನ್ನು ಹೊಂದಿರುವಿರಿಯಾದರೆ ನಿಮಗೆ ವಿಜಯ ಲಭಿಸುವುದು ಎಂದು ನನಗೆ ವಿಶ್ವಾಸವಿದೆ. ಅನಂತರ ಎಂದಿಗೂ ಅವರು ಈ ರೀತಿಯಲ್ಲಿ ಒಟ್ಟುಗೂಡಿಕೊಂಡು ನಿಮ್ಮ ಎದುರಿಗೆ ಯುದ್ಧ ಮಾಡಲಾರರು. ಅವರು ಒಟ್ಟುಗೂಡಿದ್ದರೂ ಅವರ ಹೃದಯಗಳು ಅವರೊಂದಿಗೆ ಇರಲಾರವು. ಎಂದರೆ ಭಯದೊಂದಿಗೆ ಅವರು ಯುದ್ಧ ಮಾಡುವರು. ಏನಾದರೂ ಬೇರೆ ಸ್ಥಿತಿಯುಂಟಾದರೆ ಎಂದರೆ ಹಿಂದೆಸರಿಯಬೇಕಾಗಿ ಬಂದರೆ, ನೀವು ಇರಾನಿನ ಸಮೀಪದ ಮೈದಾನದಿಂದ ಹಿಂದೆ ಸರಿದುಕೊಂಡು ಸ್ವಂತ ಪ್ರದೇಶದ ಸಮೀಪದ ಪರ್ವತದ ಕಡೆಗೆ ಬರಬೇಕು. ಇದರ ಪರಿಣಾಮವಾಗಿ ನಿಮಗೆ ನಿಮ್ಮ ಪ್ರದೇಶದಲ್ಲಿ ಹೆಚ್ಚು ಧೈರ್ಯ ಲಭಿಸುವುದು ಮತ್ತು ಆ ಪ್ರದೇಶ ನಿಮಗೆ ಹೆಚ್ಚು ಪರಿಚಿತವಾಗಿರುವುದು. ಇರಾನಿಯರು ನಿಮ್ಮ ಪ್ರದೇಶದಲ್ಲಿ ಭಯಗೊಳ್ಳುವರು. ನಿಮ್ಮ ಪ್ರದೇಶ ಅವರಿಗೆ ಪರಿಚಿತವಾಗಿರುವುದಿಲ್ಲ. ಹೀಗೆ ಅಲ್ಲಾಹನು ನಿಮಗೆ ಪುನಃ ವಿಜಯದ ಅವಕಾಶವನ್ನು ಉಂಟುಮಾಡುವನು. ವಿಜಯ ಲಭಿಸುವುದು ಎಂದು ಹಝ್ರತ್ ಉಮರ್‌ರಿಗೆ ದೃಢವಿಶ್ವಾಸವಿತ್ತು. ತಾತ್ಕಾಲಿಕವಾಗಿ ಅಂತಹ ಪರಿಸ್ಥಿತಿಯುಂಟಾದರೂ ಕೊನೆಗೆ ವಿಜಯ ನಿಮ್ಮದೇ ಆಗಿರುವುದು ಎಂದು ಹೇಳಿದರು. ಒಟ್ಟಿನಲ್ಲಿ ಸೈನ್ಯದ ಎಲ್ಲ ಚಲವವಲನಗಳು ಹಝ್ರತ್ ಉಮರರ ಕಡೆಯಿಂದ ಮದೀನದಿಂದ ಹೋಗುತ್ತಿದ್ದ ವಿಶದವಾದ ಆದೇಶಗಳ ಪ್ರಕಾರ ನಡೆಯುತ್ತಿದ್ದುವು. ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್(ರ) ಸೈನ್ಯದ ರವಾನೆಯ ದಿನಾಂಕವನ್ನು ಸಹ ನಿಶ್ಚಯಿಸಿದ್ದರು. ಖಾದಿಸಿಯ ತಲುಪಿದ ನಂತರ ಸೈನ್ಯ ಅಧೀಬುಲ್ ಹಜಾನಾತ್ ಮತ್ತು ಅಧೀಬುಲ್ ಖವಾದಿಸಿನ ಪ್ರದೇಶದ ನಡುವೆ ಹರಡಬೇಕು ಎಂದು ಸಹ ನಿರ್ದೇಶನ ಕೊಟ್ಟಿದ್ದರು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-386-387, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಪ್ರಬಂಧ: 'ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯದ ಮಯರ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-48-50) (ಮುಜಮುಲ್ ಬಲದಾನ್, ಸಂಪುಟ-3, ಪುಟ-131) (ಮುಜಮುಲ್ ಬಲದಾನ್, ಸಂಪುಟ-3, ಪುಟ-304)

ನಾಲ್ಕು ಸಾವಿರ ಯೋಧರಿಗೆ ಹಝ್ರತ್ ಸಅದ್ ಬಿನ್ ಅಬೀ ವಖಾಸ್‌ರನ್ನು ಸೈನ್ಯದ ನೇತಾರರನ್ನಾಗಿ ಹಝ್ರತ್ ಉಮರ್(ರ) ನಿಶ್ಚಯಿಸಿದರು. ಅನಂತರ 2 ಸಾವಿರ ಯಮನ್ ನಿವಾಸಿಗಳು ಮತ್ತು 2 ಸಾವಿರ ನಜದಿನ ನಿವಾಸಿಗಳು ಸೈನ್ಯದಲ್ಲಿ ಸೇರಿದರು. ಮಾರ್ಗದಲ್ಲಿ ಬನೂ ಅಸದಿನ ಮೂರು ಸಾವಿರ ವ್ಯಕ್ತಿಗಳು ಮತ್ತು ಅಶ್‌ಅಶ್ ಬಿನ್ ಖೈಸ್ ಖಂದಿಯ ಒಂದು ಸಾವಿರ ಏಳುನೂರು ವ್ಯಕ್ತಗಳೊಂದಿಗೆ ಭಾಗಿಯಾದರು. ಮುಸ್ಲಿಮರು ಸೈನ್ಯ ಮೆಲ್ಲಮೆಲ್ಲನೆ 30 ಸಾವಿರಕ್ಕಿಂತ ಹೆಚ್ಚಾಯಿತು. ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್‌ರೊಂದಿಗೆ ಬದ್ರ್ ಯುದ್ಧದಲ್ಲಿ ಭಾಗಿಯಾಗಿದ್ದ 99 ಸಹಾಬಿಗಳು ಇದ್ದರು ಎಂಬುದರಿಂದ ಈ ಸೈನ್ಯದ ಪ್ರಾಮುಖ್ಯತೆಯ ಅಂದಾಜು ಆಗುತ್ತದೆ. ಅವರ ಸಂಖ್ಯೆ ಎಪ್ಪತ್ತಕ್ಕಿಂತ ಹೆಚ್ಚಾಗಿತ್ತು ಎಂದು ತಬರಿ ಹೇಳಿರುವರು. ಇಸ್ಲಾಮಿನ ಆರಂಭದಿಂದ ಹಿಡಿದು ಬೈಅತೇ ರಿಝ್ವಾನಿನಲ್ಲಿ ಇದ್ದ ಮುನ್ನೂರ ಹತ್ತಕ್ಕಿಂತ ಹೆಚ್ಚು ಸಹಾಬರು ಸಹ ಇದರಲ್ಲಿ ಭಾಗಿಯಾಗಿದ್ದರು. ಮಕ್ಕಾ ವಿಜಯದಲ್ಲಿ ಭಾಗಿಯಾಗಿದ್ದ 300ಕ್ಕಿಂತ ಹೆಚ್ಚು ಸಹಾಬಿಗಳು ಇದರಲ್ಲಿ ಭಾಗಿಯಾಗಿದ್ದರು. ಸ್ವತಃ ಸಹಾಬಿಯಲ್ಲದಿದ್ದರೂ ಸಹಾಬಿಯರ ಮಕ್ಕಳಾಗಿದ್ದ 700 ವ್ಯಕ್ತಿಗಳು ಸಹ ಇದ್ದರು. ಹಝ್ರತ್ ಸಅದ್ ಬಿನ್ ವಖಾಸ್ ಶರಾಫಿಗೆ ತಲುಪಿ ತಂಗಿದರು. ಮುಸನ್ನನ 8 ಸಾವಿರ ವ್ಯಕ್ತಿಗಳೊಂದಿಗೆ ದ್ಸೂಖಾರ್‌ನಲ್ಲಿ ಮುಸ್ಲಿಮರ ನೆರವಿನ ಪ್ರತೀಕ್ಷೆಯಲ್ಲಿ ತಂಗಿದ್ದರು. ಅದೇ ವೇಳೆ ಮುಸನ್ನ ನಿಧನರಾದರು. ಅವರು ಬಶೀರ್ ಬಿನ್ ಖಸಾಸಿಯರನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದ್ದರು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-299-302, ದಾರುಲ್

ಕುತುಬ್ ಇಲ್ಮಿಯ ಬೈರೂತ್ 2006) (ಮುಜಮುಲ್ ಬಲದಾನ್, ಸಂಪುಟ-4, ಪುಟ-333)

ಹಝ್ರತ್ ಉಮರ್(ರ) ಮುಗ್ಗೈರ ಬಿನ್ ಶುಅ್‌ಬರನ್ನು ಒಂದು ತುಕಡಿಯೊಂದಿಗೆ ರವಾನಿಸಿದರು ಮತ್ತು ಮುಗ್ಗೈರ ಬಿನ್ ಶೂಬರನ್ನು ತನ್ನ ನೇತೃತ್ವದ ಅಡಿಯಲ್ಲಿ ಇರಿಸಲು ಹಝ್ರತ್ ಸಅದ್‌ರಿಗೆ ಪತ್ರ ಬರೆದರು. ಹಝ್ರತ್ ಉಮರರ ಅನ್ವೇಷಣೆಯ ಮೇರೆಗೆ ಹಝ್ರತ್ ಸಅದ್(ರ) ತನ್ನ ಸೈನ್ಯದ ಸಿದ್ಧತೆ ಮತ್ತು ಸುತ್ತಲಿನ ಗಡಿಗಳ ಕುರಿತು ವಿಶದವಾಗಿ ಬರೆದು ಕಳುಹಿಸಿದರು. ಆಗ ಯಾವ ರೀತಿಯಲ್ಲಿ ಯುಕ್ತಿಯಿಂದ ಯುದ್ಧ ಮಾಡಬೇಕೆಂದು ಹಝ್ರತ್ ಉಮರ್(ರ) ಸಅದ್‌ರಿಗೆ ನಿರ್ದೇಶಿಸಿದರು. (ಅತ್ತಾರೀಖ್ ಅತ್ತಿಬರಿ, ಸಂಪುಟ-4, ಪುಟ-115-116, ದಾರುಲ್ ಫೀಕರ್ 2002)

ಮತ್ತೊಂದು ಪತ್ರದಲ್ಲಿ ಹಝ್ರತ್ ಉಮರ್(ರ) ಹಝ್ರತ್ ಸಅದ್‌ರಿಗೆ ಹೀಗೆ ಪತ್ರ ಬರೆದರು: ನಿನ್ನ ಹೃದಯಕ್ಕೆ ನೀನು ಉಪದೇಶ ನೀಡುತ್ತಿರು. ನಿನ್ನ ಸೈನ್ಯಕ್ಕೆ ನೀನು ಉಪದೇಶ ಕೊಡುತ್ತಿರು. ಸಹನೆಯನ್ನು ಕೈಗೊಳ್ಳು. ಸಹನೆಯನ್ನು ಕೈಗೊಳ್ಳು. ಏಕೆಂದರೆ ಅಲ್ಲಾಹನ ಕಡೆಯಿಂದ ಪ್ರತಿಫಲ ಉದ್ದೇಶದ ಅನುಸಾರ ಲಭಿಸುತ್ತದೆ. ನಿನ್ನ ಮೇಲೆ ಇರುವ ಜವಾಬ್ದಾರಿಯನ್ನು, ನೀನು ಮಾಡುತ್ತಿರುವ ಕೆಲಸವನ್ನು ಬಹಳ ಎಚ್ಚರಿಕೆಯಿಂದ ಮಾಡು. ಅತ್ಯಂತ ಎಚ್ಚರಿಕೆಯಿಂದ ಮಾಡು. ಅಲ್ಲಾಹನೊಡನೆ ಸಂರಕ್ಷಣೆಯನ್ನು ಬೇಡು. **ಲಾ ಹೌಲ ವಲಾ ಖುವ್ವತ ಇಲ್ಲಾ ಬಿಲ್ಲಾಹ್** ಬಹಳ ಹೆಚ್ಚಾಗಿ ಓದುತ್ತಿರು. ನಿನ್ನ ಸೈನ್ಯ ಎಲ್ಲಿ ತನಕ ತಲುಪಿದೆ ಎಂದು ನನಗೆ ತಿಳಿಸು. ನಿನ್ನ ಎದುರಾಗಿ ಶತ್ರುಗಳ ಸೇನಾಧಿಪತಿಯಾಗಿ ಯಾರನ್ನು ಅವರು ನಿಶ್ಚಯಿಸಿರುವರು ಎಂದು ನನಗೆ ತಿಳಿಸು. ಏಕೆಂದರೆ ನಿಮ್ಮ ಮತ್ತು ನಿಮ್ಮ ಶತ್ರುಗಳ ಕೆಲವು ಸ್ಥಿತಿಗತಿಗಳ ಬಗ್ಗೆ ನನಗೆ ಸರಿಯಾಗಿ ಅರಿವಿಲ್ಲದ ಕಾರಣ ನಾನು ಹೇಳಲು ಬಯಸುವ ಕೆಲವು ನಿರ್ದೇಶನಗಳನ್ನು ಹೇಳಲು ಸಾಧ್ಯವಾಗಿಲ್ಲ. ಎಲ್ಲ ಸ್ಥಿತಿಗತಿಗಳ ಬಗ್ಗೆ ನನಗೆ ಬರೆದು ಕಳುಹಿಸು. ಅನಂತರ ನಾನು ಹೆಚ್ಚಿನ ನಿರ್ದೇಶನಗಳನ್ನು ನಿಮಗೆ ಕೊಡುತ್ತೇನೆ. ಒಟ್ಟಿನಲ್ಲಿ ಮುಸ್ಲಿಮರ ಸೈನ್ಯದ ಅವಸ್ಥೆ ಹಾಗೂ ನಿಮ್ಮ ಮತ್ತು ಇರಾನಿನ ರಾಜಧಾನಿಯಾದ ಮದಾಇನಿನ ನಡುವೆ ಇರುವ ಆ ಪ್ರದೇಶದ ಸ್ಥಿತಿಯನ್ನು ನನಗೆ ಬರೆದು ತಿಳಿಸು. ನಾನು ನನ್ನ ಕಣ್ಣುಗಳಿಂದ ಕಾಣುವ ರೀತಿಯಲ್ಲಿ. ಎಂದರೆ ಸಣ್ಣ ಸಣ್ಣ ಸಂಗತಿಗಳನ್ನು ಕೂಡ ವಿಶದವಾಗಿ ಬರೆದು ತಿಳಿಸು. ನಿಮ್ಮ ಎಲ್ಲ ಸ್ಥಿತಿಗತಿಗಳನ್ನು ನನಗೆ ವಿಶದವಾಗಿ ಬರೆಯಿರಿ. ಅಲ್ಲಾಹನನ್ನು ಹೆದರಿರಿ. ಅವನಲ್ಲಿ ಪ್ರತೀಕ್ಷೆ ಇರಿಸು. ನಿಮ್ಮ ಕೆಲಸದ ವಿಷಯದಲ್ಲಿ ಅವನೇ ಮೇಲೇ ಭರವಸೆ ಇರಿಸು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-387, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012) (ಪ್ರಬಂಧ: 'ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯದ ಮಯರ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-50-51)

ಅಂದರೆ ಅಲ್ಲಾಹನು ಇಚ್ಛಿಸುವನಾದರೆ ಈ ಕೆಲಸದ ಈಡೇರಿಕೆಗಾಗಿ ನಿಮ್ಮ ಬದಲಿಗೆ ಬೇರೆ ಸಮುದಾಯವನ್ನು ತರಬಲ್ಲನು ಎಂಬ ಸಂಗತಿಯನ್ನು ಯಾವಾಗಲೂ ನೆನಪಿಡಬೇಕು. ನಿಮ್ಮನ್ನು ಗುತ್ತೇದಾರರನ್ನಾಗಿ ಅಲ್ಲಾಹನು ಮಾಡಿಲ್ಲ. ನೀವು ಈ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಅಲ್ಲಾಹನು ನಿಮ್ಮನ್ನು ಈ ಕೆಲಸದಿಂದ ತೆಗೆದುಹಾಕಿ ಬೇರೆ ಯಾರನ್ನಾದರು ಈ ಕೆಲಸವನ್ನು ಈಡೇರಿಸಲಿಕ್ಕಾಗಿ ತರುವನು. ಈ ಕೆಲಸವಂತು ಆಗಿಯೇ ಆಗುವುದು.

ಹಝ್ರತ್ ಸಅದ್(ರ) ಖಲೀಫರ ನಿರ್ದೇಶನ ಪ್ರಕಾರ ಒಂದು ತಿಂಗಳು ಖಾದಿಸಿಯದಲ್ಲಿ ತಂಗಿದರು. ಇರಾನಿಯರ ಕಡೆಯಿಂದ ಹೋರಾಟಕ್ಕಾಗಿ ಯಾರೂ ಬರದೇ ಇದ್ದಾಗ ಆ ಪ್ರದೇಶದ ಜನರು ಯಝ್ದಜರ್ದ್‌ರಿಗೆ ಮುಸ್ಲಿಮರ ಇರುವಿಕೆಯ ಬಗ್ಗೆ ಬರೆದು ತಿಳಿಸಿದರು. ಆಗ ಯಝ್ದಿಜರ್ದ್ ರುಸ್ತಮ್‌ರನ್ನು ಕರೆದರು. ಆದರೆ ಅವನು ನೆಪಗಳನ್ನು ಮಾಡಿಕೊಂಡು ಯುದ್ಧದಲ್ಲಿ ಭಾಗವಹಿಸುವುದರಿಂದ ದೂರವಿದ್ದನು ಮತ್ತು ತನ್ನ ಸ್ಥಾನದಲ್ಲಿ ಜಾಲೀನೂಸ್‌ರನ್ನು ಸೈನ್ಯದ ಸೇನಾಧಿಪತಿಯನ್ನಾಗಿ ನಿಶ್ಚಯಿಸಲು ಸಲಹೆ ಕೊಟ್ಟನು. ಅರಸನ ಮುಂದೆ ರುಸ್ತಮಿನ ನೆಪಗಳು ಫಲಿಸಲಿಲ್ಲ ಮತ್ತು ಅವನಿಗೆ ಸೈನ್ಯದ ನೇತೃತ್ವ ವಹಿಸಬೇಕಾಗಿ ಬಂತು.

ರುಸ್ತಮಿಗೆ ಇಸ್ಲಾಮಿನ ಸಂದೇಶವನ್ನು ತಿಳಿಸಲು ವಿವೇಕಯುತ, ಬುದ್ಧಿವಂತ ಮತ್ತು ಧೈರ್ಯಶಾಲಿ ಜನರನ್ನು ಕಳುಹಿಸಬೇಕೆಂದು ಹಝ್ರತ್ ಸಅದ್‌ರಿಗೆ(ರ) ಹಝ್ರತ್ ಉಮರ್(ರ) ಪತ್ರ ಬರೆದರು. ಹಾಗೆಯೇ ಹೋಗಿ ಯುದ್ಧ ಮಾಡುವುದಲ್ಲ. ಅವರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಬೇಕು. ಇರಾನಿನ ಅರಸನಾದ ಯಝ್ದಿಜರ್ದಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಲು ಹಝ್ರತ್ ಸಅದ್(ರ) 14 ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಪ್ರತಿನಿಧಿಗಳನ್ನಾಗಿಸಿ ಕಳುಹಿಸಿದರು. ಈ ಪ್ರತಿನಿಧಿಗಳು ಕುದುರೆಗಳ ಮೇಲೆ ಸವಾರರಾಗಿದ್ದರು. ಚಾದರವನ್ನು ತಮ್ಮ ಮೇಲೆ ಹಾಕಿದ್ದರು. ಅವರ ಕೈಯಲ್ಲಿ ಬಡಿಗೆಯಿತ್ತು. ಮೊತ್ತ ಮೊದಲು ಹಝ್ರತ್ ನೂಮಾನ್ ಬಿನ್ ಮಖ್‌ರನ್ ಅರಸನೊಡನೆ ಮಾತುಕತೆ ನಡೆಸಿದರು. ಅನಂತರ ಮುಗ್ಗೈರ ಬಿನ್ ಝುರಾರ ಮಾತನಾಡಿದರು. ನಂತರ ಮುಗ್ಗೈರಾ ಬಿನ್ ಜರಾರ(ರ). ನಿಮ್ಮೊಂದಿಗೆ ಯುದ್ಧ ನಡೆಯುತ್ತದೆ ಅಥವಾ ನೀವು ಜಿಝ್ಯ (ತೆರಿಗೆ)ವನ್ನು ಪಾವತಿಸಬೇಕಾಗುತ್ತದೆ ಎಂದು ಹೇಳಿದರು. ನಮ್ಮ ಅಧೀನ ಅಧಿಕಾರಿಗಳಿಗೆ ಗೌರವ ಸಲ್ಲಿಸುವುದು ಅಥವಾ ಯುದ್ಧಕ್ಕೆ ಸಿದ್ಧರಾಗಿರುವುದು ಈಗ ನಿಮಗೆ ಬಿಟ್ಟದ್ದು. ಆದಾಗ್ಯೂ, ಮೂರನೆಯ ವಿಷಯವಿದೆ. ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ, ಎಲ್ಲದರಿಂದಲೂ ನಿಮ್ಮನ್ನು ನೀವು ರಕ್ಷಿಸಿಕೊಳ್ಳುತ್ತೀರಿ. ಇದನ್ನು ಕುರಿತು ಯಝ್ದಜರ್ದ್ ಹೇಳಿದನು: "ದೂತರನ್ನು ನಿಷೇಧಿಸದಿದ್ದರೆ, ನಾನು ನಿಮ್ಮೆಲ್ಲರನ್ನೂ ಕೊಲ್ಲುತ್ತಿದ್ದೆ" ನಿಮಗಾಗಿ ನನ್ನ ಬಳಿ ಏನೂ ಇಲ್ಲ. ಇಲ್ಲಿಂದ ಹೊರಟು ಹೋಗಿ ಎಂದನು. ಅನಂತರ ಅವನು ಮಣ್ಣಿನ ಒಂದು ಬುಟ್ಟಿ ತರೆಸಿ ನನ್ನಿಂದ ಇದನ್ನು ತೆಗೆದುಕೊಳ್ಳಿ" ಎಂದು ಹೇಳಿದನು. ಅದೇ ರೀತಿ ಈ ದೂತರನ್ನು ಮದಾಇನ್‌ನ ಬಾಗಿಲಿನಿಂದ ಹೊರಹಾಕಿರಿ ಎಂದು ಆದೇಶಿಸಿದನು. ಆಸಿಮ್ ಬಿನ್ ಅಮರ್ ಆ ಮಣ್ಣನ್ನು ತೆಗೆದುಕೊಂಡು ಹಝ್ರತ್ ಸಅದ್ ಗೆ ನೀಡುತ್ತಾ, "ಒಳ್ಳೆಯ ಸುದ್ದಿ, ಅಲ್ಲಾಹನು ಸರ್ವಶಕ್ತನು ನಮಗೆ ಈ ದೇಶದ ಬೀಗಗಳನ್ನು ನೀಡಿದ್ದಾನೆ" ಎಂದು ಹೇಳಿದರು. ಈ ಘಟನೆಯ ನಂತರ ಹಲವು ತಿಂಗಳುಗಳ ಕಾಲ ಎರಡೂ ಕಡೆ ಮೌನವಿತ್ತು. ರುಸ್ತಮ್ ತನ್ನ ಸೈನ್ಯದೊಂದಿಗೆ ಸಾಬಾತ್‌ನಲ್ಲಿಯೇ ಇದ್ದನು ಮತ್ತು ಯಝ್ದಜರ್ದ್‌ನ ಒತ್ತಾಯದ ಹೊರತಾಗಿಯೂ ಯುದ್ಧವನ್ನು ತಪ್ಪಿಸಿದನು. ನಮ್ಮನ್ನು ರಕ್ಷಿಸು ಇಲ್ಲದಿದ್ದರೆ ನಾವು ಅರೇಬಿಯಾದವರಿಗೆ ವಿಧೇಯರಾಗುತ್ತೇವೆ ಎಂದು ಜನರು ಪದೇ ಪದೇ ಯಝ್ದಜರ್ದ್‌ಗೆ ಹೇಳಿದರು. ಇದಕ್ಕಾಗಿ ರುಸ್ತಮ್ ಅನ್ನು ಬಲವಂತವಾಗಿ ಮುನ್ನಡೆಯಬೇಕಾಯಿತು, ಮತ್ತು ಇರಾನಿನ ಸೈನ್ಯವು ಸಾಬಾತ್‌ನಿಂದ ಹೊರಬಂದಿತು ಮತ್ತು ಖಾದಿಸಿಯಾ ಕ್ಷೇತ್ರದಲ್ಲಿ ಬೀಡುಬಿಟ್ಟಿತು. ರುಸ್ತಮ್ ಸಾಬಾತ್ ಅನ್ನು ತೊರೆದಾಗ, ಅವನ ಸೈನ್ಯವು 120,000 ರಷ್ಟಿತ್ತು ಮತ್ತು ಅವನ ಬಳಿ 33 ಆನೆಗಳು ಇದ್ದವು. ರುಸ್ತಮ್ ಮದಾಇನ್‌ದಿಂದ ಕಾದಿಸಿಯಾ ತಲುಪಲು ನಾಲ್ಕು ತಿಂಗಳು ತೆಗೆದುಕೊಂಡಿತು. ರುಸ್ತಮ್ ಮರುದಿನ ಬೆಳಿಗ್ಗೆ ಖಾದಿಸಿಯಾದಲ್ಲಿ ಬೀಡುಬಿಟ್ಟ ನಂತರ ಇಸ್ಲಾಮಿನ ಸೈನ್ಯವನ್ನು ಪರೀಕ್ಷಿಸಿದನು ಮತ್ತು ಮುಸ್ಲಿಮರಿಗೆ ಮರಳಲು ಮತ್ತು ಸಂಧಾನ ಮಾಡಿಕೊಂಡು ಹಿಂದಿರುಗುವಂತೆ ಕೋರಿಕೆ ನೀಡಿದನು. ಅದಕ್ಕೆ ಮುಸ್ಲಿಮರು ಉತ್ತರಿಸಿದರು ನಾವು ಲೌಕಿಕ ಲಾಲಾಸೆಗೆ ಬಂದಿಲ್ಲ, ಆದರೆ ನಮ್ಮ ಗುರಿ ಪರಲೋಕವಾಗಿದೆ. ಮುಸ್ಲಿಂ ರಾಯಭಾರಿಗಳು ತಮ್ಮ ನ್ಯಾಯಾಲಯಕ್ಕೆ ಮಾತುಕತೆಗೆ ಬರಬೇಕೆಂದು ರುಸ್ತಮ್ ಒತ್ತಾಯಿಸಿದರು. ರುಸ್ತಮ್ ಆಸ್ಥಾನದಲ್ಲಿ ಸೊಗಸಾದ ಮತ್ತು ಅಮೂಲ್ಯವಾದ ರತ್ನಗಂಬಳಿಗಳನ್ನು ಹಾಕಲಾಯಿತು ಮತ್ತು ಸಂಪೂರ್ಣ ಅಲಂಕಾರವನ್ನು ಏರ್ಪಡಿಸಲಾಯಿತು. ರುಸ್ತಮ್‌ಗಾಗಿ ಚಿನ್ನದ ಸಿಂಹಾಸನವನ್ನು ಹಾಕಲಾಯಿತು ಮತ್ತು ಅದನ್ನು ಚಿನ್ನದ ದಾರಗಳಿಂದ ಮಾಡಿದ ರತ್ನಗಂಬಳಿಗಳು ಮತ್ತು ದಿಂಬುಗಳಿಂದ ಸುಂದರವಾಗಿ ಅಲಂಕರಿಸಲಾಗಿತ್ತು. ಮುಸ್ಲಿಮರ ಪರವಾಗಿ, ಮೊದಲು ಹೋದವರು ಹಝ್ರತ್ ರಬಿ ಬಿನ್ ಅಮೀರ್(ರ) ಆಗಿದ್ದರು. ಅವರು ರುಸ್ತಮ್‌ಗೆ ಹೋದರು: ಅವರು ತನ್ನ ಈಟಿಯ ಸಹಾಯದಿಂದ ಸಣ್ಣ ಹೆಜ್ಜೆಗಳನ್ನು ಹಾಕುತ್ತಿದ್ದರು, ಇದು ಕಾರ್ಪೆಟ್ ಮತ್ತು ಹಾಸಿಗೆ ಈಟಿಯ ತುದಿಯಿಂದ ಹರಿದುಹೋಗಲು ಕಾರಣವಾಯಿತು. ಅವರು ರುಸ್ತಮ್ ಬಳಿ ತಲುಪಿದರು ಮತ್ತು ಕೆಳಗೆ ಕುಳಿತುಕೊಂಡರು ಮತ್ತು ತಮ್ಮ ಈಟಿಯನ್ನು ಕಾರ್ಪೆಟ್‌ನಲ್ಲಿ ಹೊಡೆದರು. ಹಝ್ರತ್ ರಬಿ ರುಸ್ತಮ್ ಮುಂದೆ ಮೂರು ವಿಷಯಗಳನ್ನು ಪ್ರಸ್ತಾಪಿಸಿದರು (1) ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ, ನಾವು ನಿಮ್ಮನ್ನು ಬಿಟ್ಟು ಹೋಗುತ್ತೇವೆ ಮತ್ತು ನಿಮ್ಮ ದೇಶದ ಬಗ್ಗೆ ನಮಗೆ ಯಾವುದೇ ಕಾಳಜಿ ಇಲ್ಲ. ಸರಿ, ದೇಶವನ್ನು ನೋಡಿಕೊಳ್ಳಿ, (2) ನೀವು ನಿಮ್ಮನ್ನು ರಕ್ಷಿಸಿಕೊಳ್ಳಲು ನಮಗೆ ಜಿಝಿಯವನ್ನು ನೀಡಿರಿ ಅದನ್ನು ನಾವು ಸ್ವೀಕರಿಸಿ ನಿಮಗೆ ರಕ್ಷಣೆ ನೀಡುವೆವು. ಜಿಝಿಯ ಪಾವತಿಸಿ, ನಂತರ ನಾವು ನಿಮ್ಮನ್ನು ರಕ್ಷಿಸುತ್ತೇವೆ. (3) ಯಾವುದೇ ಪ್ರಕರಣವನ್ನು ಅನುಮೋದಿಸದಿದ್ದರೆ, ನಾಲ್ಕನೇ ದಿನ ನಿಮ್ಮೊಂದಿಗೆ ಯುದ್ಧವಾಗುತ್ತದೆ. ಈ ಮೂರು ದಿನಗಳಲ್ಲಿ, ನಾವು ಯುದ್ಧವನ್ನು ಪ್ರಾರಂಭಿಸುವುದಿಲ್ಲ. ಆದರೆ ನಾಲ್ಕನೇ ದಿನ ಯುದ್ಧ ನಡೆಯುತ್ತದೆ, ಆದರೆ ಈ ಮೂರು ದಿನಗಳಲ್ಲಿ ನಾವು ಯುದ್ಧ ಆರಂಭಿಸುವುದಿಲ್ಲ. ಆದರೆ ನೀವು ಯುದ್ಧವನ್ನು ಪ್ರಾರಂಭಿಸಿದರೆ, ನಾವು ಯುದ್ಧವಾಡಲು ಒತ್ತಾಯಿಸಲ್ಪಡುತ್ತೇವೆ. ಮರುದಿನ, ಹಝ್ರತ್ ಸಾದ್(ರ) ಹುಧೈಫ ಬಿನ್ ಮುಹ್ಸಿನ್‌ರನ್ನು ಕಳುಹಿಸಿದರು. ಅವರು ಹಝ್ರತ್ ರಬಿಯವರ

ಮೂರು ವಿಷಯಗಳನ್ನು ಪುನರಾವರ್ತಿಸಿದರು. ಮೂರನೇ ದಿನ, ಹಝ್ರತ್ ಮುಗ್ಯೈರ ಬಿನ್ ಶಿಬಾ(ರ) ಹೋದರು. ಅವರು ಇಸ್ಲಾಂ, ಜಿಝಿಯ ಮತ್ತು ಅವರ ಮೊದಲ ಇಬ್ಬರು ಸಹಚರರಂತೆ ತಮ್ಮ ಮಾತಿನ ಕೊನೆಯಲ್ಲಿ ಯುದ್ಧದ ಬಗ್ಗೆ ಪ್ರಸ್ತಾಪಿಸಿದಾಗ ರುಸ್ತಮ್ ಹೇಳಿದನು ಆಗ ನೀವು ಖಂಡಿತವಾಗಿಯೂ ಮರಣ ಹೊಂದುವಿರಿ. ಅದಕ್ಕೆ ಹಝ್ರತ್ ಮುಗ್ಯೈರ ಹೇಳಿದರು, “ನಮ್ಮಲ್ಲಿ ಯಾರನ್ನು ಕೊಲ್ಲಲಾಗುತ್ತದೆಯೋ ಅವರು ಸ್ವರ್ಗಕ್ಕೆ ಪ್ರವೇಶಿಸುವರು ಮತ್ತು ನಿಮ್ಮಲ್ಲಿ ಯಾರು ಕೊಲ್ಲಲ್ಪಡುತ್ತಾರೋ ಅವರು ನರಕಕ್ಕೆ ಹೋಗುವರು ಅದೇ ರಿತಿ ನಾವು ಬದುಕಿರುವವರು ನಿಮ್ಮ ಮೇಲೆ ವಿಜಯಶಾಲಿಯಾಗುವರು.” ಹಝ್ರತ್ ಮುಗ್ಯೈರರವರ ಮಾತುಗಳನ್ನು ಕೇಳಿದ ರುಸ್ತಮ್ ತುಂಬಾ ಕೋಪಗೊಂಡನು ಮತ್ತು ತಾನು ಸೂರ್ಯನ ಮೇಲೆ ಪ್ರಮಾಣ ಮಾಡಿ ಹೇಳಿದನು ನಾಳೆ ಸೂರ್ಯ ಮುಳುಗುವುದಕ್ಕು ಮುಂಚೆ ನಾವು ನಿಮ್ಮೆಲ್ಲರನ್ನು ನಾಶಗೊಳಿಸುವೆವು ಎಂದು ಪ್ರತಿಜ್ಞೆ ಮಾಡಿದನು.

ಹಝ್ರತ್ ಮುಗ್ಯೈರ ನಂತರವೂ, ಹಝ್ರತ್ ಸಾದ್ ಕೆಲವು ಬುದ್ಧಿವಂತ ಮುಸ್ಲಿಮರನ್ನು ರುಸ್ತಮ್ ಆಸ್ಥಾನಕ್ಕೆ ಕಳುಹಿಸಿದನು, ಅವರು ಸಂಜೆ ಮರಳಿದರು. ಹಝ್ರತ್ ಸಅದ್ ಮುಸ್ಲಿಮರನ್ನು ಮುಂಭಾಗವನ್ನು ಮುಚ್ಚುವಂತೆ ಆದೇಶಿಸಿದನು ಮತ್ತು ಇರಾನಿಯನ್ನರಿಗೆ ನದಿ ದಾಟುವುದು ನಿಮ್ಮ ಕೆಲಸವಾಗಿದೆ ಎಂದು ಸಂದೇಶ ಕಳುಹಿಸಿದನು. ಈ ಸೇತುವೆಯನ್ನು ಮುಸ್ಲಿಮರು ಆಕ್ರಮಿಸಿಕೊಂಡಿದ್ದರು, ಆದ್ದರಿಂದ ಇರಾನಿಯನ್ನರು ರಾತ್ರಿಯಿಡೀ ಅತೀಕ್ ನದಿಯ ಮೇಲೆ ಸೇತುವೆಯನ್ನು ನಿರ್ಮಿಸಬೇಕಾಯಿತು. “ನಾಳೆ ನಾವು ಮುಸ್ಲಿಮರನ್ನು ಹತ್ತಿಕ್ಕುತ್ತೇವೆ” ಎಂದು ರುಸ್ತಮ್ ಅವರು ಸೇತುವೆಯನ್ನು ದಾಟುವಾಗ ಹೇಳಿದನು. ಸಹಚರರಲ್ಲಿ ಒಬ್ಬರು, “ಅಲ್ಲಾಹನು ಬಯಸಿದರೆ” ಎಂದು ಹೇಳಿದರು. ಬಹುಶಃ ಅವನು ಅಲ್ಲಾಹನನ್ನೂ ನಂಬಿದ್ದಿರಬಹುದು. ರುಸ್ತವ್ ಈ ಬಗ್ಗೆ ಹೇಳಿದನು! ಅಲ್ಲಾಹ್ ಬಯಸದಿದ್ದರೂ,(ನಊರುಝುಬಿಲ್ಲಾಹ್) ನಾವು ಅವರನ್ನು ಹತ್ತಿಕ್ಕುತ್ತೇವೆ. ಮುಸ್ಲಿಮರು ತಮ್ಮ ಪಂಕ್ತಿಯನ್ನು ಪೂರ್ಣಗೊಳಿಸಿದರು ಮತ್ತು ಹಝ್ರತ್ ಸಅದ್(ರ) ಅವರ ದೇಹದ ಮೇಲೆ ಹುಣ್ಣುಗಳು ಕಾಣಿಸಿಕೊಂಡಿತು. ಈ ಸಮಯದಲ್ಲಿ ಅವರು ಅನಾರೋಗ್ಯಕ್ಕೆ ಒಳಗಾದರು, ಬಾವು ಹೊಂದಿದ್ದರು ಮತ್ತು ಸಿಯಾಟಿಕಾ ಕಾಯಿಲೆಯಿಂದ ಕುಳಿತುಕೊಳ್ಳಲು ಸಹ ಸಾಧ್ಯವಾಗಲಿಲ್ಲ. ಅವರು ತಮ್ಮ ಎದೆಯ ಮೇಲೆ ಮಲಗುತ್ತಿದ್ದರು. ಅವರ ಎದೆಯ ಕೆಳಗೆ ಒಂದು ದಿಂಬು ಇರುತ್ತಿತ್ತು, ಅದರ ಸಹಾಯದಿಂದ ಅವರು ತಮ್ಮ ಅರಮನೆಯ ಮೇಲ್ಛಾವಣಿಯಿಂದ ಅಥವಾ ಮರದ ಮೇಲೆ ಮಾಡಿದ ಸ್ಕ್ಯಾಫೋಲ್ಡಿಂಗ್‌ನಿಂದ ಸೈನ್ಯವನ್ನು ನೋಡುತ್ತಿದ್ದರು. ಹಝ್ರತ್ ಸಾದ್ ಖಾಲಿದ್ ಬಿನ್ ಅರಾಫತ್ ಅವರನ್ನು ಉಪನಾಯಕರನ್ನಾಗಿ ನೇಮಿಸಿದರು. ಹಝ್ರತ್ ಸಾದ್ ಮುಸ್ಲಿಮರನ್ನು ಉದ್ದೇಶಿಸಿ ಅವರನ್ನು ಹೋರಾಡಲು ಪ್ರೋತ್ಸಾಹಿಸಿದರು ಮತ್ತು ಅಲ್ಲಾಹನ ವಿಜಯದ ಭರವಸೆಯನ್ನು ನೆನಪಿಸಿದರು.

ಪಾರ್ಸಿಯನ್ನರ ಸೈನ್ಯವು ಅತೀಕ್ ನದಿಯ ದಡದಲ್ಲಿತ್ತು. ಅತೀಕ್ ನದಿಯು ಯೂಫ್ರೇಟೀಸ್‌ನಿಂದ ಹರಿಯುವ ನದಿಯಾಗಿದೆ ಮತ್ತು ಮುಸ್ಲಿಂ ಪಡೆಗಳು ಖುದೈಸ್ ಗೋಡೆ ಮತ್ತು ಕಂದಕದ ಉದ್ದಕ್ಕೂ ಇದ್ದವು. ಖುದೈಸ್ ಖಾದಸೀಯದ ಬಳಿ ಒಂದು ಗಡಿ ಇದೆ ಅದು ಅತೀಕ್ ನದಿಯಿಂದ ಒಂದು ಮೈಲಿ ದೂರದಲ್ಲಿದೆ. ಇರಾನಿನ ಸೇನೆಯ ಮೂವತ್ತು ಸಾವಿರ ಜನರನ್ನು ಒಟ್ಟಿಗೆ ಬಂಧಿಸಲಾಗಿದೆ, ಅಂದರೆ ಯಾರೂ ಓಡದಂತೆ ಅವರನ್ನು ಒಟ್ಟಿಗೆ ಬಂಧಿಸಲಾಗಿದೆ. ಹಝ್ರತ್ ಸಾದ್ ಮುಸ್ಲಿಮರಿಗೆ ಸೂರಾ ಅನ್ಫಲ್ ಪಠಿಸುವಂತೆ ಆದೇಶಿಸಿದರು. ಪಠಣ ನಡೆದಾಗ, ಮುಸ್ಲಿಮರು ನೆಮ್ಮದಿಯನ್ನು ಅನುಭವಿಸಿದರು. ಝುಹರ್ ನಮಾಝ್‌ನ ನಂತರ, ಮುಸ್ಲಿಮರು ಮತ್ತು ಪರ್ಷಿಯನ್ನರ ನಡುವೆ ಯುದ್ಧ ನಡೆಯಿತು. ಅವರು ಮುಸ್ಲಿಮರಿಗೆ ಸಾಕಷ್ಟು ಹಾನಿ ಮಾಡಿದರು. ಬಾನು ತಮೀಮ್ ಗೋತ್ರದ ಪರಿಣಿತ ಬಿಲ್ಲುಗಾರರನ್ನು ಕರೆದು ಹಝ್ರತ್ ಆಸಿಮ್(ರ) ತನ್ನ ಬಾಣಗಳಿಂದ ಈ ಆನೆಗಳ ಮೇಲೆ ಕುಳಿತಿರುವ ಸವಾರರ ಮೇಲೆ ದಾಳಿ ಮಾಡಲು ಆದೇಶಿಸಿದರು ಮತ್ತು ವೀರ ಸೈನಿಕರಿಗೆ ಆನೆಗಳ ಹಿಂದೆ ಹೋಗಿ ಅವರ ಅಂಬಾರಿಯ ಬಂಧನಗಳನ್ನು ಕತ್ತರಿಸುವಂತೆ ಆದೇಶಿಸಿದರು. ಹೀಗೆ ಮಾಡಿದರಿಂದ ಆನೆಯ ಮೇಲಿದ್ದ ಸವಾರ ಅಥವಾ ಸಾಮಾನುಗಳು ಉಳಿಯಲಿಲ್ಲ. ಸೂರ್ಯಾಸ್ತದವರೆಗೂ ಹೋರಾಟ ಮುಂದುವರೆಯಿತು. ಮೊದಲ ದಿನ, ಬಾನು ಅಸದ್ ಗೋತ್ರದ ಐನೂರು ಮುಸ್ಲಿಮರು ಹುತಾತ್ಮರಾದರು. ಈ ದಿನವನ್ನು ಯೋಮ್ ಅರ್ಮಾತ್ ಎಂದು ಕರೆಯಲಾಗುತ್ತದೆ. ಮರುದಿನ ಬೆಳಿಗ್ಗೆ, ಹಝ್ರತ್ ಸಅದ್(ರ) ಎಲ್ಲಾ ಹುತಾತ್ಮರನ್ನು ಸಮಾಧಿ ಮಾಡಿದರು ಮತ್ತು ಗಾಯಾಳುಗಳನ್ನು ಮಹಿಳೆಯರಿಗೆ ಹಸ್ತಾಂತರಿಸಿದರು, ಇದರಿಂದ ಅವರು ಅವರನ್ನು ನೋಡಿಕೊಳ್ಳುತ್ತಾರೆ. ಏತನ್ಮಧ್ಯೆ, ಮುಸ್ಲಿಮರು ಸಿರಿಯಾದಿಂದ ನೆರವು ಪಡೆದರು.

ಹಝ್ರತ್ ಹಾಶಿಮ್ ಬಿನ್ ಉತ್ಬಾ ಬಿನ್ ಅಬಿ ವಕಾಸ್(ರ) ಈ ಬೆಂಬಲದ ಅಮೀರ್ ಆಗಿದ್ದರು. ಅದರ ಮುಂಭಾಗದಲ್ಲಿ ಹಝ್ರತ್ ಖಅ್‌ಖಾಅ್ ಬಿನ್ ಅಮರ್ ಇದ್ದರು. ಖಅ್‌ಖಾಅ್ ಬಹಳ ವೇಗವಾಗಿ ಪ್ರಯಣ ಮಾಡಿ ಅಪಹರಣದ ಬೆಳಿಗ್ಗೆ ಇರಾಕಿ ಸೇನೆಯನ್ನು ತಲುಪಿದ. ಕಕಾ ತನ್ನ ಮುಂಚೂಣಿಯಲ್ಲಿರುವ ಒಬ್ಬರನ್ನೊಬ್ಬರು ಸ್ವಲ್ಪ ದೂರದಲ್ಲಿ ಚಲಿಸುತ್ತಿದ್ದ ಹತ್ತು ಸೈನಿಕರ ಗುಂಪುಗಳಾಗಿ ವಿಭಜಿಸಲು ಜಾಗರೂಕರಾಗಿದ್ದರು, ಮತ್ತು ಈ ಹತ್ತು ಸೈನ್ಯಗಳು ಪರ್ಯಾಯವಾಗಿ ಇಸ್ಲಾಮಿಕ್ ಸೇನೆಯೊಂದಿಗೆ ಸೇರಿಕೊಂಡವು. ಪ್ರತಿ ತುಕಡಿಯು ಆಗಮನದೊಂದಿಗೆ, ತಕ್ಬೀರ್ ಘೋಷಣೆಗಳನ್ನು ಕೂಗಲಾಯಿತು ಮತ್ತು ಇಸ್ಲಾಮಿಕ್ ಸೈನ್ಯವು ನಿರಂತರ ಬೆಂಬಲವನ್ನು ಪಡೆಯುತ್ತಿದೆ ಎಂದು ತೋರುತ್ತಿತ್ತು. ಹಝ್ರತ್ ಖಅ್‌ಖಾಅ್(ರ) ಸ್ವತಃ ಮೊದಲ ಭಾಗವನ್ನು ತಲುಪಿದರು. ಅವರು ಹೋದ ತಕ್ಷಣ,  ಮುಸ್ಲಿಮರಿಗೆ ಸಲಾಮ್ ಮಾಡಿ ಸೈನ್ಯದ ಆಗಮನದ ಶುಭ ಸುದ್ದಿಯನ್ನು ಘೋಷಿಸಿದರು ಮತ್ತು ಹೇಳಿದರು: ಓ ಜನರೇ! ನಾನು ಮಾಡುತ್ತಿರುವುದನ್ನು ನೀವು ಮಾಡಿರೀ. ಇದನ್ನು ಹೇಳುತ್ತಾ ಆತ ಮುಂದೆ ಹೋಗಿ ಮುಬಾರಝುತ್ತನ್ನು (ಮುಂದಕ್ಕೆ ಹೋಗಿ ವಿರೋಧಿಗಳನ್ನು ಯುದ್ಧವಾಡಲು ಕೋರುವುದು) ಕೋರಿದರು. ಇದನ್ನು ಕೇಳಿದ ಬಹಮಾನ್ ಎದುರಾಡಲು ಹೊರಟನು. ಇಬ್ಬರು ಹೋರಾಡಿದರು ಮತ್ತು ಹಝ್ರತ್ ಖಅ್‌ಖಾಅ್ ಅವನನ್ನು ಕೊಂದರು. ಬಹಮಾನ್ ಜಾಝುವಿಯಾ ಮತ್ತು ಮುಸ್ಲಿಂ ಪರಿಹಾರ ಸೇನೆಯ ಹತ್ಯೆಯಿಂದ ಮುಸ್ಲಿಮರು ಹರ್ಷಗೊಂಡಿದ್ದರು. ಹಝ್ರತ್ ಖಅ್‌ಖಾಅ್ ಬಗ್ಗೆ ಹಝ್ರತ್ ಅಬೂಬಕರ್(ರ) ಅವರ ಒಂದು ಮಾತಿದೆ, ಅಲ್ಲಿ ಆತನಂತಹ ವ್ಯಕ್ತಿ ಇರುವಲ್ಲಿ ಸೈನ್ಯವು ಅಜೇಯವಾಗುತ್ತದೆ.

ಆ ದಿನ, ಇರಾನಿಯನ್ನರು ತಮ್ಮ ಆನೆಗಳೊಂದಿಗೆ ಹೋರಾಡಲು ಸಾಧ್ಯವಾಗಲಿಲ್ಲ ಏಕೆಂದರೆ ಅವರ ಅಂಬಾರಿಗಳು ಹಿಂದಿನ ದಿನ ಮುರಿದುಹೋಗಿದ್ದವು. ಆದ್ದರಿಂದ ಅವರು ಬೆಳಿಗ್ಗೆಯಿಂದ ಅದನ್ನು ಸರಿಪಡಿಸುಕೊಳ್ಳುವುದರಲ್ಲಿ ನಿರತರಾಗಿದ್ದರು ಮತ್ತು ಮುಸ್ಲಿಮರು ತಮ್ಮ ಒಂಟೆಗಳನ್ನು ಚೀಲಗಳನ್ನು ಹಾಯಿಸಿದರು, ಇದು ಒಂಟೆಗಳು ಕಣ್ಮರೆಯಾಗಲು ಕಾರಣವಾಯಿತು. ಅವರಿಗೆ ಬಟ್ಟೆಗಳನ್ನು ಹಾಕುವುದು, ಅವರ ದೇಹ ಮತ್ತು ಕುತ್ತಿಗೆ ಎಲ್ಲವನ್ನೂ ಮರೆಮಾಡಲಾಗಿದೆ ಮತ್ತು ಅದು ಆನೆಗಳಂತೆ ಕಾಣುತ್ತಿದ್ದವು. ಈ ಒಂಟೆಗಳು ಎಲ್ಲಿಗೆ ಹೋದರೂ, ಇರಾನಿಯನ್ನರ ಕುದುರೆಗಳು ಹಿಂದೆ ಮುಸ್ಲಿಮರ ಕುದುರೆಗಳು ಭಯಭೀತರಾಗುತ್ತಿದ್ದಂತೆ ಭಯಭೀತರಾಗತೊಡಗಿದವು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಎರಡು ಕಡೆಯ ಅಶ್ವಸೈನ್ಯಗಳು ಸ್ಪರ್ಧಿಗಿಳಿದವು. ಅರ್ಧ ದಿನಕ್ಕಿಂತ ಹೆಚ್ಚು ಕಳೆದಾಗ, ಒಂದು ಸಾಮಾನ್ಯ ಯುದ್ಧವು ಮಧ್ಯರಾತ್ರಿಯವರೆಗೂ ನಡೆಯಿತು. ಈ ಎರಡನೇ ದಿನವನ್ನು ‘ಅಘ್ವಾಸ್’ ದಿನ ಎಂದು ಕರೆಯಲಾಗುತ್ತದೆ ಮತ್ತು ಈ ದಿನವನ್ನು ಮುಸ್ಲಿಮರ ಹೆಸರಿಡಲಾಗಿದೆ, ಅಂದರೆ ಮುಸ್ಲಿಮರು ಅದರಲ್ಲಿ ಯಶಸ್ವಿಯಾದರು. ಮೂರನೇ ದಿನದ ಬೆಳಿಗ್ಗೆ, ಎರಡು ಸೈನ್ಯಗಳು ಯುದ್ಧವಾಡಲು ಮುಂಭಾಗದಲ್ಲಿದ್ದವು. ಆ ದಿನ ರಕ್ತಸಿಕ್ತ ಯುದ್ಧವಾಯಿತು. ಮುಸ್ಲಿಂ ಹುತಾತ್ಮರ ಸಂಖ್ಯೆಯು ಎರಡು ಸಾವಿರವಾಗಿತ್ತು ಮತ್ತು ಇರಾನಿನ ಸೇನೆಯ ಹತ್ತು ಸಾವಿರ ಸೈನಿಕರನ್ನು ಕೊಲ್ಲಲಾಯಿತು. ಮುಸ್ಲಿಮರು ತಮ್ಮ ಹುತಾತ್ಮರನ್ನು ಹೂಳುತ್ತಿದ್ದರು ಮತ್ತು ಗಾಯಗೊಂಡವರನ್ನು ಚಿಕಿತ್ಸೆಗಾಗಿ ಮಹಿಳೆಯರಿಗೆ ಹಸ್ತಾಂತರಿಸುವುದನ್ನು ಮುಂದುವರಿಸಿದರು, ಆದರೆ ಇರಾನಿನ ಸಂತ್ರಸ್ತರ ದೇಹಗಳು ಮೈದಾನದಲ್ಲಿ ಬಿದ್ದಿದ್ದವು. ಆ ರಾತ್ರಿ, ಇರಾನಿಯನ್ನರು ತಮ್ಮ ಆನೆಗಳ ಅಂಬಾರಿಗಳನ್ನು ಸರಿಪಡಿಸುವುದನ್ನು ಮುಂದುವರಿಸಿದರು. ಆನೆಗಳನ್ನು ರಕ್ಷಿಸಲು ಕಾಲಾಳುಪಡೆ ಇತ್ತು, ಆದರೆ ಇಂದಿನ ಆನೆಗಳು ಮೊದಲ ದಿನ ಮಾಡಿದಷ್ಟು ಅನಾಹುತವನ್ನು ಮಾಡಲಾರವು. ಇರಾನಿಯನ್ನರ ಬಿಳಿ ಆನೆಯನ್ನು ಓಡಿಸಲು ಹಝ್ರತ್ ಸಾದ್(ರ) ರವರು ಹಝ್ರತ್ ಖಅ್‌ಖಾಅ್(ರ) ಮತ್ತು ಹಝ್ರತ್ ಅಸಿಮ್(ರ) ಅವರಿಗೆ ಸಂದೇಶ ಕಳುಹಿಸಿದರು. ಆದ್ದರಿಂದ ಹಝ್ರತ್ ಖಅ್‌ಖಾಅ್ ಮತ್ತು ಹಝ್ರತ್ ಅಸಿಮ್ ಆತನ (ಬಿಳಿ ಆನೆಯ) ಮೇಲೆ ದಾಳಿ ಮಾಡಿ ಎರಡೂ ಕಣ್ಣುಗಳಿಗೆ ಇರಿದರು, ಇದರಿಂದ ಕಂಗೆಟ್ಟ ಆನೆ ತನ್ನ ಸವಾರನನ್ನು ಕೆಳಗೆ ಬೀಳಿಸಿತು. ಆನೆಯ ಸೊಂಡಿಲನ್ನು ಕತ್ತರಿಸಲಾಯಿತು ನಂತರ ಅವನನ್ನು ಬಾಣಗಳಿಂದ ಹೊಡೆದುರುಳಿಸಲಾಯಿತು. ತದನಂತರ ಇತರ ಮುಸ್ಲಿಮರು ಇನ್ನೊಂದು ಆನೆಯ ಕಣ್ಣಿಗೆ ಈಟಿಯನ್ನು ಎಸೆದರು. ಕೆಲವೊಮ್ಮೆ ಅವು ಓಡಿಹೋಗಿ ಮುಸ್ಲಿಮರ ಸೈನ್ಯಕ್ಕೆ ಸೇರುತ್ತಿತ್ತು, ಅವು ಅ ಈಟಿಯ ತುದಿಯಿಂದ ಚುಚ್ಚುತ್ತಿದ್ದರು ಮತ್ತು ಕೆಲವೊಮ್ಮೆ ಅವನು ಇರಾನಯನ್ನರ ಸೈನ್ಯಕ್ಕೆ ಸೇರುತ್ತಿತ್ತು ಮತ್ತು ಅವರು ಅವನನ್ನು ಈಟಿಯಿಂದ ಚುಚ್ಚುತ್ತಿದ್ದರು. ಅಂತಿಮವಾಗಿ ಅಜ್ರಾಬ್ ಎಂಬ ಆನೆ ಅತೀಕ್ ನದಿಯ ಕಡೆಗೆ ಓಡಿಹೋಯಿತು ಮತ್ತು

ಇತರ ಆನೆಗಳು ಅದರ ಹಿಂದೆ ನದಿಗೆ ಹಾರಿದವು ಮತ್ತು ಅದು ತನ್ನ ಸವಾರರೊಂದಿಗೆ ಸತ್ತು ಹೋಯಿತು. ರಾತ್ರಿಯಾಗುವವರೆಗೂ ಹೋರಾಟ ಮುಂದುವರೆಯಿತು. ಇದನ್ನು ಅಮಾಸ್ ದಿನ ಎಂದು ಕರೆಯಲಾಗುತ್ತದೆ.

ಇಶಾ ನಮಾಝ್‌ನ ನಂತರ ಮತ್ತೆ ಭೀಕರ ಯುದ್ಧವಾಯಿತು. ಆ ಸಮಯದಲ್ಲಿ ಕಮ್ಮಾರನ ಅಂಗಡಿಗಳಲ್ಲಿ ಕಬ್ಬಿಣವನ್ನು ಕತ್ತರಿಸಿದಂತೆ ಕತ್ತಿಗಳ ಶಬ್ದಗಳು ಕೇಳಿಬಂದವು ಎಂದು ಹೇಳಲಾಗಿದೆ. ಹಝ್ರತ್ ಸಾದ್(ರ) ರಾತ್ರಿಯಿಡೀ ಅಲ್ಲಾಹನನ್ನು ದುಆಮಾಡುತ್ತಲೇ ಇದ್ದರು. ಅರಬ್ಬರು ಮತ್ತು ಅರಬ್ಬರಲ್ಲದವರು ಇಂತಹ ಘಟನೆಯನ್ನು ನೋಡಿರಲಿಲ್ಲ. ಬೆಳಿಗ್ಗೆ, ಮುಸ್ಲಿಮರ ಉತ್ಸಾಹ ಉಳಿಯಿತು ಮತ್ತು ಅವರು ಮೇಲುಗೈ ಸಾಧಿಸಿದರು. ಆ ರಾತ್ರಿಯ ನಂತರ ಮರುದಿನ ಬೆಳಿಗ್ಗೆ, ಎಲ್ಲರೂ ರಾತ್ರಿಯಿಡೀ ಇದ್ದ ಕಾರಣ ದಣಿದಿದ್ದರು. ಈ ರಾತ್ರಿಯನ್ನು **ಲೈಲತ್ ಅಲ್-ಹರಿರ್** ಎಂದು ಕರೆಯಲಾಗುತ್ತದೆ. ಇದಕ್ಕೆ ಕಾರಣವೆಂದರೆ ಮುಸ್ಲಿಮರು ರಾತ್ರಿಯಲ್ಲಿ ಪರಸ್ಪರ ಮಾತನಾಡಲಿಲ್ಲ ಆದರೆ ಪಿಸುಗುಟ್ಟಿದರು. ಬಾಣವನ್ನು ಹೊಡೆದಾಗ, ಅದು ಬಿಲ್ಲುವಿನಿಂದ ಹೊರಬರುವ ಸಣ್ಣ ಶಬ್ದ ಅಥವಾ ಗಿರಣಿ ಚಲಿಸುವ ಸಣ್ಣ ಶಬ್ದದಂತೆ ಎಂದು ಹರಿರ್‌ನ ಅರ್ಥವನ್ನು ಬರೆಯಲಾಗಿದೆ. ತಬರಿಯಲ್ಲಿಯೂ ಸಹ, **ಲೈಲತ್ ಅಲ್-ಹರೀರ್** ಎಂಬ ಹೆಸರಿಗೆ ಕಾರಣವೆಂದರೆ ಮುಸ್ಲಿಮರು ರಾತ್ರಿಯ ಆರಂಭದಿಂದ ಬೆಳಗಿನವರೆಗೂ ಧೈರ್ಯದಿಂದ ಹೋರಾಡಿದರು. ಅವನು ಜೋರಾಗಿ ಮಾತನಾಡಲಿಲ್ಲ ಆದರೆ ನಿಧಾನವಾಗಿ. ಈ ಕಾರಣದಿಂದಾಗಿ, ಈ ರಾತ್ರಿಯ ಹೆಸರು **ಲೈಲತ್ ಅಲ್-ಹರಿರ್** ಎಂದು ಪ್ರಸಿದ್ಧವಾಯಿತು. ಆದಾಗ್ಯೂ, ನಾಲ್ಕನೇ ದಿನ ಬೆಳಿಗ್ಗೆ, ಹೋರಾಟವು ಮಧ್ಯಾಹ್ನದವರೆಗೂ ಮುಂದುವರೆಯಿತು ಮತ್ತು ಇರಾನಿಯನ್ನರು ಹಿಮ್ಮೆಟ್ಟಿದರು. ನಂತರ ರುಸ್ತಮ್ ಮೇಲೆ ದಾಳಿ ಮಾಡಲಾಯಿತು ತದನಂತರ ಆತನು ಅತೀಕ್ ನದಿಗೆ ಓಡಿಹೋದನು. ಅವನು ನದಿಗೆ ಹಾರಿದಾಗ, ಹಿಲಾಲ್ ಎಂಬ ಮುಸ್ಲಿಂ ಅವನನ್ನು ಹಿಡಿದು ಭೂಮಿಗೆ ಎಳೆದುಕೊಂಡು ಹೋಗಿ ಅವನನ್ನು ಕೊಂದನು. ಆಗ ರುಸ್ತಮ್‌ನನ್ನು ಕೊಂದ ಆ ಮುಸ್ಲಿಂ ನಾನು ರುಸ್ತಮ್‌ನನ್ನು ಕೊಂದಿರುವೆನು ಎಂದು ಘೋಷಿಸಲು ಪ್ರಾಂಭಿಸಿದ. ನನ್ನ ಬಳಿ ಬನ್ನ ಮುಸ್ಲಿಮರು ಅವನನ್ನು ಎಲ್ಲಾ ಕಡೆಗಳಲ್ಲಿ ಸುತ್ತುವರಿದರು ಮತ್ತು ಅಲ್ಲಾಹು ಅಕ್ಬರ್ ತಕ್ಬೀರ್‌ನ್ನು ಕೂಗಿದರು. ರುಸ್ತಮ್ ಹತ್ಯೆಯ ಸುದ್ದಿ ಕೇಳಿ ಪರ್ಷಿಯನ್ನರು ಸೋಲಿಸಲ್ಪಟ್ಟರು ಮತ್ತು ಪಲಾಯನ ಮಾಡಿದರು. ಮುಸ್ಲಿಮರು ಅವರನ್ನು ಬೆನ್ನಟ್ಟಿದರು ಮತ್ತು ಅವರನ್ನು ಕೊಂದರು ಮತ್ತು ಹೆಚ್ಚಿನ ಸಂಖ್ಯೆಯ ಕೈದಿಗಳನ್ನು ತೆಗೆದುಕೊಂಡರು. ಈ ದಿನವನ್ನು ಖಾದಿಸಿಯಾ ದಿನ ಎಂದು ಕರೆಯಲಾಗುತ್ತದೆ. ಹಝ್ರತ್ ಉಮರ್(ರ) ಪ್ರತಿದಿನ ಬೆಳಿಗ್ಗೆ ಮೈದಾನದಿಂದ ಹೊರಗೆ ಬರುವ ಸವಾರರನ್ನು ಖಾದಿಸಿಯಾ ಯುದ್ಧದ ಬಗ್ಗೆ ಕೇಳುತ್ತಿದ್ದರು. ಅಲ್ಲಾಹನು ಬಹುದೇವತಾವಾದಿಗಳನ್ನು ಸೋಲಿಸಿದನೆಂದು ಯುದ್ಧದ ಶುಭವಾರ್ತೆಯನ್ನು ತಂದ ದೂತನು ಹೇಳಿದಾಗ, ಹಝ್ರತ್ ಉಮರ್(ರ) ಓಡಿ ಬಂದು ಮಾಹಿತಿಯನ್ನು ತೆಗೆದುಕೊಳ್ಳುತ್ತಿದ್ದಾಗ ದೂತನು ತನ್ನ ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದನು ಮತ್ತು ಅವನಿಗೆ ಇವರು ಹಝ್ರತ್ ಉಮರ್(ರ) ಆಗಿದ್ದಾರೆ ಎಂದು ತಿಳಿದಿರಲಿಲ್ಲ. ದೂತನು ಮದೀನಾ ಪ್ರವೇಶಿಸಿದಾಗ ಮತ್ತು ಜನರು ಉಮರ್ ಅಮೀರ್ ಅಲ್-ಮುಮಿನಿನ್ ಎಂದು ಕರೆದು ನಮಸ್ಕರಿಸುತ್ತಿದ್ದಾಗ, ಆ ದೂತನು ಉಮರ್ ಅವರನ್ನು ಏಕೆ ಅಮೀರ್ ಅಲ್-ಮುಮಿನನ್ ಎಂದು ನನಗೆ ಹೇಳಲಿಲ್ಲ ಎಂದು ಕೇಳಿದನು. ಹಝ್ರತ್ ಉಮರ್(ರ) ಅವರು ಹೇಳಿದರು: ಓ ನನ್ನ ಸಹೋದರ! ಪರವಾಗಿಲ್ಲ.

ಆದಾಗ್ಯೂ, ವಿಜಯದ ಘೋಷಣೆಯ ನಂತರ, ಹಝ್ರತ್ ಉಮರ್(ರ) ಅವರು ಸಭೆಯಲ್ಲಿ ವಿಜಯದ ಸುದ್ದಿಯನ್ನು ಓದಿದರು ಮತ್ತು ನಂತರ ಪ್ರಭಾವಶಾಲಿ ಭಾಷಣ ಮಾಡಿದರು. ಅವರು ಸೈನ್ಯಗಳನ್ನು ಸ್ಥಳದಲ್ಲಿಯೇ ಇರಲು ಮತ್ತು ಸೇನೆಯನ್ನು ಮರುಸಂಘಟಿಸಲು ಮತ್ತು ಇತರ ಪರಿಹಾರದ ವಿಷಯಗಳ ಮೇಲೆ ಕೇಂದ್ರೀಕರಿಸಲು ಆದೇಶಿಸಿದರು. ಹಝ್ರತ್ ಸಅದ್(ರ) ಖಾದಸಿಯಾ ಯುದ್ಧದಲ್ಲಿ ಮುಸ್ಲಿಮರೊಂದಿಗೆ ಮೊದಲು ಸಂಧನ ಮಡಿಕೊಂಡ ಅನೇಕ ಇರಾನಿಯನ್ನರು ಮತ್ತು ಅವರಲ್ಲಿ ಕೆಲವರು ಇರಾನ್ ಸರ್ಕಾರವು ಅವರ ಇಚ್ಛೆಗೆ ವಿರುದ್ಧವಾಗಿ ಅವರನ್ನು ಬಲವಂತವಾಗಿ ಸೇರಿಸಿಕೊಳ್ಳಲಾಗಿದೆ ಅವರು ತಮ್ಮ ಸ್ವಂತ ಇಚ್ಛೆಯಿಂದ ಬಂದಿರಲಿಲ್ಲ ಆದರೆ ಬಲವಂತದಿಂದ ಬಂದಿದ್ದರು ಮತ್ತು ಅನೇಕ ಜನರ ಈ ದಾವೆಯು ಕೂಡ ಸತ್ಯವಾಗಿತ್ತು. ಯುದ್ಧದ ಕಾರಣದಿಂದಾಗಿ ಅನೇಕ ಜನರು ಈ ಪ್ರದೇಶವನ್ನು ತೊರೆದರು ಮತ್ತು ಶತ್ರುಗಳ ಪ್ರದೇಶಕ್ಕೆ ಮರಳುತ್ತಿದ್ದರು ಎಂದು ಖಿಲಾಫತ್ ನ್ಯಾಯಾಲಯದಿಂದ ಮಾರ್ಗದರ್ಶನ ಪಡೆದಿದ್ದರು. ಹಝ್ರತ್ ಉಮರ್(ರ) ಈ ವಿಷಯಗಳ ಬಗ್ಗೆ ನಿರ್ಧರಿಸಲು ಮದೀನದಲ್ಲಿ ಮಜ್ಲಿಸ್-ಎ-ಶೂರಾವನ್ನು ಕರೆದರು ಮತ್ತು ನಿರ್ಧಾರದ ನಂತರ ಕೆಲವು ಸೂಚನೆಗಳನ್ನು ಕಳುಹಿಸಿದರು ಅದೇನೆಂದರೆ ಮುಸ್ಲಿಮರೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ಜನರು ಮತ್ತು ಅವರು ತಮ್ಮ ಒಪ್ಪಂದಗಳನ್ನು ಪೂರೈಸಿದ್ದರೆ ಮತ್ತು ತಮ್ಮ ಪ್ರದೇಶದಲ್ಲಿಯೇ ಇರುತ್ತಿದ್ದರೆ, ವೈರಿಗಳೊಂದಿಗೆ ಸೇರಲಿಲ್ಲವಾದರೆ ಅವರ ಒಪ್ಪಂದಗಳನ್ನು ಪೂರ್ಣ ನಿಷ್ಠೆಯಿಂದ ಗೌರವಿಸಲಾಗುವುದು. ಮುಸ್ಲಿಮರೊಂದಿಗೆ ಅವರು ಒಪ್ಪಂದ ಮಾಡಿಕೊಂಡಿಲ್ಲ ಆದರೆ ಅವರು ತಮ್ಮ ಪ್ರದೇಶದಲ್ಲಿಯೇ ಇದ್ದರು ಮತ್ತು ಶತ್ರುಗಳ ಬಳಿಗೆ ಹೋಗಿ ನಿಮ್ಮ ವಿರುದ್ಧ ಅಣಿಯಾಗಲಿಲ್ಲ ಎಂದಾದರೆ ಅವರ ಜೊತೆ ಒಪ್ಪಂದ ಮಾಡಿಕೊಂಡವರಂತೆಯೇ ಅವರನ್ನು ಪರಿಗಣಿಸಬೇಕು. ಇರಾನಿನ ಸರ್ಕಾರವು ಅವರನ್ನು ಬಲವಂತವಾಗಿ ಸೇನೆಗೆ ಸೇರಿಸಿಕೊಂಡಿದೆ ಮತ್ತು ಅವರ ದಾವೆಯು ನಿಜವೆಂದು ತೋರಿದರೆ ಅವರೊಂದಿಗೆಯು ಮುಸ್ಲಿಮರಂತೆಯೇ ವರ್ತಿಸಬೇಕು. ಅವರಿಗೆ ಏನನ್ನೂ ಹೇಳಬಾರದು, ಮತ್ತು ಅವರು ದಮನಕ್ಕೊಳಗಾದರು ಎಂದು ಸುಳ್ಳು ದವೆದಾರರಾಗಿದ್ದರೆ, ಆದರೆ ಅವರು ಸ್ವಯಂಪ್ರೇರಣೆಯಿಂದ ನಿಮ್ಮ ವಿರುದ್ಧ ಶತ್ರುಗಳ ಜೊತೆ ಕೈಜೋಡಿಸಿದ್ದಾರೆ ಎಂದಾದರೆ, ಅವರು ಶತ್ರುಗಳ ಪರವಾಗಿರುವುದರಿಂದ ಅವರ ಮೊದಲ ಒಪ್ಪಂದವನ್ನು ರದ್ದುಗೊಳಿಸಲಾಗಿದೆ. ಈಗ ಅವರನ್ನು ಸಮನ್ವಯಗೊಳಿಸಬೇಕು ಅಥವಾ ಅವರನ್ನು ಅವರ ಶಾಂತಿಯ ಸ್ಥಳಕ್ಕೆ ಕರೆದೊಯ್ಯಬೇಕು ಅಂದರೆ ಅವರನ್ನು ಒಪ್ಪಂದದಿಂದ ಹೊರಹಾಕಬೇಕು ಮತ್ತು ಅವರು ಶಾಂತಿಯಿಂದ ಬದುಕಲು ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಬೇಕು ಮತ್ತು ಯಾರೊಂದಿಗೆ ಒಪ್ಪಂದವಿಲ್ಲ ಮತ್ತು ಅವರು ಇದನ್ನು ಬಿಟ್ಟರು ಪ್ರದೇಶ ಮತ್ತು ಶತ್ರುಗಳ ಬಳಿಗೆ ಹೋಗಿ ನಿಮ್ಮ ವಿರುದ್ಧ ಹೋರಾಡಲು ಪ್ರಯತ್ನಿಸಿದರು. ಅವರಿಗೆ ಸೂಕ್ತವೆಂದು ನೀವು ಭಾವಿಸಿದರೆ, ಅವರನ್ನೂ ಕರೆದುಕೊಳ್ಳಿ ಮತ್ತು ಅವರು ಜಿಝಿಯವನ್ನು ಪಾವತಿಸಿದರೆ ಅವರನ್ನು ನಿಮ್ಮ ಪ್ರದೇಶದಲ್ಲಿ ಉಳಿಯಬಹುದು. ನೀವು ಸಾಧ್ಯವಾದಷ್ಟು ಸೌಮ್ಯವಾಗಿರಬೇಕು ಮತ್ತು ಅದು ಸೂಕ್ತವೆಂದು ನಿಮಗೆ ಅನಿಸಿದರೆ ಅವರನ್ನು ಕರೆಯಬೇಡಿ ಮತ್ತು ಅವರು ನಿಮ್ಮ ವಿರುದ್ಧ ಹೋರಾಡುವುದನ್ನು ಮುಂದುವರಿಸಿದರೆ ನೀವು ಅವರ ವಿರುದ್ಧ ಹೋರಾಡುತ್ತಲೇ ಇರಿ. ಅವರು ಹೋರಾಡುತ್ತಿದ್ದರೆ ಆಗ ನಿಮಗೆ ಹೋರಾಡುವ ಹಕ್ಕಿದೆ ಆದರೆ ಅವರು ಇನ್ನೂ ಶತ್ರುಗಳನ್ನು ಭೇಟಿಯಾಗಲು ನಿರಾಕರಿಸಿದರೆ ಅವರನ್ನು ಬಿಟ್ಟುಬಿಡಿ.

ಈ ತೀರ್ಪುಗಳು ಉಪಯುಕ್ತವೆಂದು ಸಾಬೀತಾಯಿತು ಮತ್ತು ಆ ಪ್ರದೇಶದ ಜನರು ಮರಳಿದರು ಮತ್ತು ತಮ್ಮ ಭೂಮಿಯಲ್ಲಿ ನೆಲೆಸಿದರು ಮತ್ತು ಈ ವೈಶಲ್ಯ ಪ್ರೋತ್ಸಾಹಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಮುಸ್ಲಿಮರು ತಮ್ಮ ಭೂಮಿಯನ್ನು ನೆಲೆಸುವಂತೆ ಜನರಿಗೆ ಕರೆ ನೀಡಿರುವುದು ಎಷ್ಟು ಉತ್ತೇಜನಕಾರಿಯಾಗಿದೆ, ಅವರು ಅತ್ಯಂತ ನಿರ್ಣಾಯಕ ಸಮಯದಲ್ಲಿ ತಮ್ಮ ಒಪ್ಪಂದಗಳನ್ನು ಬಿಟ್ಟು ಶತ್ರುಗಳನ್ನು ಸೇರಿಕೊಂಡರು. ಮದೀನಾದ ನಜ್ಲಿಸೆ ಮುಶಾವಿರತ್ ಅವರಿಗೆ ಅಂತಹ ಇರಾನಿಯನ್ನರನ್ನು ಮರುಪಡೆಯಲು ಅಥವಾ ಅವರ ಭೂಮಿಯನ್ನು ತಮ್ಮ ನಡುವೆ ಹಂಚಿಕೊಳ್ಳಲು ಅನುಮತಿ ನೀಡಿದ್ದರೂ. ಮುಸ್ಲಿಮರಲ್ಲಿ ಭೂಮಿಯನ್ನು ವಿತರಿಸಿ. ಈ ಬೆದರಿಕೆಯ ಸಮಯದಲ್ಲಿ ಅಪರಾಧಿಗಳನ್ನು ನೆನಪಿಸಿಕೊಂಡಾಗ, ಅವರ ಭೂಮಿಗೆ ಸಾಮಾನ್ಯ ಭೂಮಿಗಿಂತ ಹೆಚ್ಚು ತೆರಿಗೆ ವಿಧಿಸಲಾಗುತ್ತಿತ್ತು ಎಂದು ಇತಿಹಾಸಕಾರರು ಗಮನಿಸಿದ್ದಾರೆ. ನೀವು ಪ್ರತಿಜ್ಞೆಯನ್ನು ಮುರಿದಿದ್ದೀರಿ ಅದಕ್ಕೆ ಕೇವಲ ಒಂದು ಷರತ್ತಿದೆ. ನೀವು ಹಿಂತಿರುಗಿ ಮತ್ತು ನಿಮ್ಮ ಭೂಮಿಯನ್ನು ಇತ್ಯರ್ಥಗೊಳಿಸಿ ಆದರೆ ನೀವು ಇತರರಿಗಿಂತ ಹೆಚ್ಚು ತೆರಿಗೆಯನ್ನು ಪಾವತಿಸಬೇಕಾಗುತ್ತದೆ ಆದರೆ ಯಾವುದೇ ಸಂದರ್ಭದಲ್ಲಿ ಜಮೀನುಗಳ ಮಾಲೀಕರಾಗಿ ಉಳಿಯುತ್ತಾರೆ. ಈ ಯುದ್ಧವು ಇರಾಕ್‌ನ ವಿಜಯಗಳಿಗೆ ನಿರ್ಣಾಯಕವಾಗಿದೆ. ಮುಸ್ಲಿಂ ಮುಜಾಹಿದ್ದೀನ್ ಉಗ್ರವಾದ ವಿರೋಧವನ್ನು ನಿರ್ಲಿಪ್ತವಾಗಿ ಪೌರುಷದಿಂದ ಹೋರಾಡಿದರು ಮತ್ತು ಇತಿಹಾಸಗಾರರು ಖಿಲಾಫತ್ ಆಸ್ಥಾನದಿಂದ ಜನರಿಗಾಗಿ ಭತ್ಯವನ್ನು ಕಲ್ಪಿಸಿದಾಗ, ಖಾದಿಸಿಯಾದಲ್ಲಿ ಭಾಗವಹಿಸುವುದನ್ನು ಸಹ ಶ್ರೇಷ್ಠತೆಗೆ ಒಂದು ಕಾರಣವೆಂದು ಪರಿಗಣಿಸಲಾಗಿದೆ. ಹಝ್ರತ್ ಉಮರ್(ರ) ಖಾದಿಸಿಯಾದಲ್ಲಿ ಭಾಗವಹಿಸುವ ಜನರಿಗೆ ಹೆಚ್ಚಿನ ಭತ್ಯೆಗಳನ್ನು ನಿಗದಿಪಡಿಸಿದರು. (ಪ್ರಬಂಧ: 'ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸೈಯದ್ ಮಯರ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ 91–95) (ಅಲ್‌ಕಾಮಿಲ್ ಫೀತ್ತಾರೀಖ್, ಸಂಪುಟ–2, ಪುಟ–301–333, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006) (ತರೀಖ್ ಅತ್ತಿಬರಿ, ಸಂಪುಟ–2, ಪುಟ–435–436, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ತಾರೀಖ್ ಅತ್ತಿಬರಿ ಅನುವಾದ, ಸಂಪುಟ–2, ಭಾಗ–2, ಪುಟ–263,310,325, ನಫೀಸ್ ಅಕಾಡಮಿ ಕರಾಚಿ 2004) (ಮುಜಮುಲ್ ಬಲದಾನ್, ಸಂಪುಟ–4, ಪುಟ–94–356)

ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಹಝ್ರತ್ ಉಮರರ ಕಾಲದಲ್ಲಿ ಖುಸ್ರೋ ಪರ್‌ವೇಝ್‌ನ ಮೊಮ್ಮಗನಾದ ಯಝ್‌ದಿಜರ್ದ್ ಸಿಂಹಾಸನವನ್ನು ಏರಿದ ನಂತರ ಅವನು ಮುಸ್ಲಿಮರ ವಿರುದ್ಧ ದೊಡ್ಡದಾದ ರೀತಿಯಲ್ಲಿ ಯುದ್ಧದ ತಯಾರಿಗಳನ್ನು ಶುರುಮಾಡಿದನು. ಆಗ ಹಝ್ರತ್ ಉಮರ್(ರ) ಅವರನ್ನು ಎದುರಿಸಲಿಕ್ಕಾಗಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್‌ರ ನೇತೃತ್ವದಲ್ಲಿ ಒಂದು ಸೈನ್ಯವನ್ನು ರವಾನೆ ಮಾಡಿದರು. ಹಝ್ರತ್ ಸಅದ್ ಯುದ್ಧಕ್ಕಾಗಿ ಖಾದಿಸಿಯದ ಮೈದಾನವನ್ನು ಆಯ್ಕೆ ಮಾಡಿದರು. ಹಝ್ರತ್ ಉಮರ್‌ರಿಗೆ ಆ ಪ್ರದೇಶದ ನಕ್ಷೆಯನ್ನು ಕಳುಹಿಸಿದರು. ಹಝ್ರತ್ ಉಮರ್(ರ) ಈ ಪ್ರದೇಶವನ್ನು ಬಹಳ ಇಷ್ಟಪಟ್ಟರು. ಆದರೆ ಅದರೊಂದಿಗೆ ಹೀಗೆ ಸಹ ಬರೆದರು: ಇರಾನಿನ ಅರಸನ ವಿರುದ್ಧ ಯುದ್ಧ ಮಾಡುವುದಕ್ಕೆ ಮುಂಚೆ ಅವನಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಬೇಕು. ಹೀಗೆ ಈ ಆದೇಶದ ಪ್ರಕಾರ ಒಂದು ಸಂಘವನ್ನು ಯಝ್‌ದಿಜರ್ದಿನನ್ನು ಭೇಟಿಯಾಗಲು ಕಳುಹಿಸಿದರು. ಈ ಸಂಘ ಇರಾನಿನ ದರ್ಬಾರಿಗೆ ತಲುಪಿದಾಗ, ಅವರು ಏಕೆ ಬಂದಿರುವರು ಎಂದು ಅವರೊಡನೆ ಕೇಳಲು ಇರಾನಿನ ಅರಸ ತರ್ಜುಮೆ ಮಾಡುವವರೊಡನೆ ಹೇಳಿದರು. ಅವನು ಈ ಸವಾಲು ಕೇಳಿದಾಗ ಸಂಘದ ಮುಖಂಡನಾದ ಹಝ್ರತ್ ನೂಮಾನ್ ಬಿನ್ ಮಖ್‌ರನ್ ನಿಂತುಕೊಂಡು ಹಝ್ರತ್ ಪೈಗಂಬರರ(ಸ) ಆಗಮನದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: ಇಸ್ಲಾಮನ್ನು ಹರಡಲು ಅವರು ನಮಗೆ ಆದೇಶ ನೀಡಿರುವರು ಮತ್ತು ಲೋಕದ ಎಲ್ಲರನ್ನು ಸತ್ಯ ಧರ್ಮದಲ್ಲಿ ಸೇರಲಿಕ್ಕಾಗಿ ಆಮಂತ್ರಿಸಬೇಕೆಂದು ಹೇಳಿರುವರು. ಈ ಆದೇಶದ ಪ್ರಕಾರ ನಾವು ನಿಮ್ಮ ಸನ್ನಿಧಿಯಲ್ಲೂ ಹಾಜರಾಗಿದ್ದೇವೆ. ಇಸ್ಲಾಂ ಧರ್ಮದಲ್ಲಿ ಸೇರಲು ನಿಮ್ಮನ್ನೂ ಆಮಂತ್ರಿಸುತ್ತೇವೆ. ಈ ಉತ್ತರದಿಂದ ಯಝ್‌ದಿಜರ್ದ್ ತುಂಬ ಕೋಪಗೊಂಡರು. ಅವನು ಹೇಳಿದನು: ನೀವು ವನ್ಯ ಮತ್ತು ಸತ್ತದ್ದನ್ನು ತಿನ್ನುವ ಸಮುದಾಯವಾಗಿರುವಿರಿ. ನಿಮಗೆ ಬಡತನ ಮತ್ತು ಹಸಿವೆ ಬಂದಿದ್ದರೆ ನಾವು ನಿಮಗೆಲ್ಲರಿಗೂ ನೆಮ್ಮದಿಯಿಂದ ಜೀವನವನ್ನು ಸಾಗಿಸಲು ಸಾಧ್ಯವಾದಷ್ಟು ಊಟ ಪಾನಿಯದ ಏರ್ಪಾಡನ್ನು ಮಾಡುವೆವು. ನಿಮಗೆ ಧರಿಸಲು ಬಟ್ಟೆ ಸಹ ಕೊಡುವೆವು. ನೀವು ಈ ವಸ್ತುಗಳನ್ನು ತೆಗೆದುಕೊಂಡು ನಿಮ್ಮ ದೇಶಕ್ಕೆ ಹೋಗಿರಿ. ನೀವು ನಮ್ಮೊಂದಿಗೆ ಯುದ್ಧ ಮಾಡಿ ನಿಮ್ಮ ಜೀವವನ್ನು ಏಕೆ ನಷ್ಟ ಮಾಡುತ್ತೀರಿ. ಅವನು ತನ್ನ ಮಾತನ್ನು ಮುಗಿಸಿದಾಗ ಇಸ್ಲಾಮಿನ ಸಂಘದ ಕಡೆಯಿಂದ ಹಝ್ರತ್ ಮುಗ್ಯೆರ ಬಿನ್ ಝುರಾರ ನಿಂತುಕೊಂಡು ಹೇಳಿದರು: ನೀವು ನಮ್ಮ ಕುರಿತು ಹೇಳಿದ್ದೆಲ್ಲ ಸರಿಯೇ ಆಗಿವೆ. ನಾವು ನಿಜವಾಗಿಯೂ ವನ್ಯ ಮತ್ತು ಸತ್ತದ್ದನ್ನು ತಿನ್ನುವ ಸಮುದಾಯವಾಗಿತ್ತು. ಹಾವು, ಚೇಳು, ಮಿಡತೆಗಳು ಮತ್ತು ಹಲ್ಲಿಗಳನ್ನು ಸಹ ತಿನ್ನುತ್ತಿದ್ದೆವು. ಆದರೆ ಅಲ್ಲಾಹನು ನಮ್ಮ ಮೇಲೆ ಅನುಗ್ರಹ ವರ್ಷಿಸಿದನು. ಅವನು ನಮ್ಮ ಮೇಲೆ ಕೃಪೆದೋರಿದನು. ಅವನು ತನ್ನ ಪ್ರವಾದಿಯನ್ನು ನಮ್ಮ ಸನ್ಮಾರ್ಗಕ್ಕಾಗಿ ಕಳುಹಿಸಿದನು. ನಾವು ಅವರನ್ನು ನಂಬಿದೆವು. ನಾವು ಅವರ ಮಾತುಗಳ ಪ್ರಕಾರ ನಡೆದೆವು. ಅದರ ಪರಿಣಾಮವಾಗಿ ಈಗ ನಮ್ಮಲ್ಲಿ ಒಂದು ಪರಿವರ್ತನೆ ಆಗಿದೆ. ಈಗ ನಮ್ಮಲ್ಲಿ ನೀವು ಹೇಳಿರುವ ಕೆಡುಕುಗಳು ಇಲ್ಲ. ಈಗ ನಾವು ಯಾರ ಲಾಲಸೆಗೆ ಒಳಗಾಗಲು ತಯಾರಲ್ಲ. ನಿಮ್ಮೊಡನೆ ನಮ್ಮ ಯುದ್ಧ ಶುರುವಾಗಿದೆ. ಇದೇ ನಿಮಗೆ ಸ್ವೀಕಾರವೆಂದಾದರೆ ಈಗ ಅದರ ತೀರ್ಮಾನ ಯುದ್ಧ ಮೈದಾನದಲ್ಲಿ ಆಗುವುದು. ನಮ್ಮ ಆಮಂತ್ರಣವನ್ನು ಸ್ವೀಕರಿಸದೇ ಯುದ್ಧ ಮಾಡಲು ಬಯಸುವವರಾದರೆ ಸರಿ. ನಾವು ಸಹ ಯುದ್ಧ ಮಾಡುವೆವು. ಲೌಕಿಕವಾದ ಸಂಪತ್ತು ಮತ್ತು ಹಣದ ಲಾಲಸೆ ನಮ್ಮನ್ನು ನಮ್ಮ ಉದ್ದೇಶದಿಂದ ದೂರವಿರಿಸಲಾರವು. ಯಝ್‌ದಿಜರ್ದ್ ಈ ಮಾತುಗಳನ್ನು ಕೇಳಿದಾಗ ತುಂಬ ಕೋಪಗೊಂಡನು. ಅವನು ತನ್ನ ನೌಕರನೊಡನೆ ಒಂದು ಗೋಣಿ ಮಣ್ಣನ್ನು ತರಲು ಹೇಳಿದನು. ಗೋಣಿಯನ್ನು ತರಲಾದಾಗ ಇಸ್ಲಾಮಿನ ಸಂಘದ ಸರದಾರನೊಡನೆ ಮುಂದೆ ಬರಲು ಹೇಳಿದನು. ನೀವು ನಮ್ಮ ಕಾಣಿಕೆಯನ್ನು ನಿರಾಕರಿಸಿದ್ದೀರಿ. ಆದ್ದರಿಂದ ಈಗ ನಿಮಗೆ ಈ ಮಣ್ಣಿನ ಗೋಣಿಯಲ್ಲದೆ ಬೇರೆ ಏನೂ ಲಭಿಸಲಿಕ್ಕಿಲ್ಲ. ಆ ಸಹಾಬಿ ಬಹಳ ಸಭ್ಯತೆಯಿಂದ ಮುಂದೆ ಹೋದರು ಮತ್ತು ತನ್ನ ತಲೆಯನ್ನು ಬಾಗಿಸಿ ಮಣ್ಣಿನ ಚೀಲವನ್ನು ಹೆಗಲ ಮೇಲೆ ಇರಿಸಿದರು. ಅನಂತರ ಆ ಸಹಾಬಿ ಒಂದು ಜಿಗಿತ ಹಾಕಿ ವೇಗವಾಗಿ ದರ್ಬಾರಿನಿಂದ ಹೊರಡುತ್ತಾ ತನ್ನ ಸಹಚರರೊಡನೆ ಉಚ್ಚ ಸ್ವರದಲ್ಲಿ ಹೇಳಿದರು: ಇಂದು ಇರಾನಿನ ಅರಸ ತನ್ನ ಕೈಯಿಂದಲೇ ತನ್ನ ದೇಶದ ಭೂಮಿಯನ್ನು ನಮಗೆ ಒಪ್ಪಿಸಿರುವರು. ಹೀಗೆ ಹೇಳಿಕೊಂಡು ಆ ಸಂಘ ಕುದುರೆಗಳಲ್ಲಿ ಸವಾರಿ ಮಾಡುತ್ತಾ ವೇಗವಾಗಿ ಅಲ್ಲಿಂದ ಹೊರಟರು. ಅರಸನು ಈ ಘೋಷವನ್ನು ಕೇಳಿದಾಗ ಅದನ್ನು ಅಪಶಕುನವೆಂದು ಭಾವಿಸಿ ನಡುಗಿದನು ಮತ್ತು ತನ್ನ ದರ್ಬಾರಿನವರೊಡನೆ ಮುಸ್ಲಿಮರನ್ನು ಹಿಂಬಾಲಿಸಲು ಹೇಳಿದರು. ಆದರೆ ಅಷ್ಟರಲ್ಲಿ ಮುಸ್ಲಿಮರಾದ ಕುದುರೆ ಸವಾರಿಗಳು ಬಹಳ ದೂರಕ್ಕೆ ಹೋಗಿ ಬಿಟ್ಟಿದ್ದರು. ಕೊನೆಗೆ ಅವರು ಹೇಳಿದಂತೆಯೇ ಆಯಿತು. ಕೆಲವು ವರ್ಷಗಳೊಳಗೆ ಇರಾನ್ ಪೂರ್ತಿಯಾಗಿ ಮುಸ್ಲಿಮರ ಅಡಿಯಲ್ಲಿ ಬಂತು. ಮುಸ್ಲಿಮರಲ್ಲಿ ಈ ಮಹತ್ತಾದ ಪರಿವರ್ತನೆ ಉಂಟಾಗಲು ಕಾರಣವೇನೆಂದರೆ, ಪವಿತ್ರ ಖುರ್‌ಆನಿನ ಅಧ್ಯಾಪನೆ ಅವರ ನೈತಿಕತೆ ಮತ್ತು ಅವರ ಸ್ವಭಾವದಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡಿತ್ತು. ಅವರ ನೀಚ ಜೀವಿತಕ್ಕೆ ಅದು ಒಂದು ಮೃತ್ಯುವನ್ನು ಬರಿಸಿತ್ತು. ಅವರನ್ನು ಶ್ರೇಷ್ಠ ನಡತೆ ಮತ್ತು ಉನ್ನತ ಸ್ವಭಾವದ ಮಟ್ಟದಲ್ಲಿ ತಂದು ನಿಲ್ಲಿಸಿತ್ತು.

(ತಫ್ಸೀರೆ ಕಬೀರ್, ಸಂಪುಟ–6, ಪುಟ–204–205)

ಅದರ ಕಾರಣದಿಂದ ಈ ಪರಿವರ್ತನೆ ಉಂಟಾಯಿತು. ಒಟ್ಟಿನಲ್ಲಿ ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ನಡೆಯುವುದರಿಂದಲೇ ನೈಜ ಪರಿವರ್ತನೆ ಉಂಟಾಗುತ್ತವೆ.

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*(ಪುಟ ಸಂಖ್ಯೆ 1ರ ಉಳಿದ ಭಾಗ)*

ಅವನ ದೃಷ್ಟಿ ಮನುಷ್ಯರ ಮಟ್ಟಿಗೆ ಸೀಮಿತವಾಗಿರುತ್ತದೆ. ಅಷ್ಟಕ್ಕೆ ತೃಪ್ತಿಪಟ್ಟಿರುತ್ತಾನೆ. ಆದರೆ ಜ್ಞಾನಿಯೊಬ್ಬನ ದೃಷ್ಟಿಯು ಮೇಲ್ಪಟ್ಟದ್ದು ಹಾಗೂ ಉನ್ನತಮಟ್ಟದ್ದಾಗಿರುತ್ತದೆ. ಅವರು ಗ್ರಹಿಸಿಕೊಂಡಿರುತ್ತಾರೆ. ಅಲ್ಲಾಹನ ಮುಂದೆ ಅವನ ದಾಸನ ಯೋಗ್ಯತೆಯಾದರೇನು. ಏಕೆಂದರೆ ಅವನು ದಾಸನಷ್ಟೇ ಅಲ್ಲವೇ. ಅವನ ಜೀವನ ಸಹ ಅಲ್ಲಾಹನೇ ನೀಡಿರುವಂತಹದಲ್ಲವೇ? ಮಾರ್ಗದರ್ಶನ ಸಹ ಅವನೇ ನೀಡಿರುವನು. ಕವಿ ಗಾಲಿಬ್ ಎಷ್ಟು ಉತ್ತಮವಾಗಿ ಹೇಳಿದ್ದಾನೆ.

ಜಾನ್ ದೀ ದೀಹುಮೀ ಉಸೀಕಿ ಥೀ
ಹಖ್ ತೋ ಏ ಹೈ ಕೇ ಹಖ್ ಅದಾ ನ ಹುಆ !!
ತ್ಯಾಗ ಮಾಡಿರಬಹುದು. ಆದರೆ ಅದು ಅವನೇ ನೀಡಿದ್ದಲ್ಲವೆ
ಹೇಳಬೇಕಾದರೆ ಅವನ ಹಕ್ಕು ತೀರಿಸಲು ಸಾಧ್ಯವಾಗಲಿಲ್ಲ

ಅಂದ ಹಾಗೆ ಪ್ರವಾದಿಯು ಜ್ಞಾನ ಹೊಂದಿದವರಾಗಿರುತ್ತಾರೆ. ಅವರು ತಮ್ಮನ್ನು ಅರಿತುಕೊಂಡಿರುವವರಾಗಿರುತ್ತಾರೆ. ಏನೆಲ್ಲಾ ನಾನು ಮಾಡುತ್ತಿದ್ದೇನೆ. ಅದು ನಾನಲ್ಲ, ಅಲ್ಲಾಹನೇ ಮಾಡುತ್ತಿರುವನು ಎಂಬ ಅರಿವಿರುತ್ತದೆ. ಆದುದರಿಂದ ಅವರು ಪ್ರಾರ್ಥಿಸುತ್ತಾರೆ ಓ ಅಲ್ಲಾಹ್ ನಮ್ಮ ಅಸ್ತಿತ್ವವನ್ನು ಆದಷ್ಟು ಗೌಪ್ಯವಾಗಿಡು. ಮತ್ತು ನಿನ್ನ ಅಸ್ತಿತ್ವವನ್ನು ಹೆಚ್ಚೆಚ್ಚು ಪ್ರಕಟಪಡಿಸು. ಅಂದರೆ "ಇಗ್‌ಫಿರ್‌ಲಿ" ಈ ನೆಲೆಯಲ್ಲಿ ಅರ್ಥವಾಗುವುದು. ಓ ಅಲ್ಲಾಹ್ ನಿನಗೆ ನನ್ನ ಪ್ರೀತಿಯ ಕಾರಣ ನಿನ್ನ ಅಭಯ ನನ್ನ ಮೇಲಿರಲಿ. ಅಂದರೆ ನನ್ನ ಅಸ್ತಿತ್ವ ಅಳಿಸಿ, ನಿನ್ನ ಅಸ್ತಿತ್ವ ನನ್ನ ಮೂಲಕ ಪ್ರಕಟಗೊಳ್ಳಲಿ, ಪರಿಣಾಮವಾಗಿ ಅಲ್ಲಾಹನ ಅಸ್ತಿತ್ವ ಎಷ್ಟರಮಟ್ಟಿಗೆ ದಾಸನ ಮೂಲಕ ಪ್ರಕಟಗೊಳ್ಳುವುದೋ ಅಷ್ಟೇ ಸತ್ಕಾರ್ಯಗಳಲ್ಲಿ ಯಶಸ್ಸು ದೊರೆಯುವಂತಾಗುತ್ತದೆ.

ಹೌದು ಅನ್ಯರಿಗಾಗಿ ಈ ಪದ ಬಳಕೆಯಾದರೆ ಅದರ ತಕ್ಕಂತೆ ಅದರ ಅರ್ಥವಿರುತ್ತದೆ. ಒಬ್ಬ ಉನ್ನತ ದರ್ಜೆಯ ಸತ್ಯವಿಶ್ವಾಸಿಯು ಈ ಪದ ಬಳಕೆ ಮಾಡಿದರೆ ಅದರ ಅರ್ಥ. ಓ ಅಲ್ಲಾಹನೇ ನಿನ್ನ ಸಾನಿಧ್ಯ ಪಡೆಯುವಲ್ಲಿ ಉಂಟಾಗುವ ಕೊರತೆಯಿಂದ ನಮ್ಮನ್ನು ರಕ್ಷಿಸು ಎಂದಾಗುತ್ತದೆ. ಮಧ್ಯಮ ದರ್ಜೆಯ ಮೋಮಿನ್ (ಸತ್ಯವಿಶ್ವಾಸಿ) ಈ ಪದ ಬಳಕೆ ಮಾಡುವಾಗ ಅದರ ಅರ್ಥ. ನನ್ನ ತಪ್ಪುಗಳನ್ನು ಮರೆಮಾಚಿ ನನಗೆ ಉನ್ನತಮಯ ಪ್ರಗತಿಗಳನ್ನು ದಯಪಾಲಿಸು ಎಂದಾಗುತ್ತದೆ. ಅಂತೆಯೇ ಸಾಮಾನ್ಯ ಮುಮಿನ್ (ಸತ್ಯವಿಶ್ವಾಸಿ) ಈ ಪದ ಬಳಕೆ ಮಾಡಿದರೆ ಅದಕ್ಕೆ ಅರ್ಥ: ವಿಶ್ವಾಸದ ಮೇಲೆ ನನಗೆ ಸ್ಥಿರತೆ ನೀಡು. ನನ್ನ ಪಾಪಗಳು ನನ್ನನ್ನು ಮುಳುಗಿಸದಿರಲಿ. ಒಬ್ಬ ಸತ್ಯದಾರಿಯನ್ನು ಬಯಸುವವನು ಈ ಪದ ಬಳಕೆ ಮಾಡಿದರೆ ಅದರ ಅರ್ಥ. ಅವನ ಪಾಪಗಳು ಅವನನ್ನು ಸನ್ಮಾರ್ಗದಿಂದ ವಂಚಿತನನ್ನಾಗಿ ಮಾಡದಿರಲಿ. ಆದುದರಿಂದ ನನ್ನ ಪಾಪಗಳನ್ನು ಕ್ಷಮಿಸು. ಈ ಪದದ ಬಳಕೆ ವಿಭಿನ್ನ ಸಂದರ್ಭಗಳಲ್ಲಿ ಆಗುವ ರೀತಿ 'ಜಬ್ಬಾರ್' ಪದದಂತಿರುವುದು. "ಜಬ್ಬಾರ್" ಪದವು ಅಲ್ಲಾಹನಿಗೋಸ್ಕರ ಬರುವುದಾದರೆ ಅದರ ಅರ್ಥ "ಉದ್ಧಾರಕ" ಎಂದಾಗುತ್ತದೆ. ಅದೇ ಪದ ದಾಸನಿಗಾಗಿ ಬರುವುದಾದರೆ ಅದರ ಅರ್ಥ "ಕಾನೂನು ವಂಚಕ" "ವಿದ್ರೋಹಿ" ಎಂದಾಗುತ್ತದೆ. ನೆನಪಿಡಬೇಕು. ಅಲ್ಲಾಹನು ತನ್ನ ಪ್ರವಾದಿಗಳ ಕುರಿತು ಹೇಳುತ್ತಾನೆ. ಅಲ್ಲಾಹ್ ಹೇಗೆ ಸಧ್ಯವಾದೀತು ಲೋಕದಿಂದ ಬೇರ್ಪಡಿಸಿ ಅಲ್ಲಾಹನು ತನ್ನ ಸಾಮಿಪ್ಯ ಒದಗಿಸಿಕೊಟ್ಟಾಗ ಅವರ ಬಳಿ ಶೈತಾನನು ಹೇಗೆ ತಾನೇ ಬರುವುದು. ಶೈತಾನನಂತೂ ಅಲ್ಲಾಹನ ನಾಮದಿಂದಲೇ ದೂರ ಓಡಿ ಹೋಗುತ್ತಾನೆ. ಅದೇ ರೀತಿ ಇನ್ನೊಂದೆಡೆ ಅಲ್ಲಾಹನು ನುಡಿದನು. **ಇನ್ನ ಇಬಾದಿ ಲೈಸಲಕ**

**ಅಲೈಹಿಂ ಸುಲ್ತಾನ್** ನನ್ನ ದಾಸರ ಮೇಲೆ ನಿಶ್ಚಯವಾಗಿಯೂ ನಿನ್ನ ಪ್ರಭಾವ ಬೀರದು. ಅಂದ ಹಾಗೆ ಕನಿಷ್ಠ ದರ್ಜೆಯ ದಾಸನಿಗಾಗಿ ಈ ಕಾಯಿದೆ ಕಾನೂನು ಇರುವಾಗ, ಪ್ರವಾದಿಗಳಂತೂ ಅಲ್ಲಾಹನ ವಿಶೇಷ ರಕ್ಷಣೆಯಲಿರುವವರು ಅವರ ಬಳಿ ಶೈತಾನನು ನುಸುಳಿ ಬರಲು ಹೇಗೆ ಸಾಧ್ಯ. **(ತಫ್ಸೀರ್ ಕಬೀರ್, ಸಂಪುಟ–3, ಪುಟ–480 ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ* **02ರ** *ಉಳಿದ ಭಾಗ)*

**ಕುಳಿತುಕೊಂಡಿದ್ದರು ಮತ್ತು ಹೊರಗಿನಿಂದ ಬೀಗ ಹಾಕಿಸಿದ್ದರು.**

ಮೇಲೆ ವಿವರಿಸಿದ ಮುಬಾಹಲ ನಂತರ ಹಝ್ರತ್ ಅಖ್‌ದಸ್ ಅವರು ಮೌಲ್ವಿಗಳನ್ನು ಸಂಬೋಧಿಸಿ ಒಂದು ಪತ್ರಿಕೆ ಹೊರಡಿಸಿ ಹೇಳಿದರು.

ಇದೀಗ ನಾವು ಕ್ರೈಸ್ತರ ಜೊತೆಯಲ್ಲಿ ಚರ್ಚೆಯಿಂದ ಮುಕ್ತಗೊಂಡಿದ್ದೇವೆ. ಇಂದಿನಿಂದ ಮೂರು ದಿನಗಳವರೆಗೆ ಇಲ್ಲೆ ತಂಗಿರುತ್ತೇವೆ. ಯಾವ ಮೌಲ್ವಿಗಾದರು ಚರ್ಚೆ ಮಾಡಬೇಕೆನಿಸಿದರೆ ಅವರು ಸ್ಥಳವನ್ನು ನಿಗದಿಪಡಿಸಿ ಚರ್ಚಿಸಲಿ. ಮತ್ತೆ ಓಡಿ ಹೋದರು ಎಂಬ ಬೊಬ್ಬೆ ಬೇಡ. ಹಝ್ರತ್ ಅಖ್‌ದಸ್ ಅವರ ಈ ಪ್ರಕಟಣೆಯಿಂದ ಮೌಲ್ವಿ ಸಾಹೇಬರುಗಳು ಎಷ್ಟೊಂದು ಪ್ರಭಾವಕ್ಕೆ ಒಳಗಾದರು ಎಂದರೆ ಯಾರಿಗೂ ಮುಂದೆ ಬರುವ ಧೈರ್ಯ ಬರಲಿಲ್ಲ. ಆಗ ಖಾಜಾ ಮುಹಮ್ಮದ್ ಯೂಸೂಫ್ ಸಹಿಬ್ ರಯೀಸ್ ಅಮೃತ್ಸರ್ ಅವರು ಮೌಲ್ವಿಗಳಿಗೆ ಹೇಳಿದರು.

ಈಗ ನೀವು ಚರ್ಚಿಸಲು ಏಕೆ ಸಿದ್ಧರಾಗುತ್ತಿಲ್ಲ. ಮಿರ್ಝಾ ಸಾಹಿಬ್ ಖುದ್ದಾಗಿ ಚರ್ಚೆಗೆ ಆಹ್ವಾನಿಸುತ್ತಿದ್ದಾರೆ. ಅವರು ಹೋದ ಮೇಲೆ ನೀವು ಬೊಬ್ಬೆ ಹಾಕುವಿರಿ. ಮಿರ್ಝಾ ಸಾಹಿಬ್ ಓಡಿ ಹೋದರು ಮತ್ತು ಅಮೃತ್ಸರ ಮೌಲ್ವಿಗಳೊಂದಿಗೆ ಚರ್ಚಿಸಿಲ್ಲ ಎಂದು. ಮೌಲ್ವಿಗಳು ಉತ್ತರಿಸಿದರು. ನಾವು ಪರಸ್ಪರ ವಿಚಾರ ಸಲಹೆ ಪಡೆದು ಚರ್ಚಿಸುವೆವು.

ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಮೌಲ್ವಿಗಳನ್ನು ಹೆದರಿಸಿಬಿಟ್ಟಿದ್ದರು. ನಿಮ್ಮ ಪೈಕಿ ಯಾರೂ ಸಹ ಮಿರ್ಝಾ ಸಾಹಿಬ್‌ರೊಂದಿಗೆ ಚರ್ಚಿಸಲು ಸಾಧ್ಯವಿಲ್ಲ. ಅವರು ಸ್ವಲ್ಪ ಸಮಯದಲ್ಲಿ ನಿಮ್ಮ ಮೇಲೆ ಹತೋಟಿ ಸಾಧಿಸುವರು. ಒಂದೆರಡು ಪ್ರಶ್ನೋತ್ತರದಲ್ಲಿಯೇ ನಿಮ್ಮ ಬಾಯಿ ಮುಚ್ಚಿಸುವರು. ಯಾವುದಾದರು ನೆಪ ಒಡ್ಡಿ ಚರ್ಚೆಯಿಂದ ದೂರ ಉಳಿಯುವುದೇ ಲೇಸು ಅನಂತರ ಅಮೃತ್ಸರದ ಎಲ್ಲಾ ಮೌಲ್ವಿಗಳು, ಮೌಲ್ವಿ ಅಬ್ದುಲ್ ಜಬ್ಬಾರ್ ಸಾಹಿಬ್, ಗಝ್ನವಿ ಮುಂತಾದವರು, ಗಝ್ನವಿಗಳು ಮೌಲ್ವಿ ರುಸುಲ್ ಬಾಬಾ, ಮೌಲ್ವಿ ಗುಲಾಮುಲ್ಲ ಖಸೋರಿ ಪ್ರಖ್ಯಾತರು ಮುಂತಾದವರು ಮುಹಮ್ಮದ್ ಜಾನ್ ಮಸೀದಿಯ ಕೆಳಭಾಗದ ಒಂದು ಕೋಣೆಯಲ್ಲಿ ಕುಳಿತುಕೊಂಡರು ಮತ್ತು ಮುಅಝಿನ್‌ಗೆ ಹೇಳಿದರು. ಕೋಣೆಗೆ ಬೀಗ ಹಾಕಿ, ಕೀಲಿ ತಮ್ಮ ಬಳಿ ಇರಿಸಿಕೊಳ್ಳಿ. ಮೌಲ್ವಿ ರುಸುಲ್ ಬಾಬಾ ಹೇಳಿದರು. ಯಾರಾದರೂ ಕೇಳಿದರೆ ದಾವತ್ (ಔತಣಕ್ಕೆ) ಹೋಗಿದ್ದಾರೆ ಎಂದು ಹೇಳಿಬಿಡಿ. ಕೆಲ ಸಮಯದ ನಂತರ ಬರುವವರು ಎಂದು ಹೇಳಿ, ಖಾಜಾ ಯೂಸುಫ್ ಶಾಹ್ ಸಾಹಿಬ್ ಈ ಮಸೀದಿಗೆ ಅವರುಗಳನ್ನು ಹುಡುಕುತ್ತಾ ಬಂದರು. ಮುಅಝಿನ್‌ಗೆ ಕೇಳಿದರು ಮೌಲ್ವಿ ಸಾಹೇಬರುಗಳು ಎಲ್ಲಿ ಹೋಗಿದ್ದಾರೆ? ಅವರು ಹೇಳಿದರು. ಔತಣಕ್ಕೆ ಹೋಗಿದ್ದಾರೆ. ಮತ್ತೆ ಖಾಜಾ ಸಾಹಿಬ್ ಅವರು ಮೌಲ್ವಿ ಅಬ್ದುಲ್ ಜಬ್ಬಾರ್ ಸಾಹಿಬರ ಬಳಿಗೆ ಹೋದರು. ಅಲ್ಲಿಂದಲೂ ಅದೇ ಉತ್ತರ ಬಂತು. ಯಾವುದೇ ಔತಣಕ್ಕೆ ಹೋಗಿರುತ್ತಾರೆ. ಖಾಜಾ ಸಾಹಿಬ್ ದೊಡ್ಡ ಧ್ವನಿಯಿಂದ ಹೇಳಿದರು. ಎಲ್ಲಾ ಮೌಲ್ವಿಗಳು ಔತಣದ ಮೇಲೆ ಹೋಗಿರುತ್ತಾರೆ. ಇಲ್ಲಿ ಯಾರೂ ಸಹ ಇಲ್ಲ. ಇಂದು ಚರ್ಚೆಯ ದಿನವಾಗಿತ್ತು. ಮಿರ್ಝಾ ಸಾಹಿಬ್ ಹೋಗಿ ಬಿಡುವರು. ಮೌಲ್ವಿಗಳು ನಂತರ ಬೊಬ್ಬೆ ಹಾಕುವರು. ಅಂತೂ ಈ ಚರ್ಚೆ ಯಾವಾಗ ಆಗುವುದು. ಅಲ್ಲಿಂದ ಖಾಜಾ ಸಾಹಿಬ್ ಮತ್ತೆ ಮೌಲ್ವಿಗಳನ್ನು ಹುಡುಕುತ್ತಾ ಹೊರಟರು. ಇವರುಗಳು ಯಾರ ಔತಣಕ್ಕೆ ಹೋಗಿರುವವರು ಎಂದು ಪತ್ತೆ ಹಚ್ಚಬಯಸುತ್ತಿದ್ದರು. ಅವರು ಮರಳಿ ಮುಹಮ್ಮದ್ ಜಾನ್ ಮಸೀದಿಗೆ ಬಂದಾಗ ಆಕಸ್ಮಾತ್ತಾಗಿ ಒಬ್ಬರು ಹೇಳಿಬಿಟ್ಟರು. ಎಲ್ಲಾ ಮೌಲ್ವಿಗಳು ಈ ಮಸೀದಿಯ ಕೆಳಗಿನ ಕೋಣೆಯಲ್ಲಿ ಸೇರಿರುವವರು ಮತ್ತು ಹೊರಗಿನಿಂದ ಬೀಗ ಹಾಕಿಸಿದ್ದಾರೆ. ಏಕೆಂದರೆ ಯಾರಿಗೂ ಗೊತ್ತಾಗಬಾರದೆಂದು. ಖಾಜಾ ಸಾಹಿಬ್ ಮುಅಝ್ಝಿನ್‌ಗೆ ಮತ್ತೊಮ್ಮೆ ಕೇಳಿದರು. ಮೌಲ್ವಿ ಸಾಹೇಬರುಗಳು ಎಲ್ಲಿದ್ದಾರೆ? ಮುಅಝ್ಝಿನ್ ಮತ್ತೆ ಅದೇ ಉತ್ತರ ಕೊಟ್ಟರು ಔತಣಕ್ಕೆ ಹೋಗಿರುತ್ತಾರೆ ಎಂದು. ಖಾಜಾ ಸಾಹಿಬ್ ಕೇಳಿದರು. ಎಲ್ಲಿ? ಯಾರ ಬಳಿ? ಅದರ ಉತ್ತರ ಅವರು ಹಿಂಜರಿಯುತ್ತಾ ನೀಡಿದರು. ನನಗೆ ಗೊತ್ತಿಲ್ಲ. ಆಗ ಖಾಜಾ ಸಾಹಿಬ್ ಹೇಳಿದರು. ಆ ಕೋಣೆಯ ಕೀಲಿ ಯಾರ ಕೈಯ್ಯಲ್ಲಿದೆ? ಅದು ನನ್ನ ಬಳಿಯಿದೆ ಆಗ ಅವರು ಹೇಳಿದರು ಅದನ್ನು ತನ್ನಿ ಅವರು ಕೀಲಿಕೈ ಕೊಟ್ಟು ಬಿಟ್ಟರು. ಖಾಜಾ ಸಾಹಿಬ್ ಕೋಣೆ ತೆರೆದರು. ಒಳಗೆ ಹೋಗಿ ನೋಡಿದಾಗ ಎಲ್ಲಾ ಮೌಲ್ವಿಗಳು ಕೋಣೆಯೊಳಗೆ ಕುಳಿತುಕೊಂಡಿದ್ದರು. ಮೌಲ್ವಿಗಳ ಬಣ್ಣ ಬಯಲಾಯಿತು. ಅವರು ಕಂಪಿಸತೊಡಗಿದರು. ಖಾಜಾ ಸಾಹಿಬ್ ಹೇಳಿದರು. ಇಂದಿನ ದಿವಸ ಚರ್ಚೆ ದಿನವಾಗಿತ್ತು. ನೀವು ಅಡಗಿ ಕುಳಿತುಕೊಂಡಿದ್ದೀರಿ ನಾಳೆ ಮಿರ್ಝಾ ಸಾಹಿಬ್ ಹೋದ ನಂತರ ಯಾರೊಂದಿಗೆ ಚರ್ಚಿಸುತ್ತೀರಿ. ಮೌಲ್ವಿಗಳು ನಾಚಿಕೆಪಟ್ಟು ಹೇಳಿದರು. ನಾವು ಪರಸ್ಪರ ಸಲಹೆ ಪಡೆಯುತ್ತಿದ್ದೇವೆ. ಸ್ವಲ್ಪ ಸಮಯದಲ್ಲಿ ನಿಮಗೆ ತಿಳಿಸುತ್ತೇವೆ. ನೀವು ನಿಶ್ಚಿಂತೆಯಿಂದಿರಿ, ಖಾಜಾ ಸಾಹಿಬ್ ತಾಕೀತು ಮಾಡಿ ಹೊರಟು ಹೋದರು. (ಆದರೆ ಅವರಿಗೆ ಖಾತರಿಯಾಯಿತು ಮೌಲ್ವಿಗಳು ಚರ್ಚೆ ಮಾಡಲಾರರು) (ಹಯಾತೆ ತಯ್ಯಬಾ.)

ಅಬ್ದುಲ್ ಹಖ್ ಅವರ ತಕರಾರಿನ ಮೇಲೆ ಮುಬಾಹಲ ಏರ್ಪಡಿಸಲಾಗಿತ್ತು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಅಬ್ದುಲ್ ಹಖ್ ಹೆಚ್ಚಿನ ಒತ್ತಾಯಪಡಿಸಿದಾಗ ನಾನು ಅವರಿಗೆ ಬರೆದಿದ್ದೆ. ನಾನು ಯಾವುದೇ ಕಲಿಮ ಉಚ್ಚರಿಸುವ ಮುಸಲ್ಮಾನನೊಂದಿಗೆ ಮುಬಾಹಲ ಮಾಡಲು ಇಚ್ಛಿಸುವುದಿಲ್ಲ, ಅವರು ಅದಕ್ಕೆ ಉತ್ತರವಾಗಿ ಬರೆದರು. ನಾವು ನಿಮ್ಮ ಮೇಲೆ ಕುಫ್ರಿನ ಫತ್ವಾ (ಅವಿಶ್ವಾಸದ ಘೋಷಣೆ) ಹೊರಡಿಸಿದ ಮೇಲೆ ಈಗ ನಿಮ್ಮ ದೃಷ್ಟಿಯಲ್ಲಿ ನಾವು ಕಾಫಿರಾದೆವು (ಅವಿಶ್ವಾಸಿಗಳಾದೆವು) ಹಾಗಿರುವಾಗ ಮುಬಾಹಲ ಮಾಡಲು ಅಡ್ಡಿಯೇನಿದೆ. ಅಂತೂ ಅವನ ಹೆಚ್ಚಿನ ಒತ್ತಾಯದ ಮೇರೆಗೆ ನಾನು ಮುಬಾಹಲಕ್ಕಾಗಿ ಅಮೃತ್ಸರ ಬಂದಿರುವೆನು. ಅದಾಗ್ಯೂ ನನಗೆ ಮೌಲ್ವಿ ಅಬ್ದುಲ್ಲ ಸಾಹಿಬ್ ದಿವಂಗತರೊಂದಿಗೆ ಆತ್ಮೀಯ ಸಂಬಂಧವಿತ್ತು. ನಾನು ಅವರಿಗೆ ನನ್ನ ಈ ಸ್ಥಾನವಮಾನದನ್ವಯ ಅವರಿಗೆ ಅರ್‌ಹಾಸ್ (ಉತ್ತರಾಧಿಕಾರಿಯಾಗಿ) ಭಾವಿಸುತ್ತಿದ್ದೆ. ಯಾವ ರೀತಿ ಯಾಹ್ಯಾ(ಅ) ರವರು ಈಸಾ(ಅ) ರವರಿಗಿಂತ ಮುಂಚೆ ಆಗಮಿಸಿದ್ದರು. ಆದುದರಿಂದ ನನ್ನ ಮನಸ್ಸು ಅಬ್ದುಲ್ ಹಖ್‌ರವರ ಪ್ರತಿ ಯಾವ ರೀತಿಯ ಶಾಪವನ್ನು ಇಷ್ಟಪಡಲಿಲ್ಲ. ಬದಲಾಗಿ ನನ್ನ ದೃಷ್ಟಿಯಲ್ಲಿ ಅವರು ದಯೆಗೆ ಅರ್ಹರಾಗಿದ್ದರು. ಏಕೆಂದರೆ ಅವರು ಯಾರು ಕೆಟ್ಟದ್ದನ್ನು ಭಾವಿಸುತ್ತಿದ್ದಾರೆ ಎಂಬ ಅರಿವು ಹೊಂದಿರಲಿಲ್ಲ. ಅವರು ತನ್ನ ಭಾವನೆಯಲ್ಲಿ ಇಸ್ಲಾಂ ಧರ್ಮಗೋಸ್ಕರ ಸ್ವಾಭಿಮಾನ ಹೊಂದಿದವರಾಗಿದ್ದರು. ಆದರೆ ಇಸ್ಲಾಮಿನ ಪರವಾಗಿ ಅಲ್ಲಾಹನ ಇಂಗಿತವೇನು ಅವರು ಅರಿತಿರಲಿಲ್ಲ. ಅಂತೂ ಮುಬಾಹಲದಲ್ಲಿ ಅವರು ಬಯಸಿದ್ದನ್ನೇ ನಾನು ಹೇಳಿರುತ್ತೇನೆ. ಆದರೆ ನನ್ನ ಪ್ರಾರ್ಥನೆಯ ಗುರಿ ನನ್ನ ಆತ್ಮವೇ ಆಗಿತ್ತು. ನಾನು ಅಲ್ಲಾಹನ ಸನ್ನಿಧಿಯಲ್ಲಿ ಅದೇ ಬೇಡುತ್ತಿದ್ದೆ. "ನಾನು ಸುಳ್ಳುಗಾರನಾಗಿದ್ದ ಪಕ್ಷದಲ್ಲಿ ಸುಳ್ಳುಗಾರರ ರೀತಿಯಲ್ಲಿಯೇ ನನ್ನನ್ನು ನಾಶಪಡಿಸು. ನಾನು ಸತ್ಯವಂತನಾಗಿದ್ದಲ್ಲಿ ಅಲ್ಲಾಹನೇ ನನಗೆ ನೆರವು ನೀಡಲಿ ಸಹಕರಿಸಲಿ" (ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–251)

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ವಾಸ್ತವದಲ್ಲಿ ಆ ಮುಬಾಹಲ ನನ್ನ ಬೇಡಿಕೆಯ ಮೇರೆಗೆ ಆಗಿರಲಿಲ್ಲ. ಅಲ್ಲದೇ ಅದರಲ್ಲಿ ಅಬ್ದುಲ್ ಹಖ್ ಅವರ ಮೇಲೆ ಶಾಪ ಹಾಕುವ ಗುರಿ ಹೊಂದಿರಲಿಲ್ಲ. ಅದಾಗ್ಯೂ ನಾನು ಮುಬಾಹಲ ನಂತರ ಅತ್ತ ಗಮನಹರಿಸಿಲ್ಲ. ಈ ಮತು ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. ನಾನು ಎಂದಿಗೂ ಅಬ್ದುಲ್ ಹಖ್ ಅವರ ಮೇಲೆ ಶಾಪ ಹಾಕಲಿಲ್ಲ. ನನ್ನ ಮನಸ್ಸಿನ ಆದೇಶವನ್ನು ಅತ್ತ ಹರಿಸಲಿಲ್ಲ. ಆದರೆ ಈಗ ಈ ಅನರ್ಹ ಮೌಲ್ವಿಗಳ ದೌರ್ಜನ್ಯ ಮಿತಿಮೀರಿ ಹೋಗಿದೆ. ಆದುದರಿಂದ ಈಗ ನಾನು ದೈವಿಕ ತೀರ್ಪು ಪಡೆಯಲು ಸ್ವಯಂ ಕಾಫಿರ್ ಹೇಳುವವರಿಗೆ ಮುಬಾಹಲಕ್ಕೆ ಆಹ್ವಾನಿಸುತ್ತೇನೆ. ಏಕೆಂದರೆ ನಂತರ ಯಾವುದೇ ರೀತಿಯ ಸಂಶಯವಿರಬಾರದು. ನಾನು ಈ ಕಡ್ಡಾಯವಾದ ಶರತ್ತು ವಿಧಿಸಿರುತ್ತೇನೆ. ಮುಬಾಹಲಕ್ಕೆ ಕರೆ ನೀಡುವವರಲ್ಲಿ ಕನಿಷ್ಠ 10 ಜನರಾದರೂ ಮುಬಾಹಲಕ್ಕೆ ಸಿದ್ಧರಾಗಿರಬೇಕು. ಏಕೆಂದರೆ ಅದರಿಂದ ಅಲ್ಲಾಹನ ತೀರ್ಪು ಸ್ಪಷ್ಟವಾಗಲಿ, ಯಾವುದೆ ವಿವರಣೆಗೆ ಆಸ್ಪದ ಸಿಗದಂತಾಗಲಿ, ನಂತರ ಯಾರೂ ಸಹ ಹೀಗೆ ಹೇಳುವಂತಾಗಬಾರದು. ಕೇವಲ ಒಬ್ಬನೇ ಮನುಷ್ಯ ಎದುರಿಗಿದ್ದನು. ಅದು ಆಕಸ್ಮಿಕ ರೀತಿಯಲ್ಲಿ ಅವನ ಮೇಲೆ ಆಪತ್ತು ಬಂದೊದಗಿದೆ ಎಂದು. (ಝಮಿಮ ಅಂಜಾಮ್ ಆಥಮ್ ಸಂ 11 ಟಿಪ್ಪಣಿ ಪುಟ 305).

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ. ಎ (ರ) ಸೀರತುಲ್ ಮಹದಿ ಗ್ರಂಥದಲ್ಲಿ ಹೀಗೆ ಬರೆದರು. ಅದೇ ದಿನಗಳಲ್ಲಿ ಅವರು ಒಂದು ದಿನ ಅಂದರೆ 10 ಝುಲ್‌ಖಾದ 1310 ಹಿಜರಿ 27 ಮೇ 1893 ರಂದು ಮೌಲ್ವಿ ಅಬ್ದುಲ್ ಹಖ್ ಗಝ್ನವಿರೊಂದಿಗೆ ಅಮೃತ್ಸರದ ಈದ್ಗಾ ಮೈದಾನದಲ್ಲಿ ಮುಬಾಹಲ ಮಾಡಿದರು. ಇಲ್ಲಿ ಇದು ಸಹ ನೆನಪಿಡಬೇಕಾದ ವಿಷಯವಾಗಿದೆ. ಈ ಮುಬಾಹಲದಲ್ಲಿ ಯಾವ ಅವಧಿಯು ನಿಗದಿಪಡಿಸಲಾಗಿರಲಿಲ್ಲ. ಅಲ್ಲದೇ ಹಝ್ರತ್ ಸಾಹಿಬ್ ಎದುರು ಪಕ್ಷದವರಿಗೆ ಶಾಪ ಹಾಕಿರಲಿಲ್ಲ. ಬದಲಾಗಿ ಕೇವಲ ಇಷ್ಟೇ ದುಆ ಮಾಡಿದ್ದರು. ನಾನು ಸುಳ್ಳುಗಾರ ಅಥವಾ ಮಿಥ್ಯವಾದಿ ಆಗಿದ್ದರೆ ಅಲ್ಲಾಹನು ಅದರ ಶಾಪ ಮತ್ತು ಶಿಕ್ಷೆ ನನ್ನ ಮೇಲೆ ಅವತರಿಸಿಕೊಡಲಿ. ಅದು ಲೋಕಸೃಷ್ಟಿಯಾದಾಗಿನಿಂದ ಯಾವ ಕಾಫಿರ್ ದುಷ್ಟನ ಮೇಲೆ ಆಗದ ರೀತಿಯಲ್ಲಿ, ಅಂದ ಹಾಗೆ ಹಝ್ರತ್ ಸಾಹಿಬ್ ಮುಬಾಹಲಕ್ಕಿಂತ ಮುಂಚಿತವಾಗಿಯೇ ತನ್ನ ಜಾಹೀರಾತು ದಿನಾಂಕ 9 ಝುಲ್‌ಖದ 1310 ಹಿಜರಿ, 26 ಮೇ 1893 ರಲ್ಲಿ ಅದನ್ನು ಪ್ರಕಟಪಡಿಸಿದ್ದರು. ನಾನು ಕೇವಲ ತನ್ನ ಪೈಕಿ ಈ ರೀತಿಯ ದುಆ ಮಾಡಿಕೊಳ್ಳುವೆನು. ಅಂದ ಹಾಗೆ ಈ ಮುಬಾಹಲದ ನಂತರ ಅವರು ತನ್ನ ಗ್ರಂಥ ಅಂಜಾಮ ಆಥಮರಲ್ಲಿ ಪ್ರಕಟಪಡಿಸಿ ಹೇಳಿದರು. ಮತ್ತು ಅದರಲ್ಲಿ ಅವರು ಒಂದು ವರ್ಷದ ಅವಧಿಯು ನಿಗಧಿಪಡಿಸಿದರು ಮತ್ತು ಈ ಶರತ್ತು ಸಹ ವಿಧಿಸಿದರು. ಈ ಅವಧಿಯ ಒಳಗೆ ನಾನು ದೈವಿಕ ಶಿಕ್ಷೆಗೆ ಒಳಪಟ್ಟರೆ ಅಥವಾ ನನ್ನ ಎದುರಾಳಿಗಳಲ್ಲಿ ಮುಬಾಹಲ ಮಾಡುವವರ ಪೈಕಿ ಅವರು ಸಾವಿರಾರು ಸಂಖ್ಯೆಯಲ್ಲಿದದರೂ ಸಹ ಅವರಲ್ಲಿ ಒಬ್ಬ ವ್ಯಕ್ತಿ ಸಹ ಅಲ್ಲಾಹನ ಅಸಾಧಾರಣ ಶಿಕ್ಷೆಗೆ ಗುರಿಯಾಗದಿದ್ದರೆ ನಾನು ಸುಳ್ಳುಗಾರನಾದೆನು. ಅವರು ತುಂಬ ಸ್ವಾಭಿಮಾನದಿಂದ ಈ ಪದಗಳನ್ನು ಹೇಳಿ ಮೌಲ್ವಿಗಳಿಗೆ ಪ್ರೇರೇಪಿಸಿದರು. ಆದರೂ ಯಾರು ಮುಂದೆ ಬರಲಿಲ್ಲ (ಸೀರತುಲ್ ಮಹದಿ, ಭಾಗ–1 ಮತ್ತು 2, ಪುಟ–380)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ರವರ ಕಡೆಯಿಂದ ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಅವರಿಗೆ ನೀಡಿದ ಐದು ನೂರು ರೂಪಾಯಿಗಳ ಬಹುಮಾನದ ಪಂಥ್ವಾನ ಕುರಿತು ವಿವರಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

**ಪುರುಷನು ಮೈತುಂಬ ಬಟ್ಟೆ ಧರಿಸುವವನಾದರೆ well dressed ಅಂದುಕೊಳ್ಳುತ್ತಾನೆ. ಅಂದರೆ ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಆದರೆ ಹೆಣ್ಣು well dressed ಅಂದುಕೊಳ್ಳಬೇಕಾದರೆ ಅವಳು ಮಿನಿಸ್ಕರ್ಟ್ ಹಾಕಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ. ಸ್ತ್ರೀಯರು ತನ್ನನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದಾರೆ. ತನ್ನನ್ನು ಅಪಮಾನಿಸಿಕೊಳ್ಳುತ್ತಿದ್ದಾರೆ. ಅಹ್ಮದಿ ಹುಡುಗಿಯರು, ಸ್ತ್ರೀಯರು ತಮ್ಮ ಗೌರವ ಘನತೆ ತನ್ನ ಲಜ್ಜೆಯನ್ನು ಕಾಪಾಡಿಕೊಳ್ಳುವುದಲ್ಲಿಯೇ ಇದೆ ಎಂದು ಭಾವಿಸಬೇಕು. ಏಕೆಂದರೆ ಲಜ್ಜೆಯೇ ಕವಚರಕ್ಷೆಯಾಗಿದೆ. ಅದುವೇ ನಮ್ಮನ್ನು ಇತರರ ದೃಷ್ಟಿಯಿಂದ ರಕ್ಷಿಸುತ್ತದೆ.**

**ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರೊಡನೆ ಕೇಳಲಾದ ಪ್ರಶ್ನೆಗಳಿಗೆ ವಿವೇಕಯುತ ಉತ್ತರಗಳು.**

**(ಬದರ್ ಸಂಚಿಕೆ 33ರ ಉಳಿದ ಭಾಗ)**

**ಪ್ರಶ್ನೆ:** ಮಿತ್ರರೊಬ್ಬರು ಕೇಳಿದರು. ದಾರುಖುತನಿಯಲ್ಲಿ ಒಂದು ಹದೀಸಿದೆ. ಹುಝೂರ್(ಸ) ಈದ್ ನಮಾಝ್ ನಂತರ ಹೇಳಿದರು. ನಾವು ಖುತುಬ ನೀಡುವೆವು. ಆಲಿಸಬಯಸುವವರು ಕುಳಿತುಕೊಳ್ಳಬಹುದು, ಹೋಗಬಯಸುವವರು ಹೋಗಬಹುದು, ಈ ಹದೀಸು ಸರಿಯೇ? ಆಗ ಹುಝೂರ್ ಅನ್ವರ್ ತನ್ನ ಪತ್ರ ದಿನಾಂಕ 20 ಅಕ್ಟೋಬರ್ 2020 ರಲ್ಲಿ ಈ ಕೆಳಗಿನಂತೆ ಉತ್ತರ ನೀಡಿದರು.

**ಉತ್ತರ:** ಖುತುಬ ಈದ್ ಆಲಿಸುವ ರಿಯಾಯಿತಿಯ ಕುರಿತು ನೀವು ದಾರ್‌ಖುತುನಿಯ ಆಧಾರ ತಮ್ಮ ಪತ್ರದಲ್ಲಿ ನೀಡಿದ್ದೀರಿ. ಸುನನ್ ಅಬಿ ದಾವೂದ್‌ನಲ್ಲೂ ಆ ವರದಿ ಇದೆ.

ಈ ಮಾತು ಸರಿಯಾಗಿದೆ. ಹುಝೂರ್(ಸ) ಈದ್ ಖುತುಬ ಆಲಿಸಲು, ಜುಮುಅ ಖುತುಬ ಆಲಿಸುವಷ್ಟು ತಾಕೀತು, ಮೌನವಹಿಸಿ ಆಲಿಸಲು ಮಾಡಿರುವ ತಾಕೀತಿನಂತೆ ಆಗ್ರಹಪಡಿಸಲಿಲ್ಲ. ಅದನ್ನೇ ಆಧಾರವಾಗಿಟ್ಟುಕೊಂಡು ಉಲಮಾಅ, ತತ್ವವಾದಿಗಳು ಈದ್ ಖುತುಬ ಆಲಿಸುವುದು ಸುನ್ನತ್ ಮತ್ತು ಮುಸ್ತಹಬ್ ಎಂದಿದ್ದಾರೆ. ಆದರೆ ಅದರ ಜೊತೆಯಲ್ಲಿ ಈ ಮಾತು ನೆನಪಿಡಬೇಕು. ಹುಝೂರ್(ಸ) ಈದ್‌ಗೋಸ್ಕರ ಹೋಗಲು ಮತ್ತು ಮುಸ್ಲಿಮರ ದುಆಗಳಲ್ಲಿ ಪಾಲ್ಗೊಳ್ಳುವುದು ಪುಣ್ಯ ಮತ್ತು ಅನುಗ್ರಹದಾಯಕವಾಗಿದೆ ಎಂದರು. ಮತ್ತು ಅದನ್ನು ಎಷ್ಟರವುಟ್ಟಿಗೆ ತಾಕೀತುಪಡಿಸಿದರೆಂದರೆ, ಶಿರವಸ್ತ್ರ ಇಲ್ಲದ ಸ್ತ್ರೀಯೊಬ್ಬಳನ್ನು ಅನ್ಯ ಸಹೋದರಿಯೊಬ್ಬರಿಂದ ಬೇಡಿಕೊಂಡಾದರೂ ಪಡೆದು ಈದ್‌ಗೋಸ್ಕರ ಹೋಗಲು ಪ್ರೇರೇಪಿಸಿದ್ದಾರೆ. ಮುಟ್ಟಿನ ಅವಸ್ಥೆಯ ಸ್ತ್ರೀಯರನ್ನು ಸಹ ಈದ್‌ಗೋಸ್ಕರ ಹೋಗಲು ನಿರ್ದೇಶನ ನೀಡಿದ್ದಾರೆ. ಅವರು ನಮಾಝ್ ಸ್ಥಳದಿಂದ ಪ್ರತ್ಯೇಕವಾಗಿದ್ದು, ದುಆನಲ್ಲಿ ಪಾಲ್ಗೊಳ್ಳಲು ತಾಕೀತು ಮಾಡಿರುತ್ತಾರೆ.

**ಪ್ರಶ್ನೆ:** ಮಹಿಳೆಯೊಬ್ಬಳು ಪವಿತ್ರ ರಂಝಾನ್‌ನಲ್ಲಿ ಇಹ್‌ತಿಕಾಫ್ ಕುರಿತು ಪ್ರಸ್ತಾಪಿಸಿದರು. ಇಹ್‌ತಿಕಾಫ್ ಮನೆಯಲ್ಲಿ ಮಾಡಬಹುದೇ? ಮತ್ತು ಇಹ್‌ತಿಕಾಫ್ ಮೂರು ದಿನಗಳವರೆಗೆ ಆಗಬಹುದೇ?

ಹುಝೂರ್(ಅಬಿಅ) ತನ್ನ ಪತ್ರ ದಿನಾಂಕ: 9 ಆಗಸ್ಟ್ 2015 ರಲ್ಲಿ ಈ ಸಮಸ್ಯೆಗೆ ಈ ಕೆಳಗಿನ ಉತ್ತರ ನೀಡಿದರು.

**ಉತ್ತರ:** ಎಲ್ಲಿಯುವರೆಗೆ ರಂಝಾನ್‌ನಲ್ಲಿ ಅಧಿಕೃತ ನೆಲೆಯು ಇಹ್‌ತಿಕಾಫಿನ ಪ್ರಶ್ನೆ ಇದೆ. ಖುರ್‌ಆನ್ ಹದೀಸುಗಳಿಂದ ಸಾಬೀತಾಗಿದೆ. ಮನೆಯಲ್ಲಿ ಹಾಗೂ ಮೂರು ದಿನಗಳಿಗಾಗಿ ಆಗುವುದಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರ ಸುನ್ನತ್‌ನಿಂದ ಸಾಬೀತಾಗಿದೆ. ಹುಝೂರ್(ಸ) ಪವಿತ್ರ ರಂಝಾನ್‌ನಲ್ಲಿ ಕನಿಷ್ಠ ಹತ್ತು ದಿನಗಳಿಗಾಗಿ ಮಸೀದಿಯಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. ಅಂದ ಹಾಗೆ ಹದೀಸಿನಲ್ಲಿ ಬರುತ್ತದೆ.

ಅನುವಾದ: ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ತನ್ನ ವಫಾತ್ ಆಗುವವರೆಗೆ ರಂಝಾನ್‌ನ ಕೊನೆಯ ಹತ್ತು ದಿನಗಳಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. (ಸಹೀ ಬುಖಾರಿ, ಕಿತಾಬುಲ್ ಎತಿಕಾಫ್)

ಅದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ರಂಝಾನಿನ ಸಮಸ್ಯೆಗಳ ಬಗ್ಗೆ ವಿವರವಿದ್ದಲ್ಲಿ ಇತಿಕಾಫ್ ಬಗ್ಗೆಯೂ ವಿವರವಿದೆ.

**"ವಲಾ ತುಬಾಶಿರುಹುನ್ನ ವ ಅಂತುಮ್ ಆಕಿಫೂನ ಫಿಲ್ ಮಸಾಜಿದ್"** (ಅಲ್-ಬಖರ-188) ಮೊದಲನೆಯದಾಗಿ ರಂಝಾನ್‌ನಲ್ಲಿ ಪತಿ ಪತ್ನಿಯರಿಗೆ ಸಂಸರ್ಗ ಮಾಡುವ ಅನುಮತಿ ಇಲ್ಲ. ಎರಡನೆಯದಾಗಿ ಇಹ್‌ತಿಕಾಫ್ ಮಸೀದಿಯಲ್ಲೆ ಮಾಡುವ ಆಜ್ಞೆಯಿದೆ.

ಹದೀಸುಗಳಲ್ಲಿ ಇಹ್‌ತಿಕಾಫ್ ಮಸೀದಿಯಲ್ಲಿಯೇ ನಿರ್ವಹಿಸುವ ಉಲ್ಲೇಖಗಳಿವೆ. ಅಂದ ಹಾಗೆ ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ಅನುವಾದ: ಇಹ್‌ತಿಕಾಫ್ ಕುಳಿತವನು ರೋಗಿಯ ನೋಡಲು ಹೋಗಬಾರದು, ಶವಯಾತ್ರೆಯಲ್ಲಿ ಪಾಲ್ಗೊಳ್ಳಬಾರದು, ತನ್ನ ಪತ್ನಿಯೊಂದಿಗೆ ಸಂಸಾರ ಮಾಡಬಾರದು. ತೀರ ಅಗತ್ಯ ಕಾರಣ ಹೊರತುಪಡಿಸಿ ಮಸೀದಿಯಿಂದ ಹೊರಗೆ ಹೋಗಕೂಡದು. ಉಪವಾಸವಿಲ್ಲದೆ ಇಹ್‌ತಿಕಾಫ್ ಇರ್ವಹಿಸುವುದು ಸರಿಯಲ್ಲ, ಜುಮುಅ ಮಸೀದಿ ಅಲ್ಲದೇ ಬೇರೆ ಸ್ಥಳಗಳಲ್ಲಿ ಇಹ್‌ತಿಕಾಫ್ ಸರಿಯಲ್ಲ.(ಸುನನ್ ಅಬಿ ದಾಊದ್, ಕಿತಾಬುಸ್ಸೌಮ್)

ಅಂದ ಹಾಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ವಯ ಪವಿತ್ರ ರಂಝಾನ್‌ನಲ್ಲಿ ಇಹ್‌ತಿಕಾಫ್ ಕನಿಷ್ಠ ಹತ್ತು ದಿನಗಳದ್ದಾಗಿರುತ್ತದೆ ಮತ್ತು ಮಸೀದಿಯಲ್ಲಿಯೇ ಕುಳಿತುಕೊಳ್ಳಬಹುದಾಗಿದೆ.

ಹೌದು ರಂಝಾನ್ ಹೊರತುಪಡಿಸಿದ ಸಾಮಾನ್ಯ ದಿನಗಳಲ್ಲಿ ಪುಣ್ಯ ಪ್ರಾಪ್ತಿಗಾಗಿ ಯಾರಾದರೂ ತಮ್ಮ ಮನೆಯಲ್ಲಿ ಕೆಲ ದಿನಗಳರೆಗೆ ಇಹ್‌ತಿಕಾಫ್ ಮಾಡಬಯಸುವುದಾದರೆ ಅದಕ್ಕೆ ಅನುಮತಿ ಇದೆ. ಆ ಬಗ್ಗೆ ಎಲ್ಲಿಯೂ ನಿಷೇಧ ಕಂಡುಬಂದಿಲ್ಲ. ಅದಲ್ಲದೆ ಕೆಲ ಧಾರ್ಮಿಕ ತತ್ವಜ್ಞಾನಿಗಳು ಸ್ತ್ರೀಯರಿಗೆ ಮನೆಯಲ್ಲಿಯೇ ಇಹ್‌ತಿಕಾಫ್ ಮಾಡುವುದು ಉತ್ತಮ ಎಂದಿದ್ದಾರೆ. ಅಂದ ಹಾಗೆ ಫಿಖಾದ ಪ್ರಸಿದ್ಧ ಗ್ರಂಥವಾದ ಹದಾಯಿನಲ್ಲಿ ಬರೆಯಲಾಗಿದೆ.

ಅಂದರೆ ಸ್ತ್ರೀಯು ತನ್ನ ಮನೆಯಲ್ಲಿಯೇ ನಮಾಝ್ ನಿರ್ವಹಿಸುವ ಸ್ಥಳದಲ್ಲಿ ಇತಿಕಾಫ್ ಮಾಡಬಹುದಾಗಿದೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಕುರಿತು ಹೇಳುತ್ತಾರೆ. ಮಸೀದಿಯ ಹೊರತು ಇಹ್‌ತಿಕಾಫ್ ಮಾಡಬಹುದು. ಆದರೆ ಮಸೀದಿ ರೀತಿಯ ಪುಣ್ಯ ದೊರೆಯುವುದಿಲ್ಲ. ದಿನಪತ್ರಿಕೆ ಅಲ್-ಫಝ್ಲ್ 6 ಮಾರ್ಚ್ 1996).

**ಪ್ರಶ್ನೆ:** ಗುಲ್ಶನ್ ವಖ್ಫೆ ನೌ ಆಸ್ಟ್ರೇಲಿಯಾ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್ ಅನ್ವರ್ (ಅಬಿಅ) ಅವರೊಂದಿಗೆ ಪ್ರಶ್ನೆ ಕೇಳಿದಳು. ಬಾಲಕಿಯರಿಗೆ ಯಾವ ವಯಸ್ಸಿನಲ್ಲಿ ಸ್ಕಾರ್ಫ್ ತೆಗೆದುಕೊಳ್ಳಬೇಕು? ಹುಝೂರ್ ಅನ್ವರ್ ಅದಕ್ಕೆ ಉತ್ತರ ನೀಡುತ್ತಾ ಹೇಳಿದರು.

**ಉತ್ತರ:** ನೀವು ಐದು ವರ್ಷದವರಾದರೆ Leggings ಇಲ್ಲದ, ಅಂದರೆ ಅರ್ಧ ಪ್ರಮಾಣದ ಫ್ರಾಕ್ ಧರಿಸಬಾರದು. ನಿಮ್ಮ ಕಾಲುಗಳು ಮುಚ್ಚಿರಬೇಕು. ಏಕೆಂದರೆ ನಿಧಾನವಾಗಿ ನಮ್ಮ ವೇಷಭೂಷಣ (dress) ಪೂರ್ಣ ಪ್ರಮಾಣದ್ದಿರಬೇಕು ಎಂಬ ಭಾವನೆ ಬರಬೇಕಾಗಿದೆ. Sleeveless ಬಟ್ಟೆ ಧರಿಸಬಾರದು. ಮತ್ತೆ 6, 7 ವರ್ಷದವರಾದರೆ Leggings ಪೈಕಿ ಇನ್ನು ಹೆಚ್ಚಿನ ಜಾಗೃತೆ ವಹಿಸಬೇಕು. ಮತ್ತೆ ನೀವು ಹತ್ತು ವರ್ಷದವರಾದರೆ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಬೇಕು. ಮತ್ತೆ ಹನ್ನೊಂದು ವರ್ಷದವರಾದರೆ ಪೂರ್ಣರೂಪದಲ್ಲಿ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸ್ಕಾರ್ಫ್ ತೆಗೆದುಕೊಳ್ಳುವುದರಲ್ಲಿ ಅಡ್ಡಿಯೇನಿದೆ? ಚಳಿಗಾಲದಲ್ಲಿ ಇಲ್ಲೂ ಜನರು ಸ್ಕಾರ್ಫ್ ಹಾಕಿಕೊಳ್ಳುತ್ತಾರೆ. ಚಳಿ, ಆದರೆ ತನ್ನ ಕಿವಿಗಳನ್ನು ಮುಚ್ಚಿಕೊಳ್ಳುವುದಿಲ್ಲವೇ? ಅದು ಸ್ಕಾರ್ಫ್ ಆಗಿದೆ. ಅದೇ ರೀತಿಯ ಸ್ಕಾರ್ಫ್ ತೆಗೆದುಕೊಳ್ಳಿ. ಕೆಲ ಬಾಲಕಿಯರಿರುತ್ತಾರೆ. ಅವರು ಹತ್ತು ವರ್ಷದ ವಯಸ್ಸಿನಲ್ಲೂ ಸಣ್ಣವರಾಗಿಯೇ ಕಾಣುತ್ತಾರೆ, ಮತ್ತು ಕೆಲವರು ಹತ್ತು ವರ್ಷ ವಯಸ್ಸಿನಲ್ಲಿಯೇ ಹನ್ನೆರಡು ವರ್ಷದವರ ಹಾಗೆ ಕಾಣುತ್ತಾರೆ. ಅವರ ಉದ್ದ ಹೆಚ್ಚಾಗಿರುತ್ತದೆ. ಎಲ್ಲಾ ಹುಡುಗಿಯರು ನೋಡಿಕೊಳ್ಳಬೇಕು. ಅವರು ದೊಡ್ಡವರಾಗಿ ಕಂಡರೆ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸಣ್ಣ ವಯಸ್ಸಿನಲ್ಲಿಯೇ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಂಡರೆ ಮತ್ತು ನಾಚಿಕೆ ಆಗುವುದಿಲ್ಲ. ಇಲ್ಲವಾದರೆ ವಯಸ್ಸು ಪೂರ್ತಿ ನಾಚಿಕೆ ಪಡುತ್ತಿರಬೇಕಾಗುತ್ತದೆ. ನೀವು ಅಂದುಕೊಳ್ಳಬಹುದು. 12ನೇ ವಯಸ್ಸಿನಲ್ಲಿ, 13ನೇ ವಯಸ್ಸಿನಲ್ಲಿ, ಹದಿನಾಲ್ಕನೆ ವಯಸ್ಸಿನಲ್ಲಿ ಹೋಗಿ ಸ್ಕಾರ್ಫ್ ತೆಗೆದುಕೊಳ್ಳಬಹುದು ಎಂದು, ಮತ್ತೆ ಯೋಚಿಸುತ್ತಿದ್ದರೆ ನಿಮಗೆ ನಾಚಿಕೆ ಬರುವುದು, ಮತ್ತು ಅನಿಸಿಕೊಳ್ಳುವುದು, ಈಗ ಸ್ಕಾರ್ಫ್ ತೆಗೆದುಕೊಂಡರೆ ಹುಡುಗಿಯರು ತಮಾಷೆ ಮಾಡಬಹುದು ಎಂದು. ನಾನು ಸ್ಕಾರ್ಫ್ ತೆಗೆದುಕೊಂಡರೆ ನನ್ನ ಮೇಲೆ ನಗುವರು. ಆದುದರಿಂದ ಒಮ್ಮೊಮ್ಮೆ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಳ್ಳಬೇಕು. 7,8,9 ವರ್ಷದ ವಯಸ್ಸಿನಲ್ಲಿ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಪ್ರಾರಂಭಿಸಬೇಕು. ಹುಡುಗಿಯರ ಮುಂದೆಯೂ ತೆಗೆದುಕೊಳ್ಳಬೇಕು. ಆಗ ನಿಮ್ಮಲ್ಲಿ ನಾಚಿಕೆಯ ಭಾವನೆ ಇರದು. ನೀವು ದೊಡ್ಡವರಾಗಿ ಕಾಣುವಾಗ ಪೂರ್ಣ ಪ್ರಮಾಣದ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸರಿ ಅಲ್ವಾ, ತಿಳಿಯಿತಾ? ನಿಮಗೆ ಇಷ್ಟು ಸಾಕು ಮತ್ತು ದೊಡ್ಡ ಹುಡುಗಿಯರಿಗೆ ಇಷ್ಟು ಸಾಕು. ಪರದೆಯ ನಿಜವಾದ ಉದ್ದೇಶ ಲಜ್ಜೆ ಆಗಿದೆ. ಇದೀಗ ಯೂರೋಪಿಯನ್ ಇದ್ದಾರೆ. ಅಥವಾ Western Influence ಒಳಗೆ ಬರುತ್ತಾರೆ. ಹಳೆಯ ಕಾಲದಲ್ಲಿ ಅವರ ವಸ್ತ್ರಗಳು ಸಹ ಇಲ್ಲಿಯವರೆಗೆ ಇರುತ್ತಿದ್ದವು. (ಆ ಸಂದರ್ಭದಲ್ಲಿ ಹುಝೂರ್ ತನ್ನ ಕೈಗಳ ಪಂಜೆಯತನಕ ಸಂಕೇತಿಸಿ ಹೇಳಿದರು) ಉದ್ದದ ಮ್ಯಾಕ್ಸಿ, ಫ್ರಾಕ್ಸ್ ಇರುತ್ತಿದ್ದವು. ಈಗ ನೋಡಿ ಬೆತ್ತಲೆಯಾಗಿ ತಿರುಗುತ್ತಿದ್ದಾರೆ ಅಲ್ವಾ?

ಪ್ರಶ್ನೆಯಿರುವುದು ಇಲ್ಲಿ, ಪುರುಷರು Well dressed ಅಂದರೆ ಅವರು ಪೂರ್ಣ ಪ್ರಮಾಣದ ಬಟ್ಟೆ ಧರಿಸಿರಬೇಕು. ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಸ್ತ್ರೀಯರ Well dressed ಅಂದರೆ ಅವರು ಮಿನಿ ಸ್ಕರ್ಟ್ ಧರಿಸಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 26 August 2021, Issue No. 34

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 33ರ ವರದಿಯ ಉಳಿದ ಭಾಗ)**

**8 ಜೂನ್ 2015 ಸೋಮವಾರ:**

ಹುಝೂರ್ ಅನ್ವರ್ ಮುಂಜಾವಿನ್ 4:30 ಘಂಟೆಗೆ ಬಂದು ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಂತರ ವರದಿಗಳು ಹಾಗೂ ಪತ್ರಗಳನ್ನು ಪರಿಶೀಲಿಸಿ ಅದರ ಮೇಲೆ ಸೂಕ್ತ ನಿರ್ದೇಶನಗಳನ್ನು ಬರೆದರು.

**ಮೆಸೋಡೋನಿಯಾದಿಂದ ಬಂದ ತಂಡದ ಹುಝೂರ್ ಅನ್ವರ್ ಅವರೊಡನೆ ಭೇಟಿ:**

ಇಂದು ವಿವಿಧ ದೇಶಗಳಿಂದ ಬಂದ ಗುಂಪಿನೊಂದಿಗೆ ಭೇಟಿ ಮಾಡುವ ಕಾರ್ಯಕ್ರಮವಿತ್ತು. 10 ಗಂಟೆ 55 ನಿಮಿಷಕ್ಕೆ ಹುಝೂರ್ ಅನ್ವರ್ ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿದರು. ಮೆಸೆಡೋನಿಯಾದಿಂದ ಬಂದ ತಂಡವು ತನ್ನ ಎಲ್ಲ ಸದಸ್ಯರ ಜೊತೆಕೂಡಿ ತನ್ನ ಪ್ರೀತಿಯ ಇಮಾಮರನ್ನು ಭೇಟಿ ಮಾಡುವ ಸೌಭಾಗ್ಯ ಪಡೆದರು.

* ಮೆಸೆಡೋನಿಯಾದಿಂದ 62 ಜನರನ್ನೊಳಗೊಂಡ ಗುಂಪು ಜಲ್ಸ ಸಾಲಾನ ಜರ್ಮನಿಗೆ ಭಾಗವಹಿಸಲು ಬಂದಿದ್ದರು. ಆ ತಂಡದಲ್ಲಿ 14 ಜನ ಕ್ರೈಸ್ತರು, 27 ಜನ ಅಹ್ಮದಿಯೇತರ ಮುಸ್ಲಿಮರು ಮತ್ತು 21 ಅಹ್ಮದಿ ಬಾಂಧವರು ಪಾಲ್ಗೊಂಡಿದ್ದರು.

* ಹುಝೂರ್ ಅವರೆಲ್ಲರ ಕುಶಲೋಪರಿ ವಿಚಾರಿಸಿ ಆತ್ಮೀಯವಾಗಿ ಅತಿಥಿಗಳೊಡನೆ ಕೇಳಿದರು. ಜಲ್ಸದ ಬಗ್ಗೆ ನಿಮ್ಮ ಅಭಿಪ್ರಾಯ ಹೇಗಿದೆ. ಆಗ ಅತಿಥಿಯೊಬ್ಬರು (ಅವರು ಟಿ.ವಿ ಚಾನಲ್‌ನ ಪ್ರವರ್ತಕರಾಗಿದ್ದರು). ಹೇಳಿದರು, ಮೆಸೆಡೋನಿಯಾ ಪರವಾಗಿ ತಮಗೆ ಸಲಾಂ ಸಲ್ಲಿಸುವೆನು. ನಂತರ ಜಲ್ಸಾದ ಶುಭಾಶಯಗಳನ್ನು ಸಲ್ಲಿಸುತ್ತಾ ಹೇಳಿದರು. ಯಾವ ಸೌಹಾರ್ಧತೆ ಮತ್ತು ಸಮಾನತೆ ನಿಮ್ಮ ಜಮಾಅತಿನಲ್ಲಿ ಕಂಡಿರುವೆನೋ ಅದು ಎಲ್ಲೂ ಕಂಡು ಬರುತ್ತಿಲ್ಲ. ಜಲ್ಸದ ಎಲ್ಲ ವ್ಯವಸ್ಥೆಗಳು ತುಂಬ ಉತ್ತಮವಾಗಿದ್ದವು. ಎಲ್ಲ ಕಾರ್ಯ ಚಟುವಟಿಕೆಗಳು ಅಚ್ಚುಕಟ್ಟಾಗಿ ನಡೆಯುತ್ತಿತ್ತು.

ಪತ್ರಕರ್ತರಾದ ಅವರು ಪ್ರಶ್ನೆ ಕೇಳಿದರು. ಮಧ್ಯ ಪೂರ್ವ, ಸೀರಿಯಾ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ದೇಶಗಳಿಂದ ಸಾವಿರಾರು ವಲಸಿಗರು ಯೂನಾನ್ ಮತ್ತು ಮೆಸೆಡೋನಿಯಾ ದೇಶಗಳಿಗೆ ಹೋಗುತ್ತಿದ್ದಾರೆ. ಅಲ್ಲಿಂದ ಯೂರೋಪ್ ದೇಶಗಳಿಗೂ ಹೋಗುತ್ತಾರೆ. ಅವರಿಗೆ ಇಲ್ಲಿಯ ಸಂಸದರು ಸಹಕರಿಸುತ್ತಾರೆಯೇ?

* ಆಗ ಹುಝೂರ್(ಅಬಿಅ) ಹೇಳಿದರು. ನಮ್ಮ ಸದಸ್ಯರು ಸಹ ಹೋಗುತ್ತಾರೆ. ವಿವಿಧ Human Rights ಸಂಸ್ಥೆಗಳೊಂದಿನ ಸಂಪರ್ಕ ಮಾಡುತ್ತಾರೆ, ತನ್ನ ಸದಸ್ಯರಿಗೆ ಸ್ಪಂದಿಸುತ್ತಾರೆ. ಎಲ್ಲರಿಗೂ ಸಹಕರಿಸುವುದು ಈ ಸಂಸ್ಥೆಗಳ ಕರ್ತವ್ಯವಾಗಿದೆ.

ಹುಝೂರ್ ಅನ್ವರ್ ಹೇಳಿದರು. ನಮ್ಮ ಬಳಿ ಆಡಳಿತ (ಸಹಕಾರ) ಅಂತೂ ಇಲ್ಲ. ನೈತಿಕ ನೆಲೆಯಲ್ಲಿ ಸರಕಾರದ ಕೆಲ ನೇತಾರ ಗಮನ ಸೆಳೆಯುತ್ತಿರುತ್ತೇವೆ.

ಆದರೆ ಯಾವುದೇ ವೇದಿಕೆಯನ್ನು ಮಾಡಿಕೊಂಡು ಅವರು ಹಕ್ಕುಗಳಿಗಾಗಿ ಹೋರಾಡುವ ಪದ್ಧತಿ ನಮ್ಮಲ್ಲಿಲ್ಲ.

* ಅದೇ ಪತ್ರಕರ್ತರು ಪ್ರಶ್ನೆ ಮಾಡಿದರು. ಹುಝೂರ್ ತಮ್ಮ ನಿನ್ನೆಯ ಭಾಷಣದಲ್ಲಿ, ಯೂರೋಪಿನಲ್ಲಿರುವ ಯುವಕರು ಯೂರೋಪಿನ ಸಂಸ್ಕೃತಿಯಲ್ಲಿ ಸಂಧಿಸಿಕೊಳ್ಳಬಾರದು ಎಂದು ಹೇಳುತ್ತಿದ್ದರು. ಅದರ ತಾತ್ಪರ್ಯವೇನು?

ಆಗ ಹುಝೂರ್ ಹೇಳಿದರು. ನಾನು ಹೇಳಿದ್ದು, ಅವರಿಗೆ ಇಸ್ಲಾಮಿನ ಆದರ್ಶ ಶಿಕ್ಷಣ ಬಗ್ಗೆ ವಿವರ ನೀಡಬೇಕಾಗಿದೆ ಎಂದು. ಆದುದರಿಂದ ಇಸ್ಲಾಮಿನೆಡೆ ಅವರ ಗಮನ ಸೆಳೆಯಲ್ಪಡುವ ಮಾದರಿಯಲ್ಲಿ ನಾವು ಇರಬೇಕಾಗಿದೆ ಎಂದಿದ್ದೆ. ಇಸ್ಲಾಮಿ ಲೋಕಕ್ಕೂ ಹಾಗೂ ಅಮುಸ್ಲಿಮರಿಗೂ, ನಾವು ಇಸ್ಲಾಮಿನ ನಿಜವಾದ ಶಿಕ್ಷಣದ ಬಗ್ಗೆ ವಿವರ ನೀಡಬೇಕಾಗಿದೆ.

ಹುಝೂರ್ ಹೇಳಿದರು. ನಾನು ಈ ಮೊದಲು ಸಹ ವಲಸೆ ಬಂದವರಿಗೆ ಹೇಳಿದ್ದೇನೆ. ಯಾವ ದೇಶದಲ್ಲಿ ಹೋಗಿ ನೆಲೆಸಬೇಕಾಗಿದೆ ಮತ್ತು ನಾಗರಿಕತೆ ಪಡೆಯಬೇಕಾಗಿದೆಯೋ ಮೊದಲು ಆ ದೇಶದ ಸೇವೆ ಮಾಡುವುದು ಅವಶ್ಯಕವಾಗಿದೆ. ಅತಿ ಪ್ರಮಾಣೀಕತೆಯಿಂದ ಆ ದೇಶದ ಪ್ರಗತಿಗಾಗಿ ಪ್ರಯತ್ನಶೀಲರಾಗುವುದು ಅವರ ಕರ್ತವ್ಯವಾಗಿದೆ.

* ಅತಿಥಿಯೋರ್ವರು ಪ್ರಶ್ನೆ ಕೇಳಿದರು. ಅಹ್ಮದಿ ಮುಸ್ಲಿಮರಲ್ಲಿ ಮತ್ತು ಇತರ ಮುಸ್ಲಿಮರಲ್ಲಿ ಏನು ವ್ಯತ್ಯಾಸವಿದೆ?

* ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಅಹ್ಮದಿ ಮುಸ್ಲಿಮರು ಹಝ್ರತ್ ರಸೂಲುಲ್ಲಾಹ್ (ಸ) ರವರು 1400 ವರ್ಷಗಳ ಹಿಂದೆ ಭವಿಷ್ಯವಾಣಿ ನುಡಿದಿದ್ದರು. ಮಸೀಹ ಮಹದಿಯ ಆಗಮನವಾದಾಗ ಅವರನ್ನು ಸವೀಕರಿಸಬೇಕು. ಮಂಜುಗಡ್ಡೆಯ ಶಿಲೆಯ ಮೇಲಿಂದ ಹೋಗಬೇಕಾದರೂ ಹೋಗಿ ಅವರನ್ನು ನನ್ನ ಸಲಾಂ ತಲುಪಿಸಬೇಕು. ಅಂದ ಹಾಗೆ ಭವಿಷ್ಯವಾಣಿಗೆ ಅನುಗುಣವಾಗಿ ಆ ವಾಗ್ದತ್ತ ಮಸೀಹ ಮತ್ತು ಮಹದಿ (ಅ) ಆಗಮಿಸಿದರು ಮತ್ತು ನಾವು ಅವರನ್ನು ಸ್ವೀಕರಿಸಿದೆವು.

* ಹಝ್ರತ್ ಈಸಾ ಆಕಾಶದಲ್ಲಿಲ್ಲ. ಆಕಾಶದಿಂದ ಯಾರಿಗೂ ಬರಲಿಕ್ಕಿರಲಿಲ್ಲ. ಎಂದು ನಾವು ದೃಢವಾಗಿ ನಂಬುತ್ತೇವೆ ಬದಲು ಮುಸ್ಲಿಮರಿಂದಲೇ ವ್ಯಕ್ತಿಯೊಬ್ಬರು ಮಸೀಹರ ಗುಣಗಳೊಂದಿಗೆ ನಿಲ್ಲಬೇಕಾಗಿತ್ತು. ಅವರ ಸಾದೃಶ್ಯ ರೂಪದಲ್ಲಿ ಬರಬೇಕಾಗಿತ್ತು. ಮತ್ತು ಮಸೀಹರಾಗಿ ಬಂದವರೆ ಮಹದಿಯರಾಗಬೇಕಿತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಹದೀಸಿನಿನಂದ ಇದು ಸಾಬೀತಾಗಿದೆ. ಮಸೀಹ ಮತ್ತು ಮಹದಿ ಒಂದೇ ಅಸ್ತಿತ್ವವಾಗಿದೆ ಎಂದು. ಅಲ್ಲದೇ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ಮಸೀಹ ಮಹದಿ ಆಗಮಿಸುವ ಕುರಿತು ಕೆಲವು ಕುರುಹುಗಳು, ದೃಷ್ಟಾಂತಗಳು ಸೂಚಿಸಿದ್ದರು. ಅದರಲ್ಲಿ ಸೂರ್ಯ, ಚಂದ್ರಗ್ರಹಣದ ದೃಷ್ಟಾಂತವು ಒಂದಾಗಿತ್ತು. ಅದೇ ರೀತಿ ಇತರ ಹಲವು ದೃಷ್ಟಾಂತಗಳಿದ್ದವು. ಇವೆಲ್ಲ ಪೂರ್ಣಗೊಳ್ಳುವುದನ್ನು ನೋಡಿ ನಾವು ಆ ಮಹದಿ ಮಸೀಹರನ್ನು ಸ್ವೀಕರಿಸಿದೆವು. ಅದಾಗ್ಯೂ ಇತರರು ಹೇಳುವುದು ಮಸೀಹರು ಇನ್ನು ಬರಲಿಲ್ಲ. ಅವರು ಆಕಾಶದಿಂದ ಅವತರಿಸಬೇಕಾಗಿದೆ, ಹೀಗೆ ಅವರು ಮಸೀಹರ ನಿರೀಕ್ಷೆಯಲ್ಲಿದ್ದಾರೆ. ನಾನು ಹೇಳುವುದು ಅವರು ಬಂದಾಗಿದೆ. ಅವರ ಆಗಮನದ ಜೊತೆಯಲ್ಲಿಯೇ ಎಲ್ಲ ದೃಷ್ಟಾಂತಗಳು, ಕುರುಹುಗಳು ಪೂರ್ಣಗೊಂಡಿವೆ. ಅವು ಅವರ ಆಗಮನಕ್ಕೆ ಸಂಬಂಧಿಸಿದ್ದಾಗಿದ್ದವು. ಅವರ ಸತ್ಯತೆಗೆ ಸಾಕ್ಷಿಯಾಗಿದ್ದವು.

ಹುಝೂರ್ ಹೇಳಿದರು. ನಾವು ಈ ಮಾತಿನ ಮೇಲೂ ದೃಢವಾದ ವಿಶ್ವಾಸ ಹೊಂದಿದ್ದೇನೆ. ಹಝ್ರತ್ ರಸೂಲುಲ್ಲಾಹ್(ಸ) ಖಾತಮುನ್ನಬಿಯೀನ್ ಆಗಿದ್ದಾರೆ. ಪವಿತ್ರ ಖುರ್‌ಆನ್ ಅಂತಿಮ ಗ್ರಂಥವಾಗಿದೆ. ಪವಿತ್ರ ಖುರ್‌ಆನ್ ನಂತರ ಯಾವ ಶರೀಅತ್ (ಧರ್ಮ ಸಂಹಿತೆ) ಇಲ್ಲ. ಆಗಮಿಸಬೇಕಾದ ಮಸೀಹ್ ಮಹದಿ ಪವಿತ್ರ ಖುರ್‌ಆನ್‌ನ ಆಜ್ಞೆಗಳನ್ನು ಮತ್ತು ಖುರ್‌ಆನ್‌ನ ಶಿಕ್ಷಣವನ್ನೇ ಮುಂದುವರಿಸುವನು ಮತ್ತು ಪವಿತ್ರ ಖುರ್‌ಆನ್‌ನ ಶರೀಅತ್ ಮೇಲೆಯೇ ಅವರು ನಡೆದುಕೊಳ್ಳುವರು ಮತ್ತು ನಡೆಸುವರು.

* ಅತಿಥಿ ಒಬ್ಬರು ಹೇಳಿದರು. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿರುತ್ತೇನೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಲಾಗುತ್ತಿದೆ ಎಂದು ನಾನು ನಿರೀಕ್ಷಿಸಿರಲಿಲ್ಲ. ಎಲ್ಲ ವ್ಯವಸ್ಥೆಗಳು ತುಂಬ ಉತ್ತಮವಾಗಿದ್ದು, ನಮ್ಮ ಅವಶ್ಯಕತೆಗಳೆಲ್ಲ ತಕ್ಷಣ ಪೂರೈಸಲಾಗುತ್ತಿತ್ತು. ನಾವು ಇಲ್ಲಿ ಮೂರು ದಿವಸ ಕಳೆದೆವು. ನಿಮ್ಮ ರೀತಿ ನೀತಿ ವ್ಯವಸ್ಥೆಗಳನ್ನು ನೋಡಿ ಬೆರಗಾದೆವು. ನಿಮ್ಮ ಎಲ್ಲಾ ವ್ಯವಸ್ತೆಗಳು ಅಚ್ಚರಿದಾಯಕವಾಗಿದೆ.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.